
ಸಂಪುಟ 23 ಸಂಚಿಕೆ 47
ನವೆಂಬರ್ 25, 2001 ಬೆಲೆ ರೂ. 3.00

ವಿಶ್ವರಂಗ

ದುಡಿವ ಜನರ ಪ್ರಾಣಮಿತ್ರ




ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ದೋಹದಲ್ಲಾದ ದ್ರೋಹ

POTO ಎಂಬ ಕರಾಳ ಮಸೂದೆ



ಅಭಿವೃದ್ಧಿ ಮತ್ತು ಮುಖ್ಯಮಂತ್ರಿಗಳ ಬಿಸಿಯೂಟ



ಅಕ್ಕ ನಾಟಕೋತ್ಸವ

ಅಕ್ಟೋಬರ್ ಮಹಾನ್ ಕ್ರಾಂತಿ ತೋರಿದ ಹಾದಿ

ಪಕ್ಷದ 13ನೇ ಮಹಾಧಿವೇಶನ

ಇದು ನಮಗೆ ಅತ್ಯಂತ ದೊಡ್ಡ ಪಂಚಾಯತ್ ವಿಜಯವಾದರೂ ರಂಗದೊಳಗಿನ ಬಿಕ್ಕಟ್ಟು ಚಿಂತೆಗೆ ಕಾರಣವಾಗಿತ್ತು. ಪಂಚಾಯತಿಗಳ ಮೂಲಕ ವ್ಯಾಪಕ ಅಭಿವೃದ್ಧಿ ಕಾರ್ಯಗಳಿಗಾಗಿ ಕೆಲಸ ಮಾಡಲು ಹಾಗೂ ಜನರೇ ಅಂತಿಮ ನ್ಯಾಯಾಧೀಶರಾಗಿರುವುದರಿಂದ ಅವರ ಜತೆ ಸಂವಾದ ನಡೆಸಲು ನಾವು ನಿರ್ಧರಿಸಿದೆವು.

ಭಾರತ ಬಂದ್

1998 ಮಾರ್ಚ್ 15ರ ಭಾರತ್ ಬಂದ್ ಐತಿಹಾಸಿಕವಾದುದು. ರಾಜೀವಗಾಂಧಿ ಸರಕಾರದ ಜನವಿರೋಧಿ ನೀತಿಗಳಿಂದ ಜನರು ಬೇಸತ್ತಿದ್ದರು, ಕೋಮುವಾದ ಬೆಳೆದು ನಿಂತಿತ್ತು. ಹಣದುಬ್ಬರ ದರ ಹಾಗೂ ಜೀವನಾವಶ್ಯಕ ಸಾಮಗ್ರಿಗಳ ಬೆಲೆ ದಿನೇ ದಿನೇ ಏರುತ್ತಿದ್ದುದು ದೇಶವನ್ನು ರೊಚ್ಚಿಗೆಬ್ಬಿಸಿತ್ತು. ಈ ಸನ್ನಿವೇಶದ ಫಲವೇ 'ಭಾರತ ಬಂದ್' ತಮಿಳುನಾಡು ಒಂದರಲ್ಲೇ 20 ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ದೇಶಾದ್ಯಂತ ಬಂದ್ ಬೆಂಬಲಿಗರ ಮೇಲೆ ಹಲ್ಲೆ ನಡೆಯಿತು. ಆದರೆ ಆ ವೇಳೆಗೆ ರಾಜೀವ್ ವಿರೋಧಿ ಘೋಷಣೆ ಒಂದು ರಾಷ್ಟ್ರೀಯ ಮಂತ್ರವಾಗಿ ಬಿಟ್ಟಿತ್ತು.

ಬೆಂಗಾಲ್ ಲ್ಯಾಂಪ್ಸ್ ಅಪಪ್ರಚಾರ

ರಾಜ್ಯದ ಲೋಕೋಪಯೋಗಿ ಖಾತೆ ಸಚಿವ ಜತಿನ್ ಚಕ್ರವರ್ತಿ 1988 ಅಕ್ಟೋಬರ್ 28 ರಂದು ರಾಜಿನಾಮೆ ನೀಡಿದರು. ರಾಜೀವಗಾಂಧಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಇಡೀ ದೇಶ ಒಗ್ಗಟ್ಟಿನಿಂದ ಪ್ರತಿಭಟನೆಯ ದನಿ ಎತ್ತುತ್ತಿದ್ದಾಗ ಚಕ್ರವರ್ತಿ ನನ್ನ ವಿರುದ್ಧ ಅಪಪ್ರಚಾರ ಆರಂಭಿಸಿದರು. ಬಿಕ್ಕಟ್ಟು, ಭಿನ್ನಾಭಿಪ್ರಾಯಗಳು ಇರುತ್ತವೆ ಎಂದು ನಾವೆಲ್ಲರೂ ಒಪ್ಪುತ್ತೇವೆ. ಆದರೆ ಅವನ್ನು ಪರಿಹರಿಸಿಕೊಳ್ಳಲು ಮಾರ್ಗವೂ ಇದೆ. ನಾವು ಒಂದೇ ಸರಕಾರದಲ್ಲಿ ಇದ್ದವರು ಯಾವುದೇ ವಿಷಯವನ್ನು ಕ್ಯಾಬಿನೆಟ್ ಸಭೆಗಳಲ್ಲಿ ಚರ್ಚಿಸಬಹುದಾಗಿತ್ತು. ನಮ್ಮ ಒಗ್ಗಟ್ಟು ಇಡೀ ದೇಶಕ್ಕೆ ಮಾದರಿ. ಆದರೆ ಜತಿನ್ ಬಾಬು ಬೇರೆಯೇ ದಾರಿ ಹಿಡಿದರು. ಅವರು ನೇರವಾಗಿ ಪತ್ರಿಕೆಗಳ ಮೊರೆ ಹೊಕ್ಕರು. ಅದರಲ್ಲೂ ಯಾವಾಗಲೂ ನಮ್ಮ ವಿರುದ್ಧ ಕತ್ತಿಮಸೆಯುವವರ ಬಳಿ ಅವರು ಹೋದರು. ಬೆಂಗಾಲ್ ಲ್ಯಾಂಪ್ಸ್‌ನಿಂದ ಸಗಟು ಖರೀದಿ ಮಾಡುವಂತೆ, ಆದರೆ ಅದನ್ನು ಕಡತಗಳಲ್ಲಿ ದಾಖಲಿಸದಂತೆ ನಾನು ಅವರಿಗೆ ಹೇಳಿದ್ದು ಹೌದು. ಆದರೆ ಚಕ್ರವರ್ತಿ 'ನನ್ನ ನೆನಪು ಸರಿಯಿರುವುದಾದರೆ' ಎಂದು ಹೇಳುವ ಮೂಲಕ ತನ್ನ ಆರೋಪವನ್ನು ಪರಿಮಿತಗೊಳಿಸಿದರು. ಇದು ವಿಚಿತ್ರವಾಗಿದೆ.

ಒಬ್ಬರ ನೆನಪಿಡುವ ಸಾಮರ್ಥ್ಯವೇ ಇಲ್ಲಿ ಆರೋಪಕ್ಕೆ ಏಕೈಕ ಆಧಾರವಾಗಿತ್ತು.!

ರಾಜ್ಯ ವಿದ್ಯುತ್ ಇಲಾಖೆಗಾಗಿ ಎಲ್ಲಾ ಬಲ್ಬ್‌ಗಳನ್ನು ಖರೀದಿಸುವಂತೆ ನಾನು (ಬಸು) ತಮಗೆ (ಜತಿನ್) ಹೇಳಿರುವುದಾಗಿ ಜತಿನ್ ಬಾಬು ಬೆಂಗಾಲ್ ಲ್ಯಾಂಪ್ಸ್‌ನ ಆಡಳಿತ ನಿರ್ದೇಶಕರಿಗೆ ಪತ್ರ ಬರೆದರು. ಬಲ್ಬ್ ಖರೀದಿಗೆ ಸಂಬಂಧಿಸಿ ಇತರ ರಾಜ್ಯಗಳು ಸ್ಥಳೀಯ ಕಂಪೆನಿಗಳಿಗೆ ಒಲವು ತೋರಿಸುತ್ತಿರುವುದರಿಂದ ತೀವ್ರ ಸ್ಪರ್ಧೆಯನ್ನು ಎದುರಿಸುತ್ತಿರುವುದಾಗಿ 1978ರಲ್ಲಿ ಬೆಂಗಾಲ್ ಲ್ಯಾಂಪ್ಸ್ ರಾಜ್ಯ ಸರಕಾರಕ್ಕೆ ಪತ್ರ ಬರೆದಿತ್ತು. ಈ ವಿಚಾರವಾಗಿ ನಾನು ದೀರ್ಘವಾಗಿ ಚರ್ಚಿಸಿ ವಾಣಿಜ್ಯ ಮತ್ತು ಕೈಗಾರಿಕೆ ಖಾತೆಗೆ ಒಂದು ಪತ್ರ ರವಾನಿಸಿದೆ. ಈ ವಿಷಯವನ್ನು ಪರಿಶೀಲಿಸಿ ಕಂಪೆನಿಯ ನಿಲುವು ಹಾಗೂ ಮನವಿಯ ಸಿಂಧುತ್ವವನ್ನು ಪರಿಶೀಲಿಸುವಂತೆ ನಾನು ಅದರಲ್ಲಿ ಸೂಚಿಸಿದ್ದೆ. ಪ್ರಕರಣದ ಅರ್ಹತೆಗಳನ್ನು ಹಾಗೂ ಬೆಂಗಾಲ್ ಲ್ಯಾಂಪ್ಸ್‌ನ ಪ್ರತಿಸ್ಪರ್ಧಿಗಳು ಈ ರಾಜ್ಯದಲ್ಲಿ ಫ್ಯಾಕ್ಟರಿ ಹೊಂದಿದ್ದಾರೆಯೇ ಎನ್ನುವುದನ್ನು ಪರಿಶೀಲಿಸಬೇಕು ಎಂದೂ ನಾನೂ ತಿಳಿಸಿದ್ದೆ. ಬೆಂಗಾಲ್ ಲ್ಯಾಂಪ್ಸ್‌ಗೆ ಯಾವುದೇ ಪಕ್ಷಪಾತ ತೋರಬಾರದು ಎಂದು ಕೂಡ ನಾನು ಪಿಡಬ್ಲ್ಯೂಡಿ ಸಚಿವರಿಗೆ ಹೇಳಿದ್ದೆ. ಇದಕ್ಕೆ ಪ್ರತಿಕ್ರಿಯಿಸಿದ ಜತಿನ್ ಬಾಬು ಗದ್ದಲವನ್ನೇ ಎಬ್ಬಿಸಿದರು. ಅವರ ತಲೆ ಸರಿಯಾದ ಜಾಗದಲ್ಲಿ ಇದೆಯೇ ಎಂಬ ಗಂಭೀರ ಚಿಂತೆ ನನ್ನದಾಯಿತು. ಅವರು ನನ್ನ ಮಗ ಚಂದನ್‌ನನ್ನು ಕೂಡ ವಿವಾದದಲ್ಲಿ ಎಳೆದರು. ಚಂದನ್ 1975ರಲ್ಲಿ ಕಂಪೆನಿಯ ಆಡಳಿತ ಶಿಶಿಕ್ಷು (management trainee) ಆಗಿ ಸೇರಿದ್ದ ಮೂರು ವರ್ಷಗಳ ನಂತರ ಆತ ಬಿಟ್ಟಿದ್ದ. ಯಾವ ರೀತಿಯಲ್ಲೂ ಆತ ಬೆಂಗಾಲ್ ಲ್ಯಾಂಡ್ಸ್‌ಗೆ ಸಂಬಂಧಪಟ್ಟಿರಲು ಸಾಧ್ಯವೇ ಇರಲಿಲ್ಲ. ಆದರೆ ಜನೆನ್ ಬಾಬು ಹಠಮಾರಿತನವನ್ನು ಬಿಡಲಿಲ್ಲ. ಇದಕ್ಕೆ ಅವರು ಭಾರಿ ಬೆಲೆ ತೆರಬೇಕಾಯಿತು. ಅವರು ಸಚಿವ ಸ್ಥಾನವನ್ನು ಕಳೆದುಕೊಂಡರು, ಅಂತಿಮವಾಗಿ ಅವರದೇ ಪಕ್ಷವಾದ ಆರ್.ಎಸ್.ಪಿ ಯಿಂದ ಉಚ್ಛಾಟನೆಗೊಂಡರು.

ಬಕ್ರೇಶ್ವರ ವಿದ್ಯುತ್ ಯೋಜನೆ

ಕೇಂದ್ರ ಸರಕಾರದ ನಿರಂತರ ಉದಾಸೀನದ ಹಿನ್ನೆಲೆಯಲ್ಲಿ ಬಕ್ರೇಶ್ವರ ವಿದ್ಯುತ್ ಯೋಜನೆ ಪಶ್ಚಿಮ ಬಂಗಾಳ ಸ್ವಾಭಿಮಾನದ ಸಂಕೇತವಾಯಿತು. ಬಂಗಾಳದ ಜನರು ನಮ್ಮನ್ನು ಆಯ್ಕೆ ಮಾಡಿರುವುದರಿಂದ ಈ ಯೋಜನೆ ರಾಜ್ಯದಲ್ಲಿ ತಲೆಎತ್ತಬಾರದು ಎಂಬುದು ಕೇಂದ್ರದ ಹುನ್ನಾರವಾಗಿತ್ತು. ನಾವು ಬೇಜವಾಬ್ದಾರಿಯಿಂದ ವರ್ತಿಸುವಂತಿರಲಿಲ್ಲ. ಹಾಗೂ ಅವಿವೇಕದ ಹಿಂಸಾ ಕೃತ್ಯಗಳಲ್ಲಿ ತೊಡಗುವುದೂ ಸರಿಯಲ್ಲ. ಬದಲು ಜನತೆಯ ನೆರವಿನಿಂದ ನಾವು ಒಂದು ರಾಜಕೀಯ ಚಳವಳಿಯನ್ನು ಸಂಘಟಿಸಿದೆವು. ಒಂದು ಅಭಿವೃದ್ಧಿ ಯೋಜನೆಗಾಗಿ ಚಳುವಳಿಯ ಅಗತ್ಯವೇನಿದೆ ಎಂಬ ಪ್ರಶ್ನೆ ಬಹಳ ಜನರಲ್ಲಿ ಉದ್ಭವಿಸಬಹುದು. ಅದಕ್ಕೆ ಕೇಂದ್ರ ಸರಕಾರವೇ ವಿವರಣೆ ನೀಡಬೇಕು.

ಕೇಂದ್ರ ವಿದ್ಯುತ್ ಪ್ರಾಧಿಕಾರ 1985ರಲ್ಲಿ ಬಕ್ರೇಶ್ವರ ಯೋಜನೆಯನ್ನು ಒಂದು ರಾಜ್ಯ ಯೋಜನೆಯೆಂದು ಗುರುತಿಸಿತ್ತು ಹಾಗೂ ಯೋಜನೆ ಆಯೋಗ ಅದನ್ನು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿತ್ತು. 1986 ಮೇ 18 ರಂದು ಕೊಲ್ಕತ್ತದಲ್ಲಿ ಪ್ರಧಾನಿ ನನ್ನನ್ನು ಭೇಟಿಯಾಗಿ ಮೂರು ತಿಂಗಳಲ್ಲಿ ಯೋಜನೆಯನ್ನು ಮಂಜೂರು ಮಾಡುವುದಾಗಿ ಆಶ್ವಾಸನೆ ನೀಡಿದರು. ಆದರೆ ಕೇಂದ್ರ ವಿದ್ಯುತ್ ಸಚಿವರು 1987 ಅಕ್ಟೋಬರ್ 29 ರಂದು ನನಗೆ ಒಂದು ಟೆಲೆಕ್ಸ್ ಸಂದೇಶ ಕಳಿಸಿದರು. ಯೋಜನೆಯನ್ನು ಕೇಂದ್ರ ಸರಕಾರಕ್ಕೆ ಹಸ್ತಾಂತರಿಸಿದರೆ ಮಾತ್ರ ಸಾಲ ನೀಡುವುದಾಗಿ ಸೋವಿಯತ್ ಒಕ್ಕೂಟ ಹೇಳಿದೆ. ಎಂದು ಅದರಲ್ಲಿ ತಿಳಿಸಲಾಗಿತ್ತು. ಅದಾದ ಕೆಲ ದಿನಗಳಲ್ಲಿ ಕಲ್ಕತ್ತದಲ್ಲಿ ನನ್ನನ್ನು ಭೇಟಿ ಮಾಡಿದ ಸೋವಿಯತ್ ರಾಯಭಾರಿ ಇದು ನಿಜವಲ್ಲ ತಮ್ಮ ದೇಶ ಅಂಥ ಯಾವುದೇ ಷರತ್ತನ್ನು ಹಾಕಿಲ್ಲ ಎಂದು ವಿವರಿಸಿದರು.

1988 ಜನವರಿ 18 ರಂದು ಕೇಂದ್ರ ವಿದ್ಯುತ್ ಸಚಿವರಿಗೆ ಹಾಗೂ ಏಪ್ರಿಲ್ 8 ರಂದು ಮತ್ತೆ ಪ್ರಧಾನಿಗೆ ಪತ್ರ ಬರೆದು ಈ ಯೋನೆ ಕೇಂದ್ರಕ್ಕೆ ಹೋಗಬಾರದು ಎಂದು ತಿಳಿಸಿದೆ. ಒಂದು ವೇಳೆ ಯೋಜನೆಗೆ ಸೋವಿಯತ್ ಸಾಲ ನಿರಾಕರಿಸಿದರೆ ಅದು ಬಂಗಾಳಕ್ಕೆ ದೊಡ್ಡ ಅನ್ಯಾಯವಾಗುತ್ತದೆ ಎಂದೂ ನಾನು ಹೇಳಿದೆ. ನಮ್ಮನ್ನು ಕಡೆಗಣಿಸಿದರೆ ನಾವೇ ಸ್ವಂತ ಹಣದಿಂದ ಯೋಜನೆ ಬಗ್ಗೆ ಮುಂದುವರಿಯಬೇಕಾಗುತ್ತದೆ ಎಂದೂ ಎಚ್ಚರಿಸಿದೆ.

1988 ಸೆಪ್ಟಂಬರ್ 28ರಂದು ಬೀರಭೂಮ್ ಜಿಲ್ಲೆಯ ಮುಧಬೆರಿಯಾದಲ್ಲಿ ನಾನು ಯೋಜನೆಗೆ ಶಿಲಾನ್ಯಾಸ ಮಾಡಿದೆ. ಈ ಯೋಜನೆ ರಾಜ್ಯದ ಸ್ವಾಭಿಮಾನದ ಸಂಕೇತವಾಗಿದೆ ಹಾಗೂ ರಾಜ್ಯದ ಬಗ್ಗೆ ಕೇಂದ್ರದ ಪಕ್ಷಪಾತ ಧೋರಣೆಗೆ ಸಾಕ್ಷಿಯಾಗಿದೆ ಎಂದು ಆ ಸಂದರ್ಭದಲ್ಲಿ ನಾನು ಹೇಳಿದೆ.

ಪಕ್ಷದ 13ನೇ ಮಹಾಧಿವೇಶನ

1998 ಡಿಸೆಂಬರ್ 3 ರಿಂದ 6ರವರೆಗೆ ಕೊಲ್ಕತ್ತಾದ ಸಾರ್ಟಲೇಕ್ ಸ್ಟೇಡಿಯಂನಲ್ಲಿ ಪಕ್ಷದ 16ನೇ ರಾಜ್ಯ ಸಮ್ಮೇಳನ ನಡೆಯಿತು. ಕಾ। ಇ.ಎಂ.ಎಸ್. ನಂಬೂದರಿಪಾಡ್ ಕೆಂಪು ಧ್ವಜಾರೋಹಣ ಮಾಡಿದರು. ಬಿಟಿಆರ್ ಕೂಡ ಹಾಜರಿದ್ದರು. ಮೂರು ವರ್ಷಗಳ ಹಿಂದಿನ ರಾಜ್ಯ ಸಮ್ಮೇಳನದ ಅವಧಿಯಲ್ಲಿ ಇದ್ದುದಕ್ಕಿಂತ ನಮ್ಮ ಸದಸ್ಯತ್ವ 20,000ದಷ್ಟು ಹೆಚ್ಚಿತ್ತು. 15ನೇ ಸಮ್ಮೇಳನದ ವೇಳೆ ಸದಸ್ಯತ್ವ 1,36,980 ಆಗಿತ್ತು. 1988 ಏಪ್ರಿಲ್ 30ರ ಹೊತ್ತಿಗೆ 1,55,243 ಇತ್ತು.

ಹಾಲ್ದಿಯಾ ಪೆಟ್ರೋ ರಾಸಾಯನಿಕ ಹಾಗೂ ಬಕ್ರೇಶ್ವರಗಳಂಥ ರಾಜ್ಯದ ಯೋಜನೆಗಳ ಬಗೆಗಿನ ಕೇಂದ್ರ ಸರಕಾರದ ಧೋರಣೆ, ಎಡ ಐಕ್ಯತೆ ಮತ್ತು ಹೆಚ್ಚುತ್ತಿರುವ ಪ್ರತ್ಯೇಕತಾವಾದಿ ಪ್ರವೃತ್ತಿ ಮೊದಲಾದವುಗಳ ಬಗ್ಗೆ ಸಮ್ಮೇಳನ ಚರ್ಚಿಸಿತು. ಹೆಚ್ಚಿನ ಎಡಏಕತೆಯ ಅಗತ್ಯವನ್ನು ಪ್ರತಿಪಾದಿಸುವ ಪ್ರಸ್ತಾವವೊಂದನ್ನು ಸರೋಜ್ ಮುಖರ್ಜಿ ಮಂಡಿಸಿದರು. ಮುಝಫರ್ ಆಹ್ಮದ್‌ರ ಜನ್ಮ ವರ್ಷವನ್ನು 'ಮಾರ್ಕ್ಸ್‌ವಾದಿ ಶಿಕ್ಷಣ ವರ್ಷವನ್ನಾಗಿ ಆಚರಿಸಲು ಕೂಡ ಸಮ್ಮೇಳನ ನಿರ್ಧರಿಸಿತು. ಸಂಘಟನಾತ್ಮಕ ಸಮಸ್ಯೆಗಳು ಮತ್ತು ದೌರ್ಬಲ್ಯಗಳನ್ನು ಹೋಗಲಾಡಿಸುವ ಕುರಿತ ಹಲವು ಪ್ರಸ್ತಾವಗಳನ್ನು ಅಂಗೀಕರಿಸಲಾಯಿತು. ರಾಜಕೀಯ ಸಂಘಟನಾತ್ಮಕ ವರದಿಯ ಮೇಲೆ 62 ಪ್ರತಿನಿಧಿಗಳು ಮಾತನಾಡಿದ ಸರೋಜ್ ಮುಖರ್ಜಿ ಮತ್ತು ನಾನು ಸಮಾರ್ಪಣ ಭಾಷಣ ಮಾಡಿದೆವು.

99 ಸದಸ್ಯರ ಹೊಸ ರಾಜ್ಯ ಸಮಿತಿಯನ್ನು ರಚಿಸಲಾಯಿತು ಸರೋಜ್ ಮುಖರ್ಜಿ ಕಾರ್ಯದರ್ಶಿಯಾಗಿ ಮುಂದುವರಿದರು. ಪಕ್ಷದ ಮುಂದಿನ ಮಹಾಧಿವೇಶನದಲ್ಲಿ ರಾಜ್ಯದಿಂದ 170 ಪ್ರತಿನಿಧಿಗಳು ಪಾಲ್ಗೊಳ್ಳಬೇಕಿತ್ತು.

13ನೇ ಮಹಾಧಿವೇಶನ 1988 ಡಿಸೆಂಬರ್ 27 ರಿಂದ 1997 ಜನವರಿ ಒಂದರವರೆಗೆ ಕೇರಳ ರಾಜಧಾನಿ ತಿರುವನಂತಪುರದಲ್ಲಿ ನಡೆಯಿತು. ಶ್ರೀಮಂತ ದೇಶಗಳು ಸ್ವರಕ್ಷಣಾ ನೀತಿಗಳಿಂದ ಬಡದೇಶಗಳ ಅಭಿವೃದ್ಧಿಯನ್ನು ಬುಡಮೇಲು ಮಾಡುತ್ತೇವೆ ಎಂದು ನಾವು ಹೇಳಿದೆವು. ಭಾರತದಲ್ಲಿ, ರಾಜೀವಗಾಂಧಿ ಸರಕಾರದ ಎಲ್ಲಾ ರಂಗಗಳ ವೈಫಲ್ಯದಿಂದಾಗಿ ಬಿಕ್ಕಟ್ಟು ಇನ್ನಷ್ಟು ಸಂಕೀರ್ಣಗೊಂಡಿತ್ತು. ಭಾರತ ಇತರ ದೇಶಗಳ ಮೇಲೆ ಅವಲಂಬಿತವಾಗುವ ಪ್ರವ-ತ್ತಿ ಹೆಚ್ಚಾಗಿತ್ತು.

ಆಡಳಿತಾತ್ಮಕ ದೋಷಗಳು ಹಾಗೂ ದಿಕ್ಕುತಿಗಳು ತನ್ನ ದೇಶದ ಆರ್ಥಿಕತೆಯ ಸಮಸ್ಯೆಗಳಿಗೆ ಕಾರಣ ಎಂದು ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ (ಸಿಪಿಎಸ್‌ಯು) 27ನೇ ಮಹಾಧಿವೇಶನದ ಹೇಳಿಕೆಯೊಂದು ತಿಳಿಸಿತು. ಗೊರ್ಬಚೆವ್ 'ಗ್ಲಾಸನಾಸ್ಟ್' (ಮುಕ್ತತೆ) ಹಾಗೂ ಪೆರಸ್ರೋಯ್ಕ (ಪುನಾರಚನೆ) ಮಾತನ್ನು ಪ್ರಸ್ತಾಪಿಸಿದ್ದು ಈ ಮಹಾಧಿವೇಶನದಲ್ಲೇ.

ಬಂಡವಾಳಶಾಹಿ ಮತ್ತು ಸಮಾಜವಾದಿ ದೇಶಗಳ ನಡುವಿನ ಸಂಘರ್ಷ, ಬಡದೇಶಗಳು ಎದುರಿಸುತ್ತಿರುವ ಸಮಸ್ಯೆಗಳು, ಕಮ್ಯುನಿಸ್ಟ್ ಚೀನಾದಲ್ಲಿ ಮಾರುಕಟ್ಟೆ ಆರ್ಥಿಕತೆಯ ಪ್ರಯೋಗ ಈ ಎಲ್ಲವೂ ತಿರುವನಂತಪುರ ಮಹಾಧಿವೇಶನದ ನಮ್ಮ ಚರ್ಚೆಗೆ ಗ್ರಾಸವಾಗಿತ್ತು.

ರಾಜೀವಗಾಂಧಿ ಸರಕಾರ ಜನರಿಂದ ಪೂರ್ಣವಾಗಿ ಪ್ರತ್ಯೇಕಗೊಂಡಿದ್ದು ಮಹಾಧಿವೇಶನ ಹಾಗೂ ಪ್ರಸ್ತುತ ಮಹಾಧಿವೇಶನ ನಡುವಿನ ಮುಖ್ಯ ವ್ಯತ್ಯಾಸವಾಗಿತ್ತು. ಲೋಕಸಭೆ ಉಪಚುನಾವಣೆಗಳು, ಅಸೆಂಬ್ಲಿ ಚುನಾವಣೆಗಳು ಮತ್ತು ತ್ರಿಪುರಾ ಅರಾಜಕತೆ ಅದನ್ನು ಸಾಬೀತುಪಡಿಸಿತು. ಇಡೀ ಪತ್ರಿಕಾರಂಗ ಹಾಗೂ ರಾಜಕೀಯ ಪಕ್ಷಗಳು ಮಾನನಷ್ಟ ವಿರೋಧಿ ಮಸೂದೆಯ ವಿರುದ್ಧ ಸಿಡಿದು ನಿಂತವು. ಸಾಮೂಹಿಕ ಚಳವಳಿಗಳು ರೂಪುಗೊಳ್ಳುತ್ತಿದ್ದವು. ಆದರೆ ಒಟ್ಟಾರೆ ಐಕ್ಯ ಕಾರ್ಯಾಚರಣೆ ವಿಚಾರದಲ್ಲಿ ಎಡಶಕ್ತಿಗಳು ಹಿಂದೆ ಬಿದ್ದಿದ್ದವು. ಹಾಗೂ ಬಹಳಷ್ಟು ಪ್ರದೇಶಗಳಲಲಿ ಪ್ರತಿಭಟನೆಗಳು ದಿಕ್ಕುದೆಸೆಯಿಲ್ಲದಾಗಿತ್ತು. ತಪ್ಪು ದಾರಿಯತ್ತ ಸಾಗುತ್ತಿತ್ತು. ಅಂಥ ಪರಿಸ್ಥಿತಿಯಲ್ಲೂ, ಕಾಂಗ್ರೆಸ್ ವಿರೋಧಿ ಸಂಯುಕ್ತ ರಂಗವೊಂದರ ರಚನೆಗೆ ಕೆಲವು ಜಾತ್ಯಾತೀತ ಪಕ್ಷಗಳು ಶ್ರಮಿಸಿದರೆ ಹಾಗೂ ಕೇಂದ್ರ ಸರಕಾರದ ಕಾರ್ಯನಿರ್ವಹಣೆ ಕುರಿತು ಅನುಮಾನ ಇರುವ ಮತದಾರ ವಿಭಾಗಕ್ಕೆ ಆಶ್ವಾಸನೆ ನೀಡಿದರೆ, ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸನ್ನು ಸೋಲಿಸಲು ಸಾಧ್ಯ ಎಂಬ ಅಭಿಪ್ರಾಯವನ್ನು ನಾವು ಪ್ರತಿಪಾದಿಸಿದೆವು. ಕಾಂಗ್ರೆಸ್ ಮತ್ತು ಬಂಡವಾಳಶಾಹಿ ಪ್ರತಿಪಕ್ಷಗಳ ನಡುವಿನ ನಮೀಕರಣ ಬಲುಬೇಗ ಬದಲಾಗುತ್ತಿತ್ತು. ಹಾಗೂ ಭಿನ್ನಾಭಿಪ್ರಾಯಗಳು ಮತ್ತು ಘರ್ಷಣೆ ಬೆಳೆಯುತ್ತಿತ್ತು. ಜಾತ್ಯಾತೀತತೆಯ ಮುಖ್ಯ ಪ್ರಶ್ನೆಯ ಮೇಲೆ ಪ್ರತಿಪಕ್ಷಗಳು ಒಟ್ಟಾರೆ ಏಕತೆ ಸಾಧಿಸಬೇಕೆಂದು ನಾವು ದೃಢವಾಗಿ ಪ್ರತಿಪಾದಿಸುತ್ತಿದ್ದರೂ ಕೆಲವು ಪಕ್ಷಗಳು ಚುನಾವಣೆ ಲಾಭಕ್ಕಾಗಿ ಬಿಜೆಪಿಯೊಂದಿಗೆ ಕೈಜೋಡಿಸಲು ಹಿಂಜರಿಯಲಿಲ್ಲ. ಆದರೆ ಜಾತ್ಯಾತೀತ, ಎಡ ಏಕತೆ ಬಗ್ಗೆ ಇನ್ನೂ ಅತೀವ ಕಾಳಜಿಯುಳ್ಳ ಪ್ರತಿಗಾಮಿ ಶಕ್ತಿಗಳೊಂದಿಗೆ ಕೈಮಿಲಾಯಿಸಬಾರದು ಎಂದು ಹೇಳುವ ಕೆಲವು ನಾಯಕರು ಇನ್ನೂ ಇದ್ದರು. ಈಗ ಎರಡು ಸಿದ್ಧಾಂತಗಳು ಮುಕ್ತವಾಗಿದ್ದವು. ಎಡಪಂಥೀಯ ಹಾಗೂ ಬಂಡವಾಳಶಾಹಿ ಚಿಂತನೆ ಅವೇ ಆ ಎರಡು ಸಿದ್ಧಾಂತಗಳು.

(ಮುಂದುವರಿಯುವುದು)

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 80

ನೀರಾ ಇಳಿಕೆಗೆ ಅನುಮತಿ: ರೈತರ ಕಷ್ಟ ನಿವಾರಿಸೀತೆ?

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ. ಗುರುಶಾಂತ್

ಅಮಾಯಕರಾದ ಇಬ್ಬರು ರೈತರನ್ನು ಬಲಿತೆಗೆದುಕೊಂಡ ನಂತರ ಕರ್ನಾಟಕ ಸರ್ಕಾರ ನೀರಾ ಇಳಿಸುವುದಕ್ಕೆ ಅನುಮತಿ ನೀಡಲು ನಿರ್ಧರಿಸಿದೆ. ಈ ದುರ್ಘಟನೆಯ ಬಗೆಗಿನ ವ್ಯಾಪಕ ಖಂಡನೆ, ಬೆಳೆದ ತೀವ್ರ ಚಳುವಳಿ - ಜನಸ್ಪಂದನ ಹಾಗೂ ನೀರಾ ಇಳಿಸುವುದರ ನಿರಾಕರಣೆಗೆ ಸಮರ್ಪಕ ಉತ್ತರ ನೀಡಲಾಗದೆ ಹೋದುದು ಸಹ ಸರ್ಕಾರ ಮಣಿಯಬೇಕಾಗಿ ಬಂತು. ಹೆಂಡದ ಲಾಬಿಗಳ ಹಿತವನ್ನೇ ಪ್ರಧಾನವಾಗಿ ಪರಿಗಣಿಸಿದ್ದ ಸರ್ಕಾರ ದಿಢೀರನೆ ಈ ಒಪ್ಪಂದಕ್ಕೆ ಬಂದುದು ಜನಚಳುವಳಿಯ ಒಂದು ಗೆಲುವು.

ಒಂದು ಹಂತದಲ್ಲಿ ಪಾದಯಾತ್ರೆ ಆರಂಭಿಸಿದ ದೇವೇಗೌಡರು ಹಾಗೂ ಜೆಡಿ(ಎಸ್) ಮುಖಂಡರು ಮತ್ತು ಕಾಂಗ್ರೆಸ್ ನಾಯಕರ ನಡುವೆ ವಾಗ್ವಾದಗಳು, ಪ್ರತಿ ಚಳುವಳಿ ಹೂಡುವ ಮರುಧಾಳಿ ಆಸ್ಫೋಟಕರವಾದ ಸಮರವಾಗಿ ಮಾರ್ಪಾಟಾಗಿತ್ತು. ಅದು ಮುಂದುವರಿದಿದೆ.

ನೀರಾ ಇಳಿಸಲು ಅನುಮತಿ ನೀಡಿರುವ ಸರ್ಕಾರ ಇದರ ಮಾರಾಟವನ್ನು ಸಹಕಾರಿ ಸಂಘಗಳ ಮೂಲಕ, ಮಾರಬೇಕೆಂದೂ ಅದು ಹೆಂಡವಾಗದಂತೆ, ರಾಸಾಯನಿಕ ಮಿಶ್ರಣ ಮಾಡದಂತೆ, ಪಾಕೆಟ್‌ಗಳಲ್ಲಿಡಲು ನಿರ್ದೇಶಿಸಿದೆ.

ಸರ್ಕಾರದ ದಿಢೀರ್ ಈ ನಿರ್ಧಾರ ಹಲವು ಅನುಮಾನಗಳಿಂದಲೇ ಸ್ವಾಗತಿಸುವಂತಿದೆ. ಇಂತಹ ಪ್ರಕಟಣೆ ಹೊರಬಂದ ಒಂದೆರೆಡು ದಿನಗಳಲ್ಲಿ ತೆಂಗಿನ ತೋಟದಿಂದ ನೀರಾ ಸಂಗ್ರಹಿಸಿ ಮಾರಲು ತೆರಳುತ್ತಿದ್ದ ರೈತನೊಬ್ಬನ ಮೇಲೆ ಹೆಂಡದ ಅಬ್ಕಾರಿ ಲಾಬಿಗಳ ಗೂಂಡಾಗಳು ತೀವ್ರವಾಗಿ ಹಲ್ಲೆ ನಡೆಸಿದರು. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳು ಹೆಚ್ಚು ಮರುಕಳಿಸಬಹುದೇ ಎಂಬುದು. ಇದಕ್ಕಿಂತಲೂ ಮುಖ್ಯವಾಗಿ ಈಗ ತೆಂಗಿನ ಮರಗಳಿಂದ ಇಳಿಸುತ್ತಿರುವ ನೀರಾ ಕೇವಲ ಶೇ 4 ಅಥವಾ 5 ರಷ್ಟು. ಹೀಗಿರುವಾಗಲೇ ಮೊದಲು ಲೀಟರ್‌ಗೆ 25-30 ರೂಗಳಿದ್ದದ್ದು ಈಗ 8-10 ಕ್ಕೆ ಬಂದಿರುವಾಗ ಆರ್ಥಿಕ ಉತ್ಪಾದನೆಯಾದರೆ ದರಗಳ ಸ್ಥಿತಿ ಏನಾದೀತು? ರೈತರಿಗೆ ಕನಿಷ್ಟ ಉಳಿವು ತಂದೀತೆ? ನೀರಾ ಇಳಿಕೆ ಹಾಗೂ ಸಂಗ್ರಹದಲ್ಲಿ ಅಲ್ಪಸ್ವಲ್ಪ ಓರೆ-ಕೋರೆಗಳು ಘಟಿಸಿದರೆ, ಅಥವಾ ಅಬ್ಕಾರಿ ಅಧಿಕಾರಿಗಳ 'ಲಾಬಿ'ಗಳಿಗೆ ಶರಣಾಗಿ ಮೊಕದ್ದಮೆಗಳನ್ನು ಹೂಡತೊಡಗಿದರೆ, ಸಹಕಾರ ಸಂಸ್ಥೆಗಳನ್ನೇ ಮುಚ್ಚಿಸಿದರೆ.. ನೀರಾ ಇಳಿಕೆ ಲಾಭವಲ್ಲವೆಂಬ ಸ್ಥಿತಿ ಉಂಟಾದರೆ ... ಹೀಗೆ ಹಲವು ಅನುಮಾನಗಳು ಸುಳಿದಿವೆ. ಇವೆಲ್ಲಾ ಲೆಕ್ಕಾಚಾರ ಹಾಕಿಯೆ ಸರ್ಕಾರ ಅನುಮತಿ ನೀಡಿದೆ ಎಂಬುದು ಕೆಲವರ ಅನುಮಾನ.

ಅದೇನೇ ಇದ್ದರೂ ತೆಂಗಿನ ಬೆಳೆಗಾರರು ಎದುರಿಸುತ್ತಿರುವ ಬೆಲೆ ಕುಸಿತದ ಸಂಕಷ್ಟದಿಂದ ಅವರನ್ನು ಇದು ಪಾರು ಮಾಡಲಾರದು. ಅದೇನಿದ್ದರೂ ಕೇಂದ್ರ ಸರ್ಕಾರ ಮಾಡಿಕೊಂಡ ವಿಶ್ವವಾಣಿಜ್ಯ ಒಪ್ಪಂದಗಳು ಮತ್ತು ವಿನಾಶಕಾರಿ ಆಮದು ನೀತಿಗಳ ವಿರುದ್ಧ ಪ್ರಬಲ ಚಳುವಳಿ ತೀರಾ ಅತ್ಯಗತ್ಯ ಎಂಬುದು ಅದರತ್ತ ಗಮನ ಕೇಂದ್ರೀಕರಿಸಬೇಕಾಗಿದೆ.

ವಿದ್ಯುತ್ ಕಡಿತ ಮತ್ತು ದರ ಏರಿಕೆ

ಗ್ರಾಮಾಂತರ ಪ್ರದೇಶದಲ್ಲಿ ರಾತ್ರಿಯಿಡೀ ಲೋಡ್‌ಶೆಡ್ಡಿಂಗ್, ಮತ್ತು ಹಾಲು ಖರೀದಿ ಕಡಿತವನ್ನು ಹಿಂತೆಗೆದುಕೊಂಡಿರುವುದು ಸರ್ಕಾರದ ಇನ್ನೆರೆಡು ನಿರ್ಧಾರಗಳು. ರಾತ್ರಿಯಿಡೀ ಲೋಡ್‌ಶೆಡ್ಡಿಂಗ್ ಮಾಡಿ, ಕಗ್ಗತ್ತಲೆಯಲ್ಲಿ ಮುಳುಗಿಸುವ ಹಾಗೂ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ತನ್ನು ಕೇವಲ ಆರು ತಾಸು ಮಾತ್ರ ಪೂರೈಸಲಾಗುವುದೆಂದು ಪ್ರಕಟಿಸಿತ್ತು. ವ್ಯಾಪಕ ಪ್ರತಿಭಟನೆಗಳು ಆರಂಭವಾದ ನಂತರ ವಿದ್ಯುತ್ ಪೂರೈಕೆ/ಕಡಿತದ ಅವಧಿಯನ್ನು ಹಾಗೇ ಮುಂದುವರಿಸಿ ಲೋಡ್‌ಶೆಡ್ಡಿಂಗ್ ಹಿಂತೆಗೆದುಕೊಳ್ಳುವುದಾಗಿಯೂ ಹೇಳಿದ ಸರ್ಕಾರದ ಹೇಳಿಕೆ ಸಾರ್ವಜನಿಕರಲ್ಲಿ ಗೊಂದಲ ಹುಟ್ಟಿಸಲೆಂದೇ. ಆರು ತಾಸು ಮಾತ್ರ ವಿದ್ಯುತ್ ಎಂಬುದು ಮುಖ್ಯವಾಗಿ ಮಳೆ ನಿಲ್ಲುವ ಈ ದಿನಗಳಲ್ಲಿ ಪಂಪ್‌ಸೆಟ್‌ಗಳ ರೈತರು ಅಪಾರವಾದ ತೊಂದರೆಗೆ ಸಿಲುಕಲಿದ್ದಾರೆ. ಆದ್ದರಿಂದ ಸರ್ಕಾರ ಕನಿಷ್ಠ 10 ತಾಸುಗಳಾದರೂ ವಿದ್ಯುತ್ ಸರಬರಾಜು ಮಾಡಲೇಬೇಕು.

ಸದ್ಯ ಲೋಡ್‌ಶೆಡ್ಡಿಂಗ್ ಹಿಂತೆಗೆದುಕೊಂಡರೂ ಮತ್ತೆ ಯಾವಾಗ ಬೇಕಾದರೂ ಜಾರಿಯಾಗುವ ಸಂಭವ ಇದೆ. ವಿದ್ಯುತ್ ಕೊರತೆಯನ್ನು ಲೋಡ್‌ಶೆಡ್ಡಿಂಗ್‌ಗೂ, ಕಡಿತಕ್ಕೂ ಕಾರಣವನ್ನಾಗಿ ನೀಡಲಾಗಿದೆ. ಆದರೆ ಈಗಿರುವ ಸರಿಸುಮಾರು 25 ರಷ್ಟು ವಿದ್ಯುತ್ ಕಳ್ಳತನವನ್ನು ತಡೆಯಲು, ಅಲ್ಲದೇ ಇನ್ನೂ ಉತ್ಪಾದಿಸಬಹುದಾದ ಅವಕಾಶಗಳನ್ನು ಬಳಸಿಕೊಳ್ಳದ ವಿದ್ಯುತ್ ಮಂಡಳಿ ಸರ್ಕಾರ ಕಿಂಚಿತ್ತೂ ಕ್ರಮವಹಿಸಿಲ್ಲ.ಬದಲಾಗಿ ಈಗ ಎನ್ರಾನ್‌ನಂತಹ ಖಾಸಗೀ ಕಂಪನಿಗಳಿಂದ ಖರೀದಿಸಲು ಯತ್ನಿಸುತ್ತಿದೆ. ಹಲವಾರು ಕಾರಣಗಳಿಂದ ರೈತರು ಸಂಕಷ್ಟದಲ್ಲಿದ್ದು ಸಾಲ ತೀರಿಸಲಾಗದೇ ಆತ್ಮಹತ್ಯೆಗೆ ಈಡಾಗುತ್ತಿರುವಾಗ, ವಿದ್ಯುತ್ ದರಗಳನ್ನು ತೀವ್ರವಾಗಿ ಹೆಚ್ಚಿಸುವುದು ಅನಿವಾರ್ಯವೆಂದು ಹೇಳುತ್ತಿದೆ. ಅಂದರೆ ಖಾಸಗಿ ಕಂಪನಿಗಳು ನಿಗದಿಪಡಿಸುವ ದರಗಳಿಗೆ ಮೊರೆಹೋಗಿರುವುದರ ಸೂಚನೆಯಿದು. ಈ ಏರಿಕೆಯನ್ನು ವಹಿಸಿಕೊಳ್ಳಲು ಅಸಾಧ್ಯ. ಆದ್ದರಿಂದ ಕೃಷಿಯನ್ನುಳಿಸಲು ಸರ್ಕಾರ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಗೆ ಮತ್ತು ಸರಬರಾಜಿಗೆ ಆದ್ಯತೆ ಕೊಡಬೇಕು. ಮತ್ತು ದರಗಳನ್ನು ಹೆಚ್ಚಿಸಕೂಡದು. ಕೆಪಿಟಿಸಿಎಲ್ (ವಿದ್ಯುತ್ ನಿಗಮ) ರಚಿಸುವುದೇ ಈ ಸಮಸ್ಯೆಗಳನ್ನು ಪರಿಹರಿಸಲು ಎಂಬುದು ಹುಸಿಯಾಗಿದೆ. ಸಂಸ್ಥೆಯನ್ನು ಖಾಸಗೀಕರಿಸುವ, ಖಾಸಗಿ ಕಂಪನಿಗಳಿಗೆ ಮಣೆಹಾಕುವುದೇ ಅದರ ಮೂಲ ಕೆಲಸವೆಂಬುದು ಸಾಬೀತಾಗಿದೆ.

ಹಾಲಿನ ಡೈರಿಗಳು ಖರೀದಿಸುತ್ತಿದ್ದ ಹಾಲಿನ ಪ್ರಮಾಣದಲ್ಲಿ ಶೇ 25 ರಷ್ಟು ಕಡಿತಕ್ಕೆ ನಿರ್ಧರಿಸಲಾಗಿತ್ತು. ಮಾರಾಟವಾಗದೇ ಲಕ್ಷಾಂತರ ಲೀ. ಹಾಲು ಉಳಿಯುತ್ತಿದೆ ಎಂಬುದು ಹಳೆಯವಾದ. ಆದರೆ ಈ ಸಮಸ್ಯೆ ನಿವಾರಣೆಗಾಗಿ ನೀಡಿದ ಅನೇಕ ಸಲಹೆಗಳನ್ನು ಸರ್ಕಾರ ಪರಿಗಣಿಸಲೇ ಇಲ್ಲ. ಆದರೆ ಯಥೇಚ್ಛವಾಗಿ ಇಂದಿಗೂ ಲಕ್ಷಾಂತರ ಲಿ. ಹಾಲು ಹೊರ ರಾಜ್ಯಗಳಿಂದ ಬರುತ್ತಲೇ ಇದೆ. (ಹೆರಿಟೇಜ್, ದೊಡ್ಲ..) ಇದಕ್ಕೆ ಕಡಿವಾಣ ಹಾಕಲಾಗುವುದೆಂಬ ಸರ್ಕಾರದ ಹೇಳಿಕೆ ಜಾರಿಯಾಗಲೇ ಇಲ್ಲ. ಅಲ್ಲದೇ ನಮ್ಮದೇ ಆದ ಆಂತರಿಕ ಮಾರುಕಟ್ಟೆಯ ವಿಸ್ತರಣೆಗೂ, ವಿವಿಧ ಹೊಸ ರೀತಿಯ ಉತ್ಪನ್ನಗಳಿಗೂ ಗಮನಹರಿಸಲೇ ಇಲ್ಲ. ಹೈನುಗಾರಿಕೆಯಂತಹ ಉದ್ದಿಮೆಯಲ್ಲಿ ಲಕ್ಷಾಂತರ ಕುಟುಂಬಗಳು ತೊಡಗಿದ್ದು, ಇಡೀ ಜೀವನ ನಿರ್ವಹಣೆಯನ್ನು ಸಹ ಅವಲಂಬಿಸಿದ್ದರೂ, ಇದೊಂದು ಗಂಭೀರ ಪ್ರಶ್ನೆ ಎಂದು ಸರ್ಕಾರಕ್ಕೆ ಅನ್ನಿಸದಿರುವುದು ಸರ್ಕಾರದ ಬೇಜವಾಬ್ದಾರಿತನವನ್ನು ತೋರಿಸುತ್ತದೆ.

ಮೇಲಾಗಿ ವಿದೇಶಗಳಿಂದ ಬರುತ್ತಿರುವ ಹೈನು ಉತ್ಪಾದನೆಗಳ ಆಮದು ನಿಂತಿಲ್ಲ. ಸದ್ಯಕ್ಕೆ ಭಾರಿ ಚಳುವಳಿಗೆ ಹೆದರಿ ಸರ್ಕಾರ ತಾತ್ಕಾಲಿಕವಾಗಿ ಕಡಿತದ ಆದೇಶ ಹಿಂತೆಗೆದುಕೊಂಡಿದೆ. ಆದರೆ ಮೂಲಭೂತ ನೀತಿಯಲ್ಲಿ ಮಾರ್ಪಾಡಾಗದೆ, ಕೇಂದ್ರದ ನೀತಿ ವಿರುದ್ಧ ಹೋರಾಡದೆ ಈ ಪ್ರಶ್ನೆಯನ್ನು ಇತ್ಯರ್ಥ ಪಡಿಸಲಾಗುವುದಿಲ್ಲ ಮತ್ತೆ ಎಂದಾದರೂ ಆಘಾತ ಕಾದಿದ್ದೆ.

ಬಾಬಾ ಬುಡನ್‌ಗಿರಿಗೆ ಮತ್ತೆ ಸಂಘ ಪರಿವಾರದ ಲಗ್ಗೆ - ಚಕಾರವೆತ್ತದ ಆಡಳಿತ

ಬಾಬಾಬುಡನ್‌ಗಿರಿಗೆ ಮತ್ತೆ ಸಂಘ ಪರಿವಾರ ಲಗ್ಗೆ ಹಾಕಿದೆ. ಇತ್ತೀಚೆಗೆ 'ದತ್ತಮಾಲೆ' ಹಾಕಿದ ರಾಜ್ಯದ ಹಲವೆಡೆಗಳಿಂದ ಬಂದ ಸುಮಾರು ನಾಲ್ಕು



ಸಾವಿರದಷ್ಟು ಚೆಡ್ಡಿಗಳು ಮತ್ತು ಬಜರಂಗದಳದ ನಾಯಕರು ಕೋಮುಸೌಹಾರ್ದತೆಯ ವಾತಾವರಣವನ್ನು ವಿಷಮಯಗೊಳಿಸಿದರು. ಈ ದತ್ತಮಾಲೆ ಮತ್ತು ದತ್ತ ಯಜ್ಞವೆಂಬುದು ಹಿಂದೆಂದೂ ಇರದ ಆಚರಣೆ. ಅದೇನಿದ್ದರೂ ಮುಸ್ಲಿಂ-ಹಿಂದೂಳಿಬ್ಬರೂ ಈ ಸಂದರ್ಭದಲ್ಲಿ ಸೇರಿ ಬಾಬುಬುಡನ್ ಸ್ವಾಮಿಯ ಪೀಠದರ್ಶನ ಮಾಡಿ ಹೋಗುವುದು ವಾಡಿಕೆ. ಆದರೆ ಸೌಹಾರ್ದದ ಸಂಸ್ಕೃತಿಗೆ ಕಿಚ್ಚು ಹಾಕುವುದೇ ಈ ಧರ್ಮನಿಷ್ಟರ ಕೆಲಸವಲ್ಲವೇ? ಅದಕ್ಕಾಗಿ ಈ ಶೋಧ. ಈಗಲೂ ಚೆಡ್ಡಿವೀರರು ಬಾಬಾ ಬುಡನ್‌ಗಿರಿಯನ್ನು ಇನ್ನೊಂದು ಅಯೋಧ್ಯಾ ಮಾಡುವುದಾಗಿಯೂ ಬೆದರಿಸಿದ್ದಾರೆ. ಯಾಥಾ ರೀತಿ ಸರ್ಕಾರ ಬಂದೋಬಸ್ತ್ ಮಾಡಿ, ಯಜ್ಞ ಹಾಗೂ ಚೆಡ್ಡಿ ವೀರರ ಆಟೋಟಾಪಗಳಿಗೆ ಮುಕ್ತ ಪರವಾನಗಿ ನೀಡಿದೆ. ಜಿಲ್ಲಾ ಆಡಳಿತವನ್ನು ಭಾಗಿಯನ್ನಾಗಿಸಿರುವುದು ತುಂಬಾ ಗಂಭೀರ ಬೆಳವಣಿಗೆ. ಇದನ್ನು ರಾಜಕೀಯವಾಗಿ, ಕಾನೂನು ಮೂಲಕ ಎದುರಿಸುವಲ್ಲಿ ತನ್ನ ಜನಜಾಗ್ರತೆ ಉಂಟು ಮಾಡುವಲ್ಲಿ ಕೃಷ್ಣ ಸರ್ಕಾರಕ್ಕೆ ಮನಸ್ಸಿಲ್ಲ ಎಂಬುದನ್ನು ತೋರಿಸಿದೆ.


ಆದರೆ ಚಿಕ್ಕಮಗಳೂರಿನ ಜನತೆ ಇಂತಹ ಉದ್ರೇಕಕಾರಿ ಪ್ರಯತ್ನಗಳಿಗೆ ಸ್ಪಂದಿಸದೇ ಕೋಮುವಾದಿಗಳ ಕರೆಗಳಿಗೆ ಕಿವಿಗೊಡದೇ ತಿರಸ್ಕರಿಸಿರುವುದು ಉತ್ತಮ ಬೆಳವಣಿಗೆ. ಆದರೆ ಈ ಜನತೆಯ ನಿಲುವನ್ನು ಸೂಕ್ತವಾಗಿ ಬಳಸಿ ಕೋಮುವಾದಿಗಳನ್ನು ಎದುರಿಸಬೇಕಿದೆ.

ಮುಗಿದ ಚುನಾವಣೆಗಳು ಆರಂಭಗೊಂಡ ಆಕ್ರಮಣಗಳು

ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡು ರಾಜ್ಯದಲ್ಲಿ ಮೂರನೇ ಸುತ್ತಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ನವೆಂಬರ್ 11 ಕ್ಕೆ ಮುಗಿದಿದೆ. ಹೊಸ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಬೆಂಗಳೂರು ಒಳಗೊಂಡು, ಇತರೆಡೆಗಳಲ್ಲಿ ಸಾಧಾರಣವಾಗಿ ಕಾಂಗ್ರೆಸ್ ಪಕ್ಷ ಬಹುಮತಗಳಿಸಿದೆ. ಕೆಲವೆಡೆ ಇತರರ ಬೆಂಬಲದಿಂದ ಅದು ಅಧಿಕಾರ ಹಿಡಿಯಬಹುದು.

ಈ ಫಲಿತಾಂಶಗಳು ಎಸ್.ಎಂ.ಕೃಷ್ಣರ ಹೈಟೆಕ್ ಆಡಳಿತಕ್ಕೆ ಜನಕೊಟ್ಟ ಮನ್ನಣೆ ಎಂದು ಹೇಳಿ ಸಾರಾಸಗಟಾಗಿ ತಮ್ಮ ಬೆನ್ನು ಚಪ್ಪರಿಸಿಕೊಳ್ಳಲು ಮುಂದಾಗಿದ್ದಾರೆ. ಇದು ಅಸಂಬದ್ಧವಾದ ಹೇಳಿಕೆ.

ಇನ್ನೇನು ಅಧಿಕಾರದ ಚುಕ್ಕಾಣಿ ತನಗೇ ಎಂದು ಜಂಭ ಕೊಚ್ಚಿಕೊಳ್ಳುತ್ತಿದ್ದ ಕೋಮುವಾದಿ ಬಿಜೆಪಿಗಳನ್ನು ತಿರಸ್ಕರಿಸುವ ನಿರ್ಧಾರ, ವಾಜಪೇಯಿ ಸರ್ಕಾರದ ನೀತಿಗಳ ವಿರುದ್ಧದ ಅತೃಪ್ತಿ, ಒಂದಾಗದೇ ಒಡಕಿನಲ್ಲೇ ಸಾಗಿರುವ ಜನತಾದಳ ಬಣಗಳ ದುರ್ಬಲತೆ ಮೂರನೇ ಸೆಕ್ಯುಲರ್ ಪರ್ಯಾಯ ಗಟ್ಟಿಯಾಗಿ ರೂಪುಗೊಂಡಿರದಂತಹ ಸ್ಥಿತಿಯಲ್ಲಿ ಕಾಂಗ್ರೆಸ್‌ನ್ನು ಮತದಾರರು ಆರಿಸಿರುವುದು ಸ್ಪಷ್ಟ. ಮೇಲಾಗಿ ಸ್ಥಳೀಯ ಪ್ರಶ್ನೆಗಳೂ ಪ್ರಾಧಾನ್ಯತೆ ಪಡೆಯುತ್ತವೆ. ಇವೆಲ್ಲದಕ್ಕೂ ಮಿಗಿಲಾಗಿ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ ಎಂದಿನಂತೆ ಎಗ್ಗಿಲ್ಲದೇ ಯಥೇಚ್ಛವಾಗಿ ಹಣ, ಹೆಂಡ, ವಸ್ತು ಹಂಚಿಕೆ, ಅಕ್ರಮ ಮತದಾನದ ಬಲತ್ಕಾರಗಳನ್ನು ಮಾಡಿದೆ. ಅಧಿಕಾರದ ಯಂತ್ರ ದುರ್ಬಳಸಿದೆ. ಬೆಂಗಳೂರಿನಂಥಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಮತದಾರರಿಗೆ 'ಸ್ಥಳಾಂತರ'ದ ನೆಪ ಹೂಡಿ ಮತದಾನದ ಹಕ್ಕನ್ನೇ ನಿರಾಕರಿಸಿದ್ದು, ಈ ಹಿಂದಿನ ಮೇಯರ್ ಪ್ರೇಮ ಕಾರ್ಯಪ್ಪ, ಹಲವಾರು ವಿರೋಧ ಪಕ್ಷಗಳ ಅಭ್ಯರ್ಥಿಗಳು ಓಟಿನಿಂದ ವಂಚಿತರಾದ ಘಟನೆಗಳು, ಕಾಂಗ್ರೆಸ್‌ನ ಪ್ರಜಾಪ್ರಭುತ್ವ ವಿರೋಧಿ ಹಾಗೂ ಗೆಲ್ಲಲು ಏನು ಬೇಕಾದರೂ ಮಾಡಲು ಸಿದ್ಧವೆಂಬುದನ್ನು ತೋರಿಸುತ್ತದೆ. ಆದರೆ ಕೃಷ್ಣರವರಿಗೆ, ಕಾಂಗ್ರೆಸ್ ಮುಖಂಡರಿಗೆ ಇದು ಹೇಯವಾದದ್ದು ಎನ್ನಿಸದಿರುವುದೇ ಅವರು ತಲುಪಿರುವ ಹಂತ



ವಿಜಾಪುರ : ಸಹಕಾರಿ ನೂಲಿನ ಗಿರಣಿ ದುಗ್ಗಾಣಿಗೆ ಮಾರಾಟ

ಖಾಸಗೀಕರಣ ನೀತಿಯಿಂದಾಗಿ ದೇಶದ ಹಲವಾರು ಕಾರ್ಖಾನೆ, ಕಾರ್ಪೋರೇಷನ್, ಸಾರ್ವಜನಿಕ ಸೇವೆಗಳೆಲ್ಲ ದೇಶೀಯ-ವಿದೇಶಿಯ ಗುತ್ತೇದಾರಿ ಬಂಡವಾಳದಾರರ ಕೈವಶವಾಗ ತೊಡಗಿದೆ.ಸರಕಾರಿ ಕ್ಷೇತ್ರವನ್ನು ಬಲಪಡಿಸಿ, ವಿಸ್ತಾರಗೊಳಿಸಿ, ಅವು ದೇಶದ ಸಂಪತ್ತಿನ ರಕ್ಷಕರಾಗಿ ದೇಶದ ಜನರ ಆವಶ್ಯಕತೆಗಳನ್ನು ಪೂರೈಸುವ ಸಾಧನಗಳಾಗಿ, ದೇಶದ ಅಭಿವೃದ್ಧಿಗೆ ಮಾರ್ಗದರ್ಶಕವಾಗಿ ಕಂಗೊಳಿಸಬೇಕೆಂಬ ಮಹೋದ್ದೇಶದಿಂದ ಸೋವಿಯತ್ ರಶ್ಯದ ಆರ್ಥಿಕ-ಕೈಗಾರಿಕಾ ವ್ಯವಸ್ಥೆಯಿಂದ ಸ್ಫೂರ್ತಿಪಡೆದ ಜವಹರಲಾಲ ನೆಹರೂರವರು ಸಾರ್ವಜನಿಕ ಕ್ಷೇತ್ರಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿ ಪ್ರೋತ್ಸಾಹಿಸಿದ್ದರು. ಆ ನೀತಿಗೆ ವಾಜಪೇಯಿ ಸರಕಾರ ತಿಲಾಂಜಲಿ ಅರ್ಪಿಸುವ ಕೆಲಸ ಪ್ರಾರಂಭಿಸಿದೆ. ಆ ಕಾರಣದಿಂದಲೇ ಕೋಲ್ ಇಂಡಿಯಾ, ಏರ್ ಇಂಡಿಯಾ ಮೊದಲಾದ ಮಹತ್ವದ ಕಾರ್ಪೋರೇಷನ್ನುಗಳನ್ನು ಖಾಸಗೀಕರಣ ಗೊಳಿಸುವ, ಗುತ್ತೇದಾರಿ ಬಂಡವಾಳಿಗರಿಗೆ ಸಮರ್ಪಿಸುವ ಕೆಲಸ ಮುಂದುವರಿಸಿದೆ. ಮಾತ್ರವಲ್ಲ ರೂ. 5500 ಕೋಟಿ ಬೆಲೆ ಬಾಳುವ ಅಲ್ಯೂಮಿನಿಯಂ ಕಂಪನಿಯನ್ನು ಬರೀ ರೂ. 550 ಕೋಟಿಗೆ ಮಾರಾಟ ಮಾಡಿದ ದುರಂತ ಕತೆ ದೇಶದ ಮುಂದಿದೆ. ಕಾರ್ಖಾನೆಗಳು, ಕಾರ್ಪೋರೇಷನ್‌ಗಳು ನಷ್ಟದಲ್ಲಿವೆ ಎಂಬ ನೆವ ಮುಂದೆ ಮಾಡಿ ಅವುಗಳನ್ನು ಮುಚ್ಚುವ, ಖಾಸಗೀಯವರಿಗೆ ಮಾರಾಟ ಮಾಡುವ ಮಹಾ ಕಾರ್ಯದಲ್ಲಿ ನಾನು ನಿಮ್ಮಿಂದ ಹಿಂದೆ ಬೀಳುವವನಲ್ಲವೆಂದು ತೋರಿಸಿಕೊಡಲು ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಈ ವಿಷಯದಲ್ಲಿ ಕೇಂದ್ರದೊಡನೆ ಪೈಪೋಟಿ ನಡೆಸಿ, ಪೌರುಷ ತೋರಿಸುತ್ತಿದ್ದಾರೆ. ಈಗಾಗಲೇ ಮೈಸೂರು ಲ್ಯಾಂಪ್ಸ್, ಮೈ ಶುಗರ್, ಮೈಸೂರು ಪೇಪರ್, ಎನ್.ಜಿ.ಇ.ಎಫ್. ಮೊದಲಾದ ಕಾರ್ಖಾನೆಗಳಿಗೆ ಕೀಲಿ ಜಡಿಯುವ ಗುತ್ತೇದಾರಿ ಬಂಡವಾಳ ದಾರರಿಗೆ ದಾನ ಮಾಡುವ ಪ್ರಯತ್ನ ಈಗಾಗಲೇ ನಡೆದಿದೆ. ಸಹಕಾರಿ ಕ್ಷೇತ್ರದಡಿಯಲ್ಲಿ ನಡೆಸಲ್ಪಡುವ ಸಹಕಾರಿ ನೂಲಿನ ಗಿರಣಿಗಳ ಸಕ್ಕರೆ ಕಾರ್ಖಾನೆಗಳ ಗತಿ ನಿರ್ಗತಿಯಾಗುತ್ತಿದೆ. ಬಿಜಾಪುರ, ಬಾಗಲಕೋಟೆ, ರಾಯಚೂರು ಸಹಕಾರಿ ನೂಲಿನ ಗಿರಣಿಗಳು ಮುಚ್ಚಲ್ಪಟ್ಟು ಎರಡು ದಶಕಗಳಾಗುತ್ತಿದೆ. ಕಾರ್ಮಿಕ ಚಳುವಳಿಯಿಂದ ಹಾನಿಗೊಳಪಟ್ಟವೆಂಬ ಪ್ರಚಾರದಿಂದ ಈ ಗಿರಣಿಗಳನ್ನು ಮುಚ್ಚಲಾಗಿದೆ. ದುರಾಡಳಿತ, ಭ್ರಷ್ಟಾಚಾರ, ತಾಂತ್ರಿಕ ಅಧಿಕಾರಿಗಳ ಅಭಾವದಿಂದಾಗಿ ಈ ನೂಲಿನ ಗಿರಣಿಗಳು, ನಷ್ಟವನ್ನನುಭವಿಸಿದಾಗ, ಅವು ಮುಚ್ಚಲ್ಪಡ ಬಾರದೆಂಬ ಉದ್ದೇಶದಿಂದ ಕಾರ್ಮಿಕರು ನ್ಯಾಯವಾಗಿ ತಮಗೆ ಸಿಗಬೇಕಾದ ಹೆಚ್ಚಿನ ವೇತನವನ್ನು ಬಿಟ್ಟುಕೊಟ್ಟು ಗಿರಣಿಯ ಬಾಬಿನ್ಸ್‌ಗಳು ತಿರುಗುವಂತೆ ಮಾಡಿದ್ದರು. ಬಿಜಾಪುರ ಜಿಲೆಯಲ್ಲಿ ಉತ್ತಮ ಎಳೆಯ ಹತ್ತಿ ಬೆಳೆಯುತ್ತಿದ್ದು, ನೂಲಿನ ಗಿರಣಿಗೆ ಹವಾಮಾನ ಪೂರಕವಾಗಿರುವುದರಿಂದ ಎಂಟು ನೂಲಿನ ಗಿರಣಿಗಳನ್ನು ಜಿಲ್ಲೆಯಲ್ಲಿ ಸ್ಥಾಪಿಸಬಹುದೆಂದೂ, ರಾಜ್ಯದಲ್ಲಿಯೇ ಬಿಜಾಪುರ ಜಿಲ್ಲೆ ಒಂದರಲ್ಲೇ ಅತೀ ಹೆಚ್ಚು ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳಿರುವುದರಿಂದ ಅವುಗಳಿಗೆ ನೂಲು ಪೂರೈಸಲು ಗಿರಣಿಗಳ ಅವಶ್ಯಕತೆ ಇದೆಂಬ ಅಂಶವನ್ನು ಅಖಿಲ ಭಾರತ ಸಹಕಾರಿ ನೂಲಿನ ಗಿರಣಿ ಫೆಡರೇಷನ್‌ನ್ನಿನ ತಾಂತ್ರಿಕ ಡೈರಕ್ಟರರು ಬಿಜಾಪುರ ಸಹಕಾರಿ ನೂಲಿನ ಗಿರಣಿ ಸ್ಥಾಪಿಸುವಾಗಲೇ ಅಭಿಪ್ರಾಯ ಪಟ್ಟಿದ್ದರು. ಈ ಅಭಿಪ್ರಾಯದಂತೆ ಸರಕಾರ ಬಿಜಾಪುರ ಸಹಕಾರಿ ನೂಲಿನ ಗಿರಣಿಯನ್ನು ಉತ್ತಮ ರೀತಿಯಲ್ಲಿ ನಡೆಸುವ ರಾಜಕೀಯ, ಆಡಳಿತಾತ್ಮಕ ನಿರ್ಧಾರ ಕೈಗೊಂಡು ಇನ್ನೂ 8 ಗಿರಣಿಗಳನ್ನು ಸ್ಥಾಪಿಸುವ ನಿರ್ಧಾರ ಕೈಗೊಳ್ಳಬೇಕಿತ್ತು. ಹಾಗೆ ಮಾಡದೆ ಇದ್ದ ಗಿರಣಿಗಳನ್ನೇ ಮುಚ್ಚಿ, ಕಾರ್ಮಿಕರನ್ನು ನಿರ್ಗತಿಕರನ್ನಾಗಿ ಮಾಡಿ, ಜಿಲ್ಲೆಯಲ್ಲಿ ಹತ್ತಿ ಬೆಳೆಗೆ ಪ್ರೋತ್ಸಾಹ ಇಲ್ಲದಂತೆ ಮಾಡಿ ರೈತರನ್ನು ಸಹ ಸಂಕಷ್ಟದಲ್ಲಿ ನೂಕಿದಂತಾಗಿದೆ.

ಬಿಜಾಪುರ ಸಹಕಾರಿ ನೂಲಿನ ಗಿರಣಿಗೆ 80 ಎಕ್ರೆ ಭೂಮಿ ಇದೆ. ಬಿಜಾಪುರ ನಗರಕ್ಕೆ ಹತ್ತಿರದಲ್ಲಿದೆ. ಎರಡನೇ ಕೈಗಾರಿಕಾ ಕೇಂದ್ರದಲ್ಲಿದೆ. ಹಾಗಾಗಿ ಬೆಲೆ ಬಾಳುವ ಭೂಮಿ ಹೊಂದಿದೆ. ಮೆಶಿನರಿಗಳೂ, ಗೋದಾಮುಗಳು ಹೆಚ್ಚು ಕಿಮ್ಮತ್ತಿನದಾಗಿವೆ. ಹೀಗಿದ್ದೂ ಅಧಿಕಾರಿಗಳು ತಮ್ಮದೇ ಆದ ಕಾರಣಗಳನ್ನು ಮುಂದೊಡ್ಡಿ ಇಡೀ ಗಿರಣಿ ಮತ್ತು ಅದಕ್ಕೆ ಹೊಂದಿಕೊಂಡ 80 ಎಕ್ರೆ ಭೂಮಿಯನ್ನು ಅಂದರೆ ರೂ. 35-40 ಕೋಟಿ ಮೌಲ್ಯದ ಈ ಘಟಕವನ್ನು ಬರೇ ರೂ. 2.79 ಕೋಟಿ ರೂ. ಗೆ ಮಾರಾಟ ಮಾಡಿರುವುದು ಅತ್ಯಂತ ಹೀನಾಯ ಕೃತ್ಯವೆಂದು ಹೇಳಬೇಕಾಗುತ್ತದೆ.

ಎಂಟು ನೂರಕ್ಕೂ ಹೆಚ್ಚು ಕಾರ್ಮಿಕ ಕುಟುಂಬಗಳು ಕಳೆದ 10-12 ವರ್ಷಗಳಿಂದ ಈ ಗಿರಣಿಯ ಪುನರಾರಂಭಕ್ಕಾಗಿ ಚಳುವಳಿ ಮಾಡುತ್ತಾ ಬಂದಿವೆ, ಗಿರಣಿ ಮುಚ್ಚಲ್ಪಟ್ಟಾಗ ಇವರಿಗೆ ಸಂಬಳ ಸಿಗಲಿಲ್ಲ. ಭವಿಷ್ಯ ನಿಧಿ ಲಭ್ಯವಾಗಲಿಲ್ಲ. ಅದರ ಮೊತ್ತ ಒಟ್ಟು ರೂ. ಒಂದು ಕೋಟಿಯಷ್ಟಾಗಹುದು. ಕಾರ್ಖಾನೆಯನ್ನು ಮಾರಾಟ ಮಾಡುವಾಗ ಕಾರ್ಮಿಕರ ಬಾಕಿ ಹಣದ ಕುರಿತು ಖರೀದಿದಾರರಿಗೆ ಸ್ಪಷ್ಟ ತಿಳುವಳಿಕೆ ಕೊಟ್ಟು ಕಾಗದ ಪತ್ರದಲ್ಲಿ ಈ ಅಂಶ ದಾಖಲಿಸಿ ಕೆಲಸಗಾರರಿಗೆ ಸಲ್ಲತಕ್ಕ ಬಾಕಿಹಣ ಪಾವತಿಸುವ ಜವಾಬ್ದಾರಿ ಹೊರಬೇಕಾಗಿದೆ. ಸರಕಾರದ ಈ ಭ್ರಷ್ಟ ಒಪಂದದ ವಿರುದ್ಧ ಕಾರ್ಮಿಕರು, ಶೇರುದಾರರೂ, ನಾಗರೀಕರೂ ಹೋರಾಡಬೇಕು. ಬಾಲ್ಕೋ ಅವ್ಯಹಾರದ ಕುರಿತು ದೇಶಾದ್ಯಂತ ಚಳುವಳಿ ನಡೆಯಿತು. ಬಿಜಾಪುರ ಸಹಕಾರಿ ನೂಲಿನ ಗಿರಣಿ ಅವ್ಯವಹಾರ, ಭ್ರಷ್ಟಾಚಾರದ ಕುರಿತೂ ತೀವ್ರ ಪ್ರತಿಭಟನೆ ನಡೆಯುವ ಅಗತ್ಯವಿದೆ.

- ಎನ್.ಕೆ.ಉಪಾಧ್ಯಾಯ

ಕರ್ನಾಟಕದಲ್ಲಿ ಕಳೆದ ವಾರ

ತೋರಿಸುತ್ತದೆ.

ಈ ಚುನಾವಣಾ ಫಲಿತಾಂಶ ಪ್ರಕಟವಾದ ಒಂದೆರೆಡು ದಿನಗಳಲ್ಲೇ ಕೃಷ್ಣರವರು ನಗರಗಳಲ್ಲಿನ ಕುಡಿಯುವ ನೀರು ಸರಬರಾಜು ಮತ್ತು ಹಣ ವಸೂಲಿಯನ್ನು ಖಾಸಗಿಯವರಿಗೆ ಒಪ್ಪಿಸುವುದಾಗಿ ನಿರ್ಧರಿಸಿದೆ. ಹೀಗೆ ಕಾದುಕೊಂಡಿದ್ದ ಕೃಷ್ಣ ವಿಶ್ವಬ್ಯಾಂಕ್‌ನ ಶರತ್ತುಗಳ ಜಾರಿಗೆ ದಿಢೀರನೆ ಮುಂದಾಗಿದ್ದಾರೆ. ಈ ಫಲಿತಾಂಶವನ್ನೇ ಬಳಸಿ ಮತ್ತೇ ಜನತೆಯ ಮೇಲೆ ಕ್ರೂರ ಆಕ್ರಮಣ ಮಾಡಲು ಸನ್ನದ್ಧರಾಗಿದ್ದಾರೆ. ಇದು ಜನ ದ್ರೋಹದ ವಂಚನೆಯಲ್ಲದೇ ಮತ್ತೇನು?

ಲಂಚ ವಸೂಲು ಮಾಡದಿರುವುದಕ್ಕೆ ಶಿಸ್ತು ಕ್ರಮ!

'ಮಾಮೂಲಿ' ವಸೂಲಿ ತೀರಾ ಮಾಮೂಲಿ ಸಂಗತಿಯಾಗಿ ಬಿಟ್ಟಿದೆ. ಅದೇನಿದ್ದರೂ ಕದ್ದು ಮುಚ್ಚಿ ನಡೆವ ವ್ಯವಹಾರವದು. ಅದಕ್ಕಾಗಿ ಸಿಬ್ಬಂದಿ ಬಳಕೆಯೂ ಅನಧಿಕೃತ. ಆದರೆ ಹೂವಿನಡಗಲಿ ಪೋಲೀಸ್ ಠಾಣೆಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಅರುಣ್ ಗೋಡಬೋಲೆ ಇದಕ್ಕೆಲ್ಲಾ ಅಧಿಕೃತ ಪಟ್ಟಿಯಲ್ಲಿ ಸೇರಿಸಿದ್ದಾರೆ. ಲಂಚ ವಸೂಲು ಮಾಡದಿರುವುದು ಅಶಿಸ್ತು ಮೇಲಧಿಕಾರಿಯ ಆಜ್ಞೆ ಉಲ್ಲಂಘನೆ, ಕರ್ತವ್ಯ ಲೋಪ!! ಆದ್ದರಿಂದ ದಂಡನಾರ್ಹ. ಇಂತಹ ಮಾಮೂಲು ವಸೂಲಿ ಮಾಡಲಾಗದ ಅಸಹಾಯಕತೆ ವ್ಯಕ್ತಪಡಿಸಿದ ಪೇದೆ ಟಿ.ಗುರುಬಸವರಾಜನನ್ನು ಸರ್ಕಲ್ ಇನ್ಸ್‌ಪೆಕ್ಟರ್ ಸಾಹೇಬರು ಮನಬಂದಂತೆ ದಬಾಯಿಸಿದರು. 3 ಜನರನ್ನು ಅಮಾನತುಗೊಳಿಸಿದರು. ಇದರಿಂದ ನೊಂದ, ಅವಮಾನ ತಾಳದೆ ಪೇದೆ ಗುರುಬಸವರಾಜ್ ಒಂದು ದೀರ್ಘವಾದ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡ. ಈ ಪತ್ರದಲ್ಲಿ ಲಂಚದ ವಸೂಲಿಯ ಒತ್ತಡಗಳು ಹಾಗೂ ತನ್ನ ಈ ಸಾವಿಗೆ ಆ ಪೋಲೀಸ್ ಅಧಿಕಾರಿಯೇ ಕಾರಣವೆಂದು ಸ್ಪಷ್ಟವಾಗಿ ಬರೆದಿದ್ದಾನೆ.

ಇದೆಲ್ಲಾ ಬಹಿರಂಗಗೊಂಡರೂ ಮೇಲಧಿಕಾರಿಗಳು ತಕ್ಷಣ ಕ್ರಮವಹಿಸಲಿಲ್ಲ. ಸಾರ್ವಜನಿಕರು ಠಾಣೆಗೆ ತೆರಳಿ ತೀವ್ರವಾಗಿ ಪ್ರತಿಭಟಿಸಿದರು. ಏನೊಂದು ಉತ್ತರವಿಲ್ಲದೆ ದರ್ಪದಿಂದಲೇ ವರ್ತಿಸಿದ ಆ ಸರ್ಕಲ್ ಇನ್ಸ್‌ಪೆಕ್ಟರು ಹಾಗೂ ಅಲ್ಲಿ ನೆರೆದ ಜನರ ನಡುವೆ ಲಟಾಪಟಿ ನಡೆಯಿತು. ಅಲ್ಲಿಗೆ ಬಂದ ತಹಶೀಲ್ದಾರರು (ತಾಲೂಕು ದಂಡಾಧಿಕಾರಿ) ಸಹ ಜನದನಿಗೆ ಇಂಬುಕೊಡದೇ ಹೋದಾಗ ಅವರಿಗೂ 'ಪೂಜೆ' ಆಯಿತಂತೆ. ಪೋಲೀಸರು ಗಾಳಿಯಲ್ಲಿ ಗುಂಡು ಹಾರಿಸಿ ಲಾಠಿ ಚಾರ್ಜು ಮಾಡಿದ್ದಾರೆ. ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಲು ಠಾಣಾಧಿಕಾರಿಗಳು ಮೇಲಧಿಕಾರಿಗಳು ಕಾರಣ.

ಈ ಘಟನೆ ಆದ ಮೇಲೆಯೇ ಎಸ್.ಪಿ., ದಾವಣಗೆರೆ ವಲಯದ ಡಿಜಿಪಿಗಳು ಆಗಮಿಸಿದರು. ಆದರೆ ಅವರದ್ದು ಸಹ ಆರೋಪಿ ಸರ್ಕಲ್ ಇನ್ಸ್‌ಪೆಕ್ಟರ್ ಪರವೇ. ಜನರ ಒತ್ತಡ ಹೆಚ್ಚಿದ ಮೇಲೆ ನೂರಾರು ಜನರ ಮೇಲೆ ಮೊಕದ್ದಮೆ ಹೂಡಿದ್ದು, ಮತ್ತು ಈ ತಪ್ಪಿತಸ್ಥ ಅಧಿಕಾರಿಗಳ 'ಸಸ್ಪೆಂಡ್' ಎಂಬ ರಜೆ ಮುಂಜೂರು ಮಾಡಿದ್ದು. ಆದರೆ ಆತ್ಮಹತ್ಯೆ ಮಾಡಿಕೊಂಡ ಪೇದೆ ಸ್ಪಷ್ಟವಾಗಿ ಪತ್ರದಲ್ಲಿ ನಮೂದಿಸಿದ್ದಂತೆ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡದೇ ಅವರನ್ನು ಪಕ್ಷಪಾತದಿಂದ ಬಚಾವುಗೊಳಿಸಲಾಗಿದೆ. ಬೇರೆಯವರ ಪ್ರಕರಣಗಳಲ್ಲಿ ಪೋಲೀಸರು ಹೀಗೇ ವರ್ತಿಸುವರೆ? ಕಾನೂನಿನಲ್ಲಿ ಇದಕ್ಕೆ ಅವಕಾಶವಿದೆಯೇ?

ಈ ಎಲ್ಲಾ ನಾಟಕ-ನಿರ್ಲಕ್ಷ್ಯ, ತಪ್ಪಿತಸ್ಥ ಅಧಿಕಾರಿಯನ್ನು ಬಚಾವುಗೊಳಿಸುತ್ತಿರುವುದಕ್ಕೆ ಕಾರಣ ಆ ಅಧಿಕಾರಿ ಗೃಹಸಚಿವ ಮಲ್ಲಿಕಾರ್ಜುನ ಖರ್ಗೆಯವರ ಸಂಬಂಧಿ ಎಂಬುದು. ಇಂತಹ ದೊಡ್ಡ ಮನುಷ್ಯರ ಎದುರಲ್ಲಿ ಈ ಪೇದೆ ಜೀವ ಯಾವ ಗಿಡದ ಸೊಪ್ಪು ಅಲ್ಲವೇ? ಹೈಟೆಕ್‌ನ ದಕ್ಷತೆಯ ಸೋಗಿನ ಕೃಷ್ಣ, ಖರ್ಗೆಗಳಿಗೆ ಮಾನ ಇದೆಯೇ?

ಉತ್ತರ ಕರ್ನಾಟಕದ ಅಭಿವೃದ್ಧಿ ಮತ್ತು ಮುಖ್ಯಮಂತ್ರಿಗಳ ಬಿಸಿಯೂಟ

ಹೈದ್ರಾಬಾದ್-ಕರ್ನಾಟಕದ ಶಾಲಾ ಮಕ್ಕಳಿಗಾಗಿ ಮಧ್ಯಾಹ್ನದ 'ಬಿಸಿಯೂಟದ' ಯೋಜನೆಯನ್ನು ಅತ್ಯಂತ ಹಿಂದುಳಿದ ತಾಲೂಕಾಗಿರುವ ದೇವದುರ್ಗದ ಅರಕೇರಾದಲ್ಲಿ ಮುಖ್ಯಮಂತ್ರಿಗಳು ಉದ್ಘಾಟಿಸಿದ್ದಾರೆ. ಮಧ್ಯಾಹ್ನದ ಒಂದು ಊಟದ ಹೊಣೆ, ಅಲ್ಲದೇ ಈ ಪ್ರದೇಶದಲ್ಲಿ ಗಂಭೀರವಾಗಿರುವ ಅಪೌಷ್ಠಿಕತೆಯ ನಿವಾರಣೆ. ಈ ಮೂಲಕ ಶಿಕ್ಷಣದ ಮುಂದುವರಿಕೆ ಸರ್ಕಾರದ ಗುರಿ. ಈ ಸಂದರ್ಭದಲ್ಲೇ ಉತ್ತರಕರ್ನಾಟಕದ ಅಭಿವೃದ್ಧಿಗೆ ಬದ್ಧ ಎಂದು ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಆದರೆ ಇದನ್ನು ಹೇಗೆ ಸಾಧಿಸಲಾಗುವುದು ಎಂಬ ಬಗ್ಗೆ ಯಾವುದೇ ನಿರ್ದಿಷ್ಟ ಯೋಜನೆ-ರೂಪುರೇಷೆಗಳನ್ನು ಹೇಳಲಿಲ್ಲ. ಅಭಿವೃದ್ಧಿಗೆ ಈ ಬಿಸಿಯೂಟದ ಯೋಜನೆಯೇ ಸಾಕು ಎಂದು ಭಾವಿಸಿದ್ದಾರೋ ಏನೋ.

ಈ ಪ್ರಾದೇಶಿಕ ಅಸಮಾನತೆಯ ನಿವಾರಣೆಗಾಗಿ ಸರ್ಕಾರ, ಭೂಹಂಚಿಕೆ, ಕೈಗಾರಿಕೆ-ಕೃಷಿ ನೀರಾವರಿ, ಅಭಿವೃದ್ಧಿಯಂತಹ ಮೂಲಭೂತವಾದ ಕ್ರಮಗಳನ್ನು ಕೈಗೊಂಡಲ್ಲಿ ಅತ್ಯಪಾರವಾಗಿರುವ ದಾರಿದ್ರ್ಯ, ಬಡತನ ಹೆಪ್ಪುಗಟ್ಟಿ ನಿಂತಿರುವ ಕೃಷಿಕೂಲಿಕಾರರು, ಬಡರೈತರು, ನಿರುದ್ಯೋಗಿಗಳ ಬದುಕಿನಲ್ಲಿ ಬದಲಾವಣೆಯುಂಟಾಗಲಿದೆ. ಈ ವಿಭಾಗಗಳ ಅಭಿವೃದ್ಧಿಯಾಗದೆ ಯಾವುದೇ ಅಭಿವೃದ್ಧಿ ಅದೊಂದು ಹಾಸ್ಯಾಸ್ಪದದ ಟೊಳ್ಳು ಭರವಸೆಗಳಷ್ಟೇ. ಈ ವಿಭಾಗಗಳ ಕೈಗೆ ಆದಾಯ, ಕೊಳ್ಳುವ ಶಕ್ತಿ ಹೆಚ್ಚಿದಲ್ಲಿ ಅಪೌಷ್ಠಿಕತೆ, ಅನಾರೋಗ್ಯ, ಅನಕ್ಷರತೆ ಪಿಡುಗುಗಳು ನಿವಾರಣೆಯಾಗಲು ಸಾಧ್ಯ. ತಿನ್ನಲು ಸರಿಯಾಗಿಲ್ಲದೇ ಶಾಲೆಗೆ ಬರುವ ಬದಲು ಹೊಲಗಳಲ್ಲಿ-ಕೂಲಿನಾಲಿ ಮಾಡಲು ಮಕ್ಕಳೂ ತೆರಳುವುದು ಅತ್ಯಂತ ಧಾರುಣ ಸ್ಥಿತಿ. ಇಂತಹ ಕನಿಷ್ಠ ಮೂಲಭೂತ ಅಂಶಗಳನ್ನು, ಗಮನಕ್ಕೆ ತೆಗೆದುಕೊಂಡಿದೆಯೇ? ಈ ದಿಕ್ಕಿನಲ್ಲಿ ಹೆಜ್ಜೆ ಇರಿಸಿದರೆ 'ಈ ಬಿಸಿಯೂಟ'ದ ಭೋಜನದ ಸ್ಕೀಮಿನ ಅಗತ್ಯವೂ ಬರಲಾರದು. (ಇದು ಯಾವಾಗ ತಂಗಳೂಟವಾಗುವುದೋ ಎಂಬ ಚಿಂತೆ ಜನರದ್ದು). ಆದರೆ ಜನರ ಕೈಗೆ ಕೆಲಸ ಸೃಷ್ಟಿಸುವ ಬದಲು ಪೌಷ್ಟಿಕತೆಗಾಗಿ ಕಬ್ಬಿಣಾಂಶಗಳ ಗುಳಿಗೆ ನೀಡುವ ಬದಲು ತರಕಾರಿ ಸೊಪ್ಪುಗಳನ್ನು ನೀಡಿದರೆ ರೈತರಿಗೆ ಲಾಭವಾಗುವುದಿಲ್ಲವೇ? ಆದರೆ ಕಾರ್ಖಾನೆ ಮಾಲೀಕರಿಗೆ ಲಾಭ ತುಂಬಿಸುವ ಲಕ್ಷ್ಯ ಸರ್ಕಾರದ್ದು. ಆದ್ದರಿಂದ ಕೃಷ್ಣರವರ 'ಕಾಳಜಿ'ಗಳಿಗೆ ಪ್ರಾಮಾಣಿಕತೆಯ ನೆಲೆಯಿಲ್ಲ. ಹೈದರಾಬಾದ್ ಕರ್ನಾಟಕ ಪ್ರತ್ಯೇಕ ರಾಜ್ಯದ ಬೇಡಿಕೆಗಾಗಿ ನವೆಂಬರ್ 1 ರಂದು ಕೆಲವು ನಾಯಕರು ನೀಡಿದ್ದ ಬಂದ್ ಕರೆಗೆ ಜನತೆ ಸ್ಪಂದಿಸದೇ ತಿರಸ್ಕರಿಸಿದ್ದಾರೆ. ಈ ಮೂಲಕ ಸಮಗ್ರ ಕರ್ನಾಟಕದ ಅಭಿವೃದ್ಧಿಯೊಂದಿಗೆ ತಮ್ಮ ಅಭಿವೃದ್ಧಿಯೂ ಎಂಬ ಸಂದೇಶ ನೀಡಿದ್ದಾರೆ. ಆದರೆ ಸರ್ಕಾರ ಈಗಲಾದರೂ ಕಾಲಹರಣ ಮಾಡದೇ ನಿರ್ದಿಷ್ಟ ಮೂಲಭೂತಯೋಜನೆ, ಕಾಲಮಿತಿಯೊಂದಿಗೆ ಕಾರ್ಯಕ್ಕಿಳಿಯಬೇಕು. ಹಲವಾರು ದಶಕಗಳ ಕಾಲದ ತಮ್ಮ ಆಡಳಿತ ನೀತಿಗಳೇ ನಿರ್ಮಿಸಿರುವ ಈ ಅಸಮತೋಲನವನ್ನು ಕಿತ್ತೊಗೆಯಲು ಈಗಲಾದರೂ ಮುಂದಾಗಬೇಕು. ಇದು ಕೃಷ್ಣರ ಹೈಟೆಕ್ ಅಜೆಂಡಾದಲ್ಲಿ ಇದೆಯೇ?





POTO ಎಂಬ ಕರಾಳ ಮಸೂದೆ

ಭಯೋತ್ಪಾದನೆ ದಮನದ ಹೆಸರಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಿರ್ನಾಮ ಮಾಡಿದ ಅತ್ಯಂತ ಕರಾಳವಾದ ಶಾಸನವನ್ನು (POTO) ತರಲು ಕೇಂದ್ರದ ಸರ್ಕಾರ ಮುಂದಾಗಿದೆ, ಅದರ ಒಳಹೂರಣನವ್ನು ಬಿಡಿಸಿಟ್ಟ ಲೇಖನ

ಈ ಹಿಂದೆ ಭಯೋತ್ಪಾದನೆ ನಿವಾರಣಾ ಮಸೂದೆ - 2000ವನ್ನು ಕೇಂದ್ರ ಸರ್ಕಾರ ಸಿದ್ಧಪಡಿಸಿತ್ತು ಈ ಮಸೂದೆಯ ಆಧಾರದಲ್ಲಿ ಮಸೂದೆ ಕುರಿತ ಅಭಿಪ್ರಾಯಗಳು, ವಿಮರ್ಶೆ, ಖಂಡನೆ ಮೂಡಿಬಂದಿತ್ತು. ಆದರೆ ಪ್ರಸ್ತುತ ಭಯೋತ್ಪಾದನೆ ನಿವಾರಣಾ ಸುಗ್ರೀವಾಜ್ಞೆ (POTO)ವನ್ನು ರಾಷ್ಟ್ರಪತಿಗಳು ಹೊರಡಿಸಿದ್ದು, ಕೇಂದ್ರ ಮಂತ್ರಿಮಂಡಲವೂ ಅದನ್ನು ಅಂಗೀಕರಿಸಿದೆ. ಸುಗ್ರೀವಾಜ್ಞೆ ಹೊರಡಿಸಿದ ನಂತರ ಪೂರ್ಣ ಪುಟಗಳನ್ನು ಬಹಿರಂಗಗೊಳಿಸಲಾಗಿದೆ.

ಹಿಂದಿನ ಮಸೂದೆಯ ಆಧಾರದಲ್ಲಿ ಅದನ್ನು ವಿರೋಧಿಸುತ್ತಿದ್ದ ವಿಭಾಗಗಳು ಸುಗ್ರೀವಾಜ್ಞೆಯ ಪೂರ್ಣ ಪುಟವನ್ನು ನೋಡಿ ಮತ್ತಷ್ಟು ಬೆಚ್ಚುಬೀಳುವಂತಾಗಿದೆ. ಮಸೂದೆಗಿಂತಾ ಅಪಾಯಕಾರಿ ನಿಯಮಾವಳಿಗಳನ್ನು ಈ ಸುಗ್ರೀವಾಜ್ಞೆ ಹೊಂದಿವೆ.

"ಭಯೋತ್ಪಾದಕ ಸಂಘಟನೆಗಳು" ಎಂಬ ಪ್ರತ್ಯೇಕ ಅಧ್ಯಾಯ (ಮೂರನೇ ಅಧ್ಯಾಯ)ವನ್ನು ಈ ಸುಗ್ರೀವಾಜ್ಞೆಗೆ ಸೇರ್ಪಡಿಸಲಾಗಿದೆ. ಇದು ಕೇಂದ್ರ ಸರ್ಕಾರಕ್ಕೆ ರಾಷ್ಟ್ರದ ಯಾವುದೇ ಸಂಘಟನೆಯನ್ನಾದರೂ ಭಯೋತ್ಪಾದಕ ಸಂಘಟನೆಯೆಂದು ನಿರ್ಧರಿಸಿ ಪಟ್ಟಿ ಮಾಡಲು ಅವಕಾಶಕಲ್ಪಿಸುತ್ತದೆ. ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಸಂಘಟನೆಗಳನ್ನು ನಿಷೇಧಿಸಲು ಸರ್ಕಾರಕ್ಕೆ ಅಧಿಕಾರ ಒದಗಿಸುವ ಕಾನೂನುಬಾಹಿರ ಚಟುವಟಿಕೆಗಳ (ನಿವಾರಣಾ) ಕಾಯ್ದೆ ಈಗಾಗಲೇ ಅಸ್ತಿತ್ವದಲ್ಲಿದೆ. ಈ ಕಾನೂನಿನ ಪ್ರಕಾರವೇ ಎಲ್.ಟಿ.ಟಿ.ಇ. ಯನ್ನೊಳಗೊಂಡಂತೆ, ಜಮ್ಮು ಕಾಶ್ಮೀರ ಮತ್ತು ಉತ್ತರ ಪೂರ್ವದ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅನೇಕ ಸಂಘಟನೆಗಳನ್ನು ನಿಷೇಧಿಸಲಾಗಿದೆ. ಇತ್ತೀಚಿನ SIMI ನಿಷೇಧವು (ಸ್ಟೂಡೆಂಟ್ ಇಸ್ಲಾಮಿಕ್ ಮೂಮೆಂಟ್ ಆಫ್ ಇಂಡಿಯಾ) ಈ ಕಾನೂನಿನ ಪ್ರಕಾರವೇ ಆಗಿದೆ.

ಕಾನೂನು ಬಾಹಿರ ಕಾಯ್ದೆಗಳ ಪ್ರಕಾರ ಯಾವುದೇ ಒಂದು ಸಂಘಟನೆಯನ್ನು ಕಾನೂನು ಬಾಹಿರವೆಂದು ಪ್ರಕಟಿಸಿದ ನಂತರ ಆರು ತಿಂಗಳೊಳಗಾಗಿ ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಾಧೀಶರನ್ನೊಳಗೊಂಡ ನ್ಯಾಯಮಂಡಲಿಯು ಅದನ್ನು ಅನುಮೋದಿಸಬೇಕಿತ್ತು. ಆದರೆ ಪ್ರಸ್ತುತ ಸುಗ್ರೀವಾಜ್ಞೆಯು ಈ ಪ್ರಕ್ರಿಯೆಯನ್ನು ಇಲ್ಲದಾಗಿಸಿದೆ. ಸರ್ಕಾರದ ತೀರ್ಮಾನ ಆರು ತಿಂಗಳೊಳಗಾಗಿ ನ್ಯಾಯ ಮಂಡಳಿಯ ಪರಿಶೀಲನೆಗೊಳಪಡಬೇಕೆಂಬ ಪ್ರಕ್ರಿಯೆ ಇನ್ನು ಮುಂದೆ ಇಲ್ಲ. ಬದಲಾಗಿ ನಿಷೇಧಿಸಲ್ಪಟ್ಟ ಸಂಘಟನೆಯು ತನ್ನ ಮೇಲಿನ ನಿಷೇಧವನ್ನು ತೆರವು ಗೊಳಿಸಬೇಕೆಂದು ಮನವಿ ಮಾಡಬೇಕು. ಮನವಿಯನ್ನು ಸರ್ಕಾರ ತಿರಸ್ಕರಿಸಿದಲ್ಲಿ ಮಾತ್ರ ನಿಷೇಧಿಸಲ್ಪಟ್ಟ ಸಂಘಟನೆಯು ಪರಾಮರ್ಶ ಸಮಿತಿಗೆ ಮೇಲ್ಮನವಿ ಸಲ್ಲಿಸಬಹುದು. ಪರಾಮರ್ಶ ಸಮಿತಿಯು ಇಬ್ಬರು ಸರ್ಕಾರದಿಂದ ನೇಮಿಸಲ್ಪಟ್ಟ ಸದಸ್ಯರೊಂದಿಗೆ, ಹಾಲಿ ಅಥವಾ ಮಾಜಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಅಧ್ಯಕ್ಷರನ್ನಾಗಿ ಒಳಗೊಂಡಿರುತ್ತದೆ. ಹಾಗಾಗಿ ಒಮ್ಮೆ ಒಂದು ಸಂಘಟನೆಯನ್ನು ಸರ್ಕಾರ ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿದ ನಂತರ ಸರ್ಕಾರ ಹಚ್ಚುವ ಈ ಹಣೆಪಟ್ಟಿಯಿಂದ ಸಂಘಟನೆಗಳು ವಿಮುಕ್ತವಾಗುವುದು ಅಥವಾ ಸರ್ಕಾರದ ತೀರ್ಮಾನ ಪರಾಮರ್ಶೆಗೊಳ್ಳುವುದು ಬಹು ಕಠಿಣ.

ಈ ಅಧ್ಯಾಯದಲ್ಲಿನ ಕಲಂಗಳು ವಿಧಿಸುವ ಶಿಕ್ಷೆಯೇನೂ ಕಡಿಮೆ ಯಾದುದಲ್ಲ. 1. ಭಯೋತ್ಪಾದಕ ಸಂಘಟನೆಗೆ ಸೇರಿದ ಕಾರಣ ಅಥವಾ ಅದಕ್ಕೆ ಸಂಬಂಧಪಟ್ಟ ಕಾರಣ ವಿಧಿಸಲಾಗುವ ಶಿಕ್ಷೆ 10 ವರ್ಷದ ಜೈಲುವಾಸದವರೆಗಿರಬಹುದು.

2. ಭಯೋತ್ಪಾದಕ ಸಂಘಟನೆಯನ್ನು ಬೆಂಬಲಿಸುವ ಸಭೆಗೆ ಸಹಾಯ ನೀಡಿದರೆ, ವ್ಯವಸ್ಥೆಗೊಳಿಸಿದರೆ ಅಥವಾ ನಿರ್ವಹಿಸಿದರೆ ಅಥವಾ ಅಂತಹ ಸಭೆಯನ್ನುದ್ದೇಶಿಸಿ ಮಾತಾಡಿದರೆ ಅಂತಹ ವ್ಯಕ್ತಿಗೂ ಸಹ 10 ವರ್ಷದವರೆಗಿನ ಜೈಲು ಶಿಕ್ಷೆಯನ್ನು ವಿಧಿಸಬಹುದು.

3. ತನಗೆ ತಿಳಿದಿದ್ದೂ ಸಹ ಅಥವಾ ತಿಳಿದುಕೊಳ್ಳುವ ಎಲ್ಲಾ ಅವಕಾಶಗಳೂ ಇದ್ದಾಗಿಯೂ ಸಹ ಗೊತ್ತಿದ್ದೂ ಗೊತ್ತಿದ್ದು, ಯಾವುದಾದರೂ ವ್ಯಕ್ತಿಯು ಭಯೋತ್ಪಾದನೆಯ ಉದ್ದೇಶಕ್ಕಾಗಿ ಬಳಸಲು ಹಣ ನೀಡುವಂತೆ ಅಥವಾ ಆಸ್ತಿ ನೀಡುವಂತೆ ಮತ್ತೊಬ್ಬ ವ್ಯಕ್ತಿಯನ್ನು ಆಹ್ವಾನಿಸಿದಲ್ಲಿ ಅಥವಾ ತಾನೇ ಹಣ ಪಡೆದಲ್ಲಿ ಅಥವಾ ತಾನೇ ನೀಡಿದಲ್ಲಿ ಅಂತಹಾ ವ್ಯಕ್ತಿಯೂ ಸಹ ಈ ಕಾನೂನಿನ ಪ್ರಕಾರ ಅಪರಾಧವೆಸಗುತ್ತಾನೆ. ಅಂತಹ ವ್ಯಕ್ತಿಗೆ 14 ವರ್ಷದವರೆಗಿನ ಜೈಲುವಾಸದ ಶಿಕ್ಷೆ ವಿಧಿಸಬಹುದಾಗಿದೆ. ಇಂತಹ ಜಾಳು ಜಾಳಾದ ಪರಿಭಾಷೆಗಳು ಹಾಗೂ ನಿರಂಕುಶ ಅಧಿಕಾರವನ್ನು ನೀಡುವ ಕಲಂಗಳು ದುರುಪಯೋಗಕ್ಕೆ ಹೇಳಿ ಮಾಡಿಸಿದಂತಿವೆ.

ಈ ಸುಗ್ರೀವಾಜ್ಞೆಯ ಕಲಂ 4(1) ಮತ್ತಷ್ಟು ಭಯಾನಕವಾಗಿದೆ. ಸೂಪರಿಟೆಂಡೆಂಟ್ ಆಫ್ ಪೊಲೀಸ್ ಹಾಗೂ ಅವರ ಮೇಲಿನ ಪೊಲೀಸ್ ಅಧಿಕಾರಿಗಳಿಗೆ ಯಾರು ಈ ಅಪರಾಧ ಕುರಿತು ತನಿಖೆ ನಡೆಸುತ್ತಿರುತ್ತಾರೊ ಅಂತಹವರೆಗೆ ಈ ಕಲಂ ವಿಶೇಷ ಅಧಿಕಾರ ಒದಗಿಸುತ್ತದೆ. ತನಿಖಾಧಿಕಾರಿಯು ಸುಗ್ರೀವಾಜ್ಞೆಯ ಉದ್ದೇಶಕ್ಕೆ ಉಪಯುಕ್ತವಾಗುವ ಅಥವಾ ಅವಶ್ಯಕವಾಗುವ ಯಾವುದೇ ಮಾಹಿತಿಯು, ಯಾವುದೇ ಒಬ್ಬ ವ್ಯಕ್ತಿ, ಸಂಘ ಅಥವಾ ಸಂಸ್ಥೆಯ ಬಳಿ ಇದೆಯೆಂದು ಭಾವಿಸಿದಲ್ಲಿ ಅಂತಹ ಮಾಹಿತಿಯನ್ನು ನೀಡುವಂತೆ ಒತ್ತಾಯಿಸಬಹುದು. ಮಾಹಿತಿಯನ್ನು ನೀಡಲು ವ್ಯಕ್ತಿಯು ವಿಫಲವಾದಲ್ಲಿ ಆ ವ್ಯಕ್ತಿಗೆ ದಂಡದೊಂದಿಗೆ, 3 ವರ್ಷದೊಳಗಿನ ಜೈಲುವಾಸ ವಿಧಿಸಬಹುದಾಗಿದೆ. ಈ ಕಲಂ ಪತ್ರಕರ್ತರನ್ನೂ ಬೇಟೆಯಾಡುವುದರಲ್ಲಿ ಸಂಶಯವಿಲ್ಲ. ಭೇಟಿಗೆ ಅವರು ಸಿಗದಿದ್ದಲ್ಲಿ ಜೈಲುವಾಸವೇ ಅವರಿಗೆ ಕಟ್ಟಿಟ್ಟ ಬುತ್ತಿ. ಗೃಹ ಕಾರ್ಯದರ್ಶಿಗಳೇನೂ ಈ ಕಲಂ ಪತ್ರಕರ್ತರಿಗನ್ವಯಿಸುವುದಿಲ್ಲವೆಂದು ಹೇಳಿದ್ದಾರೆ, ಆದರೆ ಪತ್ರಕರ್ತರು ಜೈಲುವಾಸದ ಭಯದಿಂದಾಗಿ ಪೋಲೀಸರ ಮಾಹಿತಿಕಾರರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ.

ಕಾನೂನುಬಾಹಿರ ಚಟುವಟಿಕೆಗಳ ಕಾಯ್ದೆಯಡಿ, ಕಾನೂನು ಬಾಹಿರವೆಂದು ಘೋಷಿಸಲ್ಪಟ್ಟ ಸಂಘಟನೆಯ ಸದಸ್ಯತ್ವದಲ್ಲಿ ಮುಂದುವರೆಯುವುದು ; ಭಯೋತ್ಪಾದನೆಯ ಉದ್ದೇಶಗಳಿಗಾಗಿ ನಿಧಿ ಸಂಗ್ರಹಿಸುವ ಕೆಲಸಗಳಲ್ಲಿ ತೊಡಗುವುದನ್ನೂ ಸಹ ಭಯೋತ್ಪಾದಿತ ಕೃತ್ಯವೆಂದು ಪರಿಭಾಷಿಸಲಾಗಿದೆ. ಬಾಳ ಸಂಗಾತಿಯನ್ನು ಹೊರತುಪಡಿಸಿ, ತಂದೆ, ಅಥವಾ ತಾಯಿ ರೀತಿಯ ಕುಟುಂಬದ ಸದಸ್ಯರೂ ಸಹ ಭಯೋತ್ಪಾದಕರಿಗೆ ಆಶ್ರಯ ನೀಡಿದ ಅಥವಾ ಅವರನ್ನು ರಕ್ಷಿಸುವ ಕಾರಣಗಳಿಗಾಗಿ ಶಿಕ್ಷಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅಂತಹವರಿಗೆ ಮೂರು ವರ್ಷಕ್ಕೆ ಕಡಿಮೆಯಿಲ್ಲದಂತೆ ಜೈಲುವಾಸದಿಂದಿಡಿದು ಜೀವಾವಧಿ ಶಿಕ್ಷೆಯನ್ನು ನೀಡಬಹುದಾಗಿದೆ.

ಈ ಸುಗ್ರೀವಾಜ್ಞೆಯಡಿ ಅಪರಾಧದಲ್ಲಿ ಬಂಧನಕ್ಕೊಳಪಡುವ ಆರೋಪಿಯನ್ನು ಜಾಮೀನು ನೀಡದೆ ಒಂದು ವರ್ಷದವರೆಗೆ ಬಂಧನದಲ್ಲಿಡಬಹುದಾಗಿದೆ. ಒಂದು ವರ್ಷದ ನಂತರವೂ ಜಾಮೀನು ಕೋರಿದಾಗ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ಜಾಮೀನು ಅರ್ಜಿಯನ್ನು ವಿರೋಧಿಸಿದಲ್ಲಿ, ನ್ಯಾಯಾಲಯವು ಅಂತಹ ಅಪರಾಧವನ್ನು ಎಸಗಿಲ್ಲವೆಂದು ಸಂತೃಪ್ತಿಪಡದ ಹೊರತೂ ಜಾಮೀನನ್ನು ನೀಡಲಾಗುವುದಿಲ್ಲ ಇದರ ಅರ್ಥವೇನೆಂದರೆ, ಆರೋಪಿಯು ನಿರಪರಾಧಿಯೆಂದು ನ್ಯಾಯಾಲಯವು ತೀರ್ಮಾನಕ್ಕೆ ಬರುವವರೆಗೆ ಆ ಆರೋಪಿಗೆ ಜಾಮೀನು ನೀಡಲಾಗುವುದಿಲ್ಲ ವೆಂಬುದಾಗಿದೆ. ಆದರೆ ಆರೋಪಿಯು ನಿರಪರಾಧಿಯಾಗಿದ್ದಲ್ಲಿ ಅವನನ್ನು ಬಂಧನದಲ್ಲಿಡುವ ಅಗತ್ಯವಾದರೂ ಏನಿದೆ?. ಭಾರತೀಯ ಪ್ರಜೆಗಳ ನಾಗರೀಕ ಸ್ವತಂತ್ರದ ಮೇಲೆ ಈ ಸುಗ್ರೀವಾಜ್ಞೆ ತೀವ್ರ ದಾಳಿಮಾಡುತ್ತಿರುವಾಗಲೇ ವಿದೇಶಿ ಪ್ರಜೆಗಳ ಕುರಿತಂತೂ ಅವ[illegible] ಮಾನವ ಹಕ್ಕುಗಳನ್ನು ಕಸಿದುಕೊಳ್ಳಲಿದೆ. ಈ ಸುಗ್ರೀವಾಜ್ಞೆಯಡಿ ಆರೋಪಿಯಾಗುವ ಭಾರತೀಯ ಪ್ರಜೆಯಲ್ಲದ ಅನಧಿಕೃತವಾಗಿ ದೇಶದೊಳಗೆ ಬಂದಿರುವವರಿಗೆ ಕಲಂ 48(9) ಯಾವುದೇ ಜಾಮೀನನ್ನು ನೀಡಲಾಗದೆಂದು ಹೇಳುತ್ತದೆ.

ಅಮೇರಿಕಾ ಸಂಸತ್ತು ಅಂಗೀಕರಿಸಿರುವ ಭಯೋತ್ಪಾದಕ ವಿರೋಧಿ ಕಾನೂನು ವಿದೇಶಿ ಪ್ರಜೆಗಳನ್ನು ಅಥವಾ ಅನಧಿಕೃತ ವಲಸೆಗಾರರನ್ನು ಒಂದು ವಾರಕ್ಕಿಂತಾ ಹೆಚ್ಚು ಬಂಧನದಲ್ಲಿಡಬಾರದು, ಅದಾದ ನಂತರ ಅವರ ಮೇಲೆ ಆರೋಪ ಸಲ್ಲಿಸಬೇಕು ಇಲ್ಲವೆ ಅವರನ್ನು ಬಿಡುಗಡೆ ಮಾಡಬೇಕೆಂದು ಸೂಚಿಸುತ್ತದೆ ಎಂಬುದನ್ನು ಅಮೇರಿಕಾದ ಅಂಧ ಅಭಿಮಾನಿಗಳಾದ ಬಿಜೆಪಿ ನಾಯಕರು ಅರಿಯಬೇಕಿದೆ.

ಇಂತಹ ಕಾನೂನು ಏನೆಲ್ಲಾ ಅನಾಹುತ ಮಾಡಬಹುದೆಂಬುದನ್ನು ಕಲ್ಪಿಸಿಕೊಳ್ಳುವುದು ಕಷ್ಟವೇನಲ್ಲ ಉದಾಹರಣೆಗೆ ಯಾವುದಾದರೂ SIMI ಸದಸ್ಯರನ್ನು ಭಯೋತ್ಪಾದಕ ಸಂಘಟನೆಗೆ ಸೇರಿದನೆಂದು ಬಂಧಿಸಬಹುದು, ಅವರ ಕುಟುಂಬದ ಸದಸ್ಯರನ್ನೂ ಸಹ ಭಯೋತ್ಪಾದಕನಿಗೆ ಆಶ್ರಯ ನೀಡಿದರೆಂದು ಬಂಧಿಸಬಹುದು. SIMI ಸಭೆಗಳಲ್ಲಿ ಭಾಗವಹಿಸುವ ಸಾವಿರಾರು ಮಂದಿಗಳಲ್ಲಿ ಯಾರಾದರೂ ಒಬ್ಬನನ್ನು ಅಥವಾ ಅದಕ್ಕೆ ನಿಧಿ ಸಂಗ್ರಹಿಸಿದರೆಂದು ನಿಧಿ ನೀಡಿದವರೆಂದು ಬಂಧಿಸಬಹುದು. ಒಮ್ಮೆ ಬಂದಿಸಲ್ಪಟ್ಟಲ್ಲಿ ಒಂದು ವರ್ಷದವರೆಗೆ ಹೊರಗೆ ಬರುವ ನಂಬಿಕೆ ಇಲ್ಲ. ದಂಡ ಪ್ರಕ್ರಿಯಾ ಸಮಿತಿಯ ಕಾನೂನಿನ ಸಾಮಾನ್ಯ ಪ್ರಕ್ರಿಯೆಗಳ ಅವಕಾಶ ಅಂತಹವರಿಗಿಲ್ಲದಿರುವ ಕಾರಣ ವಿಚಾರಣೆಯ ಸಂಧರ್ಭದಲ್ಲಂತೂ ನೂರೆಂಟು ಸಮಸ್ಯೆಗಳನ್ನೆದುರಿಸಬೇಕಾಗುತ್ತದೆ.

ಬಹಳಷ್ಟು ಪ್ರದೇಶಗಳಲ್ಲಿ ತಮ್ಮ ಅಧಿಕಾರಮದದ ದುರುಪಯೋಗಕ್ಕೆ ಹೆಸರುವಾಸಿಯಾಗಿರುವ ಪೊಲೀಸರ ಕೈಯ್ಯಲ್ಲಿ ಇಂತಹ ಕಾನೂನುಗಳು ಎಂತೆಲ್ಲಾ ಅನಾಹುತಗಳನ್ನು ಸೃಷ್ಟಿಸಬಹುದೆಂದು ಯೋಚಿಸಬೇಕಿದೆ. ಈ ಸುಗ್ರೀವಾಜ್ಞೆಯಡಿ ಬಂಧಿಸುವ ಮೂಲಕ ಅಪರಾಧ ಪತ್ತೆ ಹಚ್ಚುವ ಪ್ರಗತಿಯನ್ನು ತೋರಿಸಲು ಸುಲಭವಾಗಬಹುದು. ಹೇಗಿದ್ದರೂ ಇದರಲ್ಲಿ ಕಷ್ಟಕರ ತನಿಖೆಯ ಅವಶ್ಯಕತೆಯಿಲ್ಲ. ಒಮ್ಮೆ ಭಯೋತ್ಪಾದಕ ಚಟುವಟಿಕೆಯಡಿಯಲ್ಲಿ ಬಂದಿಸಲ್ಪಟ್ಟರೆ ಅದಕ್ಕೆ ಸವಾಲೆಸಗುವ ಅವಕಾಶವೇ ಇಲ್ಲ. ಇದಕ್ಕಿಂತಾ ಅಪಾಯಕಾರಿಯಾದುದೆಂದರೆ ಭ್ರಷ್ಟ ಪೊಲೀಸರು ತಮ್ಮ ಉದ್ದೇಶಿತ ವ್ಯಕ್ತಿಗಳಿಂದ ಈ ಕಾನೂನಿನ ಹೆಸರಿನಲ್ಲಿ ಹಣ ಕೀಳುವ ಕೆಲಸಕ್ಕೆ ತೊಡಗುವುದು.

ಗುಜರಾತ್, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶದಂತಾ ರಾಷ್ಟ್ರದ ವಿವಿಧ ಭಾಗಗಳಲ್ಲಿ ಈಗಾಗಲೆ ಪೊಲೀಸ್ ವ್ಯವಸ್ಥೆ, ಅಲ್ಪಸಂಖ್ಯಾತರ ವಿರುದ್ಧ ಪೂರ್ವಾಗ್ರಹ ಪೀಡಿತವಾದುದ್ದಾಗಿದೆ. ಹಾಗಾಗಿ POTO ಅಲ್ಪಸಂಖ್ಯಾತರನ್ನು ಶೋಷಿಸುವ ಹಾಗೂ ತುಳಿಯುವ ಒಂದು ಪ್ರಬಲ ಅಸ್ತ್ರವಾಗಲಿದೆ.

ದೆಹಲಿಯ ಆರು ವಿದ್ಯಾರ್ಥಿಗಳ ಮೇಲೆ ಹೊರಿಸಲ್ಪಟ್ಟಿರುವ ಮಾನನಷ್ಟ ಮೊಕದ್ದಮೆಗಳು ಹಾಗೂ ಮಲ್ಯಗಾವನಲ್ಲಿ ಅಮೇರಿಕಾದ ವಸ್ತುಗಳನ್ನು ಬಹಿಷ್ಕರಿಸುವ ಕರೆಯುಳ್ಳ ಕರಪತ್ರವನ್ನು ಹಂಚುತ್ತಿದ್ದರೆಂಬ ಕಾರಣಕ್ಕೆ ಮುಸಲ್ಮಾನರನ್ನು ಬಂಧಿಸಿರುವ ಪೊಲೀಸರ ಕ್ರಮಗಳು, ಅಫ್ಘಾನಿಸ್ತಾನದ ಮೇಲಿನ ಅಮೇರಿಕಾದ ಯುದ್ಧವನ್ನು ಖಂಡಿಸುವವರ ಮೇಲೆ, ಪೊಲೀಸರು ಯಾವರೀತಿ ದಾಳಿ ಮಾಡಿದ್ದಾರೆಂಬ ಅಂಶದ ಸೂಚಕವಾಗಿದೆ. ಪರಿಣಾಮವಾಗಿ ಫುಲ್ಮೈಗಾವ್‌ನಲ್ಲಿನ ಕೋಮುಗಲಭೆ ಮತ್ತು ಪೊಲೀಸರ ಗುಂಡಿಗೆ ಬಲಿಯಾದ ಒಂಭತ್ತು ಜನ ಮುಸಲ್ಮಾನರ ಹತ್ಯೆ ನೋಡಬಹುದಾಗಿದೆ.

ಭಾರತದಲ್ಲಿ ಕೋಮು ಧ್ರುವೀಕರಣ ಬಯಸುವ ಬಿಜೆಪಿ, ಆರ್.ಎಸ್.ಎಸ್. ಕೂಟದ ಪ್ರತಿಗಾಮಿ ಉದ್ದೇಶಗಳಿಗೆ ಈ POTOವನ್ನು ರಾಜಕೀಯವಾಗಿ ಬಳಸಲು ಬಿಜೆಪಿ ನೇತೃತ್ವದ ಸರ್ಕಾರ ಹವಣಿಸುತ್ತಿದೆ. ಈಗಾಗಲೆ ಭಯೋತ್ಪಾದನಾ ವಿರುದ್ಧದ ಅಮೇರಿಕಾದ ಯುದ್ಧವನ್ನು ಉತ್ತರ ಪ್ರದೇಶದ ಚುನಾವಣೆಗಳ ಮೇಲೆ ಕಣ್ಣಿರಿಸಿ ಹಿಂದು - ಮುಸ್ಲಿಮರ ನಡುವಿನ ವಿಷಯವನ್ನಾಗಿಸಲು ಹವಣಿಸುತ್ತಿದೆ. ಹಾಗಾಗಿ POTO; ಬಿಜೆಪಿ ನೇತೃತ್ವದ ಸರ್ಕಾರದ ಕೈಯ್ಯಲ್ಲಿ ಅಪಾಯಕಾರಿ ಅಸ್ತ್ರವಾಗಲಿದೆ.

ಆರ್ಥಿಕ ನೀತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸುವ ಎಲ್ಲಾ ಸಂಘಟನೆಗಳು ಹಾಗೂ ಚಳುವಳಿಗಳ ಮೇಲೆ ಬಳಸಬಹುದಾದ ಅಸ್ತ್ರವಾಗಿ ಈ POTO ಮೂಡಿಬರಬಹುದಾಗಿದೆ. 70ರ ದಶಕ ಹಾಗೂ ತುರ್ತು ಪರಿಸ್ಥಿತಿಯ ಸಮಯದಲ್ಲಿ MISA (ಅಂತರಿಕ ಭದ್ರತೆ ನಿರ್ವಹಣಾ ಕಾಯ್ದೆ) ಉಪಯೋಗ, ಅದಾದನಂತರ ಬಂದ ಟಾಡಾ (TADA)ವನ್ನು ಈಗಾಗಲೆ ನಾವು ನೋಡಿದ್ದೇವೆ. ಹಾಗಾಗಿ ಈ ಸುಗ್ರೀವಾಜ್ಞೆ POTO ವನ್ನು ಬಿಜೆಪಿ ನೇತೃತ್ವದ ಸರ್ಕಾರ ಕಾನೂನನ್ನಾಗಿಸುವ POTA (prevuntion of terroriet Act) ಭಯೋತ್ಪಾದನಾ ನಿವಾರಣಾ ಕಾಯ್ದೆ)ವನ್ನು ತಡೆಯಬೇಕಿದೆ.

ಜಾಗತೀಕರಣದ ಧಾಳಿಗಳು ವಿಶ್ವದೆಲ್ಲೆಡೆ ತೀವ್ರಗೊಳ್ಳುತ್ತಿವೆ. ಹಾಗೇ ಭಾರತದಲ್ಲಿಯೂ ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳಗಾರರಿಗೆ, ದೇಶೀಯ ಸುಲಿಗೆಕೋರರಿಗೆ ಸುಧಾರಣೆ ಹೆಸರಲ್ಲಿ ದುಡಿವ ಜನಕೋಟಿಯ ಮೇಲೆ ಹೊಸ ಹೊಸ ಆಕ್ರಮಣ ನಡೆಸಲು ವಾಜಪೇಯಿ ಸರ್ಕಾರ ಮುಂದಾಗಿದೆ. ಅದರ ಫಲವೇ ಹಲವು ಸಮಿತಿಗಳ ನೇಮಕ. ಇಂತಹ ಜಾಗತೀಕರಣದ ವಿರುದ್ಧ ಜಗತ್ತಿನಾದ್ಯಂತ ಮೂಡಿಬರುತ್ತಿರುವ ಐತಿಹಾಸಿಕ ಹೋರಾಟದ ಬಗ್ಗೆ ಲೇಖಕರು ವಿವರಿಸಿದ್ದಾರೆ.



ದೆಹಲಿಯಲ್ಲಿ ನಡೆದ ಭಾರೀ ಪ್ರತಿಭಟನೆಯ ಸಭೆಯಲ್ಲಿ 'ಪೀಪಲ್ಸ್ ಫ್ರಂಟ್' ನಾಯಕರು


ಜಾಗತೀಕರಣದ ವಿರುದ್ಧ

ಜಾಗತಿಕ ಹೋರಾಟದ ರಣಕಹಳೆ

'ಜಾಗತೀಕರಣ' ನೀತಿಗಳು ವಿಶ್ವವ್ಯಾಪಾರ ಸಂಘಟನೆ ಸ್ಥಾಪನೆಯೊಂದಿಗೆ 142 ದೇಶಗಳು ಬಹುಮುಖದ ಒಪ್ಪಂದಕ್ಕೆ ಸಹಿ ಹಾಕಿಕೊಂಡು ಜಗತ್ತಿನ ವ್ಯಾಪಾರಕ್ಕೆ ಅಡೆತಡೆಗಳಿಲ್ಲದಂತೆ ಅನುಕೂಲವಾಗಲು ದೊಡ್ಡ ನೆಲೆಯನ್ನು ಹಾಕಲಾಯಿತು. ಜಗತ್ತಿನ ವ್ಯಾಪಾರದ ಮೂಲಕ ಭಾರತದಂತಹ ದೇಶಗಳಲ್ಲಿಯೂ ವಿದೇಶಿ ಬಂಡವಾಳ ದೊಡ್ಡದಾಗಿ ಬಂದು ಕೈಗಾರೀಕರಣ ಹೆಚ್ಚಾಗಿ ಅದರಿಂದ ಉದ್ಯೋಗ ಸೃಷ್ಟಿ ಭಾರಿ ಪ್ರಮಾಣದಲ್ಲಿ ಆಗುವುದೆಂದು ಹಾಗೂ ದೇಶದ ಕೃಷಿ ರಂಗದ ಹಾಗೂ ಕೈಗಾರಿಕಾ ರಂಗದ ಉತ್ಪಾದನೆಯಾದ ಸರಕುಗಳು ಇತರ ದೇಶಗಳಿಗೆ ರಫ್ತ ಮೂಲಕ ಮಾರಾಟ ಮಾಡಿ ದೇಶದಲ್ಲಿ ಸಮೃದ್ಧಿ ಉಂಟಾಗುತ್ತದೆಂದು ಪ್ರಚಾರ ಮಾಡಲಾಗಿತ್ತು. ಈ ಆರಂಭದ ಹಂತದಲ್ಲೇ ICFTU ಅಂತರ್‍ರಾಷ್ಟ್ರೀಯ ಸ್ವತಂತ್ರ ಕಾರ್ಮಿಕ ಸಂಘಟನೆಗಳ ಕಾನ್ಫೆಡರೇಷನ್ ಮುಖಂಡರು ಜಗತ್ತಿನಾದ್ಯಂತ ಓಡಾಡಿ ಜಾಗತೀಕರಣ ನೀತಿಗಳು ಕಾರ್ಮಿಕರಿಗೆ ಸಹಾಯಕವಾಗುತ್ತದೆಂದು ಇದಕ್ಕಾಗಿ ಜಾಗತೀಕರಣ ನೀತಿಗಳಿಗೆ ಜಗತ್ತಿನ ಕಾರ್ಮಿಕ ಚಳುವಳಿ ಬೆಂಬಲಿಸುವುದು ಅಗತ್ಯವೆಂದು ಪ್ರಚಾರ ನಡೆಸಿದ್ದರು. ಆದರೇ ಅದೇ ICFTU ಸಂಘಟನೆ ಈಗ ನವೆಂಬರ್ 9 ರಂದು ಜಾಗತಿಕ ಪ್ರತಿಭಟನೆ ನಡೆಸಲು ಕರೆ ನೀಡಿದೆ. ಭಾರತದಲ್ಲಿ ICFTU, INTUC, ಸಂಘಟನೆಗಳು ಸಂಯೋಜಿತವಾಗಿವೆ.

ಜಾಗತಿಕ ವ್ಯಾಪರಾವೆಂದರೆ ಜಗತ್ತಿನಾದ್ಯಂತ ವ್ಯಾಪಾರ ಮಾಡುವ ಸಾಮರ್ಥ್ಯ ಇರುವ ಅಮೆರಿಕಾ, ಜಪಾನ್ ಮುಂತಾದ ಮುಂದುವರೆದ ದೇಶಗಳಲ್ಲಿ ನೆಲೆ ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಾರಕ್ಕೆ ಅಡೆತಡೆ ಇಲ್ಲದಂತೆ ಹಣಕಾಸು ಬಂಡವಾಳದ ಜಾಗತಿಕ ವಹಿವಾಟಿಗೆ ಮುಕ್ತ ಅವಕಾಶ ಇರಬೇಕೆಂದು ಹಾಗೂ ಆ ಬಂಡವಾಳಶಾಹಿಗಳು ಜಗತ್ತಿನ ರೈತರ ಕಾರ್ಮಿಕರ ಮುಕ್ತವಾದ ಶೋಷಣೆಗೆ ಅವಕಾಶವಾಗಬೇಕೆಂದು ಅದಕ್ಕಾಗಿ ಎಲ್ಲ ದೇಶಗಳ ಕಾನೂನುಗಳನ್ನು ಸಡಿಲಗೊಳಿಸುವುದು ಅಥವಾ ಕೆಲವು ರಕ್ಷಣೆ ನೀಡುವ ಅಲ್ಪಸ್ವಲ್ಪ ಕಾನೂನುಗಳನ್ನು ಕಿತ್ತುಹಾಕುವ ದಾರಿಯಲ್ಲಿ ದಾಪುಗಾಲು ಹಾಕಲಾಗುತ್ತಿದೆ.

ಜಾಗತೀಕರಣದ ನೀತಿಗಳ ಭಾಗವಾಗಿ ಈಗಾಗಲೇ ಖಾಸಗೀಕರಣ ಹಾಗೂ ಉದಾರೀಕರಣದ ಮೂಲಕ ಅತ್ಯಂತ ಲಾಭದಾಯಕ ಸಂಸ್ಥೆಗಳನ್ನು ಒಳಗೊಂಡಂತೆ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳನ್ನು ಅತ್ಯಂತ ಅಗ್ಗವಾಗಿ ಮೂರು ಕಾಸಿಗೆ ಬಹುರಾಷ್ಟ್ರೀಯ ವಿದೇಶಿ ಬಂಡವಾಳಗಾರರಿಗೆ ಹಾಗೂ ದೇಶೀಯ ಬಂಡವಾಳಗಾರರಿಗೆ ಮಾರಾಟ ಮಾಡಲಾಗುತ್ತಿದೆ. ಈಗ ಸರ್ಕಾರವು ಜಾಗತೀಕರಣದ ಸುಧಾರಣೆಗಳ 2ನೇ ಹಂತದ ಸುಧಾರಣೆಗಳಲ್ಲಿ ಮುಖ್ಯವಾಗಿ ಕಾರ್ಮಿಕ ಕ್ಷೇತ್ರದ ಸುಧಾರಣೆಗಳು ಹಾಗೂ ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಬಗ್ಗೆ ತೀವ್ರ ಒತ್ತಡದಲ್ಲಿ ಜಾರಿಗೊಳಿಸಲು ಭಾರತ ಸರಕಾರ ಮುಂದಾಗುತ್ತಿದೆ. ಜಾಗತೀಕರಣದ ನೀತಿಗಳನ್ನು ತೀವ್ರಗತಿಯಲ್ಲಿ ಜಾರಿಗೊಳಿಸಲು ಕೇಂದ್ರ ಸರಕಾರ ನೇಮಿಸಿರುವ ಮೂರು ಸಮಿತಿಗಳು ಅತ್ಯಂತ ಅಪಾಯಕಾರೀ ಶಿಫಾರಸ್ಸುಗಳನ್ನು ಮಾಡಿವೆ. ಅದರಲ್ಲಿ ವೆಚ್ಚ ಸುಧಾರಣಾ ಸಮಿತಿ ಅಂದರೆ ಗೀತಾ ಕೃಷ್ಣನ್ ಸಮಿತಿ ಸರಕಾರ ವೆಚ್ಚವನ್ನು ಕಡಿಮೆ ಮಾಡಲು ಮುಖ್ಯವಾಗಿ ಇಡೀ ಸರಕಾರ (ಕೇಂದ್ರ-ರಾಜ್ಯ) ಹಾಗೂ ಸರಕಾರಿ ಸ್ವಾಮ್ಯದ ಸಾರ್ವಜನಿಕ ಕ್ಷೇತ್ರದಲ್ಲಿ (ಎಂದರೆ ಬ್ಯಾಂಕ್, ವಿಮಾ ಇತರೆ) ಒಟ್ಟಾರೆ 300 ಲಕ್ಷ ನೌಕರರು ದುಡಿಯುತ್ತಿದ್ದು ಸರಕಾರ ಈ ನೌಕರರ ಸಂಖ್ಯೆಯನ್ನು ಕೇವಲ 4 ರಿಂದ 5 ಲಕ್ಷಕ್ಕಿಳಿಸಿ ಕೆಲಸ ಮಾಡಬೇಕೆಂಬ ಸಲಹೆ ನೀಡಿದೆ. ಅದಕ್ಕೆ ಸರಕಾರ ಕೆಲಸಗಳನ್ನು ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲು ಅಥವಾ ಖಾಸಗೀಕರಿಸಲು ಶಿಫಾರಸ್ಸು ಮಾಡಿದೆ. ಈಗಾಗಲೇ ಈ ದಿಸೆಯಲ್ಲಿ ಕರ್ನಾಟಕ ಸರಕಾರ ಈಗಾಗಲೇ 20 ಸಾವಿರ ಹುದ್ದೆಗಳನ್ನು 2 ವರ್ಷಗಳ ಹಿಂದೆಯೇ ರದ್ದುಗೊಳಿಸಿದ್ದಲ್ಲದೇ ಇನ್ನೂ 80 ಸಾವಿರ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರಲು ನಿರ್ಣಯಿಸಿದೆ. ಮತ್ತಷ್ಟು ಮುಂದುವರೆದು ಕಾಂಗ್ರೆ ಮುಖಂಡ ಹಾರನಹಳ್ಳಿ ರಾಮಸ್ವಾಮಿ ನೇತೃತ್ವದಲ್ಲಿ ಆಡಳಿತ ಸುಧಾರಣೆ ಬಗ್ಗೆ ಸಮಿತಿಯು ಕರ್ನಾಟಕ ಸರಕಾರ ಇನ್ನು ಮುಂದೆ ಕೂಡಲೇ 7 ಕೆಲಸಗಳನ್ನು ಖಾಸಗೀಕರಿಸಲು ಶಿಫಾರಸ್ಸು ಮಾಡಿದೆ. ಅದರಲ್ಲಿ ಮುಖ್ಯವಾಗಿ ಇನ್ನು ಮುಂದೆ ಡ್ರೈವರ್‌ಗಳನ್ನು, ಜವಾನರು, ಅಟೆಂಡರ್, ವಾಚ್‌ಮನ್‌ಗಳು, ತೋಟ ನಿರ್ವಹಣೆ, ಸ್ವಚ್ಛತಾ ಪೌರ ನೌಕರರ ಅವಶ್ಯಕತೆಯು ಇಲ್ಲ ಎಂದು ಶಿಫಾರಸ್ಸು



ಮಾಡಲಾಗಿದೆ. ಅಲ್ಲದೇ ಸರಕಾರಿ ನೌಕರರು ಮೃತಪಟ್ಟರೆ ಅವರ ಕುಟುಂಬಕ್ಕೆ ಸಹಾನುಭೂತಿ ಆಧಾರದಲ್ಲಿ ನೀಡುತ್ತಿದ್ದ ನೌಕರಿಗಳನ್ನು ರದ್ದುಗೊಳಿಸಲು ಶಿಫಾರಸ್ಸು ಮಾಡಿದೆ. ಅಲ್ಲದೇ ತುಟ್ಟಿಭತ್ಯೆಯನ್ನು ಮುಂದಿನ ದಿನಗಳಲ್ಲಿ ಕೊಡಬೇಕಾಗಿಲ್ಲ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ. ಈ ಸಮಿತಿಯ ಶಿಫಾರಸ್ಸುಗಳು ಈಗಾಗಲೇ ಜಾರಿಯಾಗಲು ಆರಂಭವಾಗಿದೆ.

ಮತ್ತೊಂದು ರಾಕೇಶ್ ಮೋಹನ್ ಸಮಿತಿ ಮುಖ್ಯವಾಗಿ ರೈಲ್ವೇ ಇಲಾಖೆಯಲ್ಲಿ ಸುಧಾರಣೆಗಳನ್ನು ಶಿಫಾರಸ್ಸು ಮಾಡಿದ್ದು ರಸ್ತೆಯಲ್ಲಿ ಹೇಗೆ ಕೆಎಸ್‌ಆರ್‌ಟಿಸಿ ಹಾಗೂ ಖಾಸಗಿ ವಾಹನ ಸಂಚಾರ ಮಾಡುತ್ತವೆಯೋ ಹಾಗೆಯೇ ರೈಲ್ವೆ ಹಳಿಯ ಮೇಲೆ ಖಾಸಗಿ ರೈಲುಗಳು ಸಂಚಾರ ಮಾಡಲು ಅವಕಾಶ ನೀಡುವುದು ಸೇರಿದಂತೆ ರೈಲ್ವೆ ಇಲಾಖೆಯನ್ನು ಕಂಪನಿಯಾಗಿ ಮಾಡಿ ಖಾಸಗಿ ಮಾರಾಟಕ್ಕೆ ಅನುವು ಮಾಡಲಾಗುತ್ತಿದೆ. ದೇಶದ ಜನತೆಯ ಬೆವರು ಸುರಿಸಿ ದುಡಿದ ಹಣದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಹೂಡಿ ಸಿದ್ಧಗೊಳಿಸಿರುವ ಸಂಪನ್ಮೂಲಗಳನ್ನು ಖಾಸಗಿ ಮಾಲೀಕರಿಗೆ ದಾರೆ ಎರೆದು ಕೊಡಲಾಗುತ್ತಿದೆ.

ಬ್ಯಾಂಕ್‌ಗಳಲ್ಲಿ ಸರಕಾರದ ಬಂಡವಾಳವನ್ನು ಶೇ 49 ಕ್ಕೆ ಇಳಿಸುವ ಹಾಗೂ ಖಾಸಗಿ ಸಂಸ್ಥೆಗಳು ಶೇ 51 ಹೊಂದಲು ಬ್ಯಾಂಕು ರಾಷ್ಟ್ರೀಕರಣ ಕಾನೂನಿಗೆ ತಿದ್ದುಪಡಿ ಮಾಡಲು ಹಾತೊರೆಯುತ್ತಿದೆ.

ಮತ್ತೊಂದು ಮಹತ್ವದ ಸಮಿತಿಯೆಂದರೆ ಯೋಜನಾ ಆಯೋಗವು ಭಾರತದಲ್ಲಿ ಉದ್ಯೋಗಗಳನ್ನು ಸೃಷ್ಟಿಸಲು ಶಿಫಾರಸ್ಸು ನೀಡಲು ಮೌಂಟೆಕ್ ಸಿಂಗ್ ಅಹ್ಲುವಾಲೀಯ ನೇತೃತ್ವದ ಕಾರ್ಯಪಡೆ ರಚಿಸಲಾಗಿದೆ. ಈ ಕಾರ್ಯಪಡೆ ಭಾರಿ ಕಸರತ್ತು ಮಾಡಿ ಅಧ್ಯಯನ ಮಾಡಿ ಕಂಡು ಹಿಡಿದಿದ್ದೇವೆಂದರೆ 'ಗುಡ್ಡ ಕಡಿದು ಇಲಿ ಹಿಡಿದರು' ಅಂದ ಹಾಗೆ ಉದ್ಯೋಗ ಸೃಷ್ಟಿ ಮಾಡಲು ನಮ್ಮ ದೇಶದ ಕಾರ್ಮಿಕ ಕಾನೂನುಗಳು ಭಾರೀ ಅಡ್ಡಿ ಆಗಿವೆ. ಆದ ಕಾರಣ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಮೊಟಕುಗೊಳಿಸಿ ಬಂಡವಾಳಗಾರರು ಮುಕ್ತ ವ್ಯವಹಾರ ಮಾಡಲು ಅವಕಾಶವಾಗಬೇಕೆಂದು, ಅದರಿಂದ ಉದ್ಯೋಗಿಗಳನ್ನು ಬೇಕಾದರೆ ಇಟ್ಟುಕೊಳ್ಳಬಹುದು ಸಾಕಾದರೆ ಕಿತ್ತು ಹಾಕುವುದು ಸೇರಿದಂತೆ ಸಂಸ್ಥೆಯನ್ನು ಯಾವಾಗ ಬೇಕಾದರೂ ಮುಚ್ಚಲು ಮುಕ್ತ ಅವಕಾಶ ಇರುವಂತೆ ಮಾಡಲು ಶಿಫಾರಸ್ಸು ಮಾಡಲಾಗಿದೆ. ಕೇಂದ್ರ ಸರಕಾರವು ಈಗಿರುವ ಕಾನೂನುಗಳಿಗೆ ಕೆಲವು ತಿದ್ದುಪಡಿ ಸೂಚಿಸಿದರೆ ಮೊಂಟೆಕ್ ಸಿಂಗ್ ಅಹ್ಲುವಾಲಿಯ ಸಮಿತಿ ಕಾನೂನುಗಳು ರದ್ದುಗೊಳಿಸಲು ಶಿಫಾರಸ್ಸು ಮಾಡಿದೆ.

ಮೇಲಿನ ಎಲ್ಲಾ ಜನವಿರೋಧಿ ನೀತಿಗಳ ವಿರದ್ಧ 2001 ರ 9ನೇ ನವೆಂಬರ ರಂದು ಜಾಗತಿಕ ಪ್ರತಿಭಟನೆ ನಡೆಸುವ ಪ್ರಾಮುಖ್ಯತೆ ಏನೆಂದರೆ ಅದೇ ದಿನ ಡಬ್ಲ್ಯುಟಿಒ ರಾಷ್ಟಗಳ ಮಂತ್ರಿ ಮಟ್ಟದ ಶೃಂಗಸಭೆ 'ಕತಾರ್' ನಲ್ಲಿ ನಡೆಯಲಿದೆ. IC.. ಕರೆಯನ್ನು WFTU ಹಾಗೂ WCL ಕೂಡ ಬೆಂಬಲಿಸಿವೆ. ಭಾರತದಲ್ಲಿ ಸಿಐಟಿಯು ಸೇರಿದಂತೆ ಸ್ಪಾನ್ಸರಿಂಗ್ ಕಮಿಟಿ ರಾಷ್ಟ ಸಮಾವೇಶ ದಿನಾಂಕ 17.10.2001 ರಂದು ನಡೆದು ಈ ಚಳುವಳಿಯಲ್ಲಿ ಧುಮುಕಲು ಕರೆ ನೀಡಿದೆ. ಇದರಲ್ಲಿ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಹೆಚ್‌ಎಂಕೆಪಿ, ಇಂಟಕ್, ಬಿಎಂಎಸ್ ಅಲ್ಲದೇ ಬ್ಯಾಂಕ್, ಇನ್ಶೂರೆನ್ಸ್, ಕೇಂದ್ರ-ರಾಜ್ಯ ಸರ್ಕಾರಿ ನೌಕರರ ಸಂಘಗಳ ಹಾಗೂ ಇನ್ನಿತರ ಸಂಘಟನೆಗಳು ಭಾಗವಹಿಸುತ್ತಿದೆ. ಅಮೆರಿಕಾದ ಸಿಯಾಟಲ್ ನಗರದಲ್ಲಿ WTO ಶೃಂಗಸಭೆಗಳ ವಿರುದ್ಧ ಆರಂಭಗೊಂಡ ಪ್ರತಿಭಟನಾ ಮಹಾಪೂರವು ಸ್ವಿಡ್ಜರ್‌ಲ್ಯಾಂಡ್‌ನ ಗೋತನ್‌ಬರ್ಗ್ ಹಾಗೂ ಇತ್ತೀಚಿಗಿನ ಜಿನೋವಾದಲ್ಲಿ ನಡೆದ ಸಭೆಗಳ ಸಂದರ್ಭದಲ್ಲಿ ನಡೆದ ಪ್ರತಿಭಟನೆಗಳು ವಿಶ್ವದ ಶೋಷಕರು ಸಭೆ ನಡೆಸುವುದು ಕಷ್ಟ ಎಂಬ ವಾತಾರಣ ನಿರ್ಮಾಣ ಮಾಡುತ್ತಿವೆ. ಇದುವರೆಗೆ ಅಲ್ಲಲ್ಲೇ ನಡೆಯುತ್ತಿದ್ದ ಪ್ರತಿಭಟನೆಯು ಈಗ 'ಜಾಗತೀಕರಣದ ವಿರುದ್ಧ ಜಾಗತಿಕ ಹೋರಾಟ' ವಾಗಿ ರೂಪುಗೊಂಡಿದೆ.

- ಎಸ್.ಪ್ರಸನ್ನಕುಮಾರ್



ದೋಹಾದಲ್ಲಿ ರೈತ ಕಾರ್ಮಿಕರಿಗೆ ದ್ರೋಹ!

ದೋಹಾದಲ್ಲಿ ರೈತ ಕಾರ್ಮಿಕರಿಗೆ ಜನಸಾಮಾನ್ಯರಿಗೆ ದ್ರೋಹ ಬಗೆಯಲಾಗಿದೆ. ದೋಹಾ ಮಧ್ಯ ಏಶ್ಯಾದ ಕೊಲ್ಲಿ ಪ್ರದೇಶದಲ್ಲಿ ಕತಾರ್ ಎಂಬ ದೇಶದ ರಾಜಧಾನಿ. ದೋಹಾದಲ್ಲಿ ವಿಶ್ವ ವಾಣಿಜ್ಯ ಸಂಘಟನೆ (WTO)ಯ ನಾಲ್ಕನೇ ಮಂತ್ರಿಗಳ ಸಭೆ ನಡೆಯಿತು. ನಮ್ಮ ದೇಶವನ್ನು ಪ್ರತಿನಿಧಿಸಿ ಕೇಂದ್ರ ವಾಣಿಜ್ಯ ಮಂತ್ರಿ ಮುರಸೋಳಿ ಮಾರನ್ ಈ ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯ ಮೊದಲು ಮಾರನ್ ಮತ್ತು ವಾಜಪೇಯಿ ಸರ್ಕಾರ ನಮ್ಮ ದೇಶದ, ಜನರ ಹಿತಾಸಕ್ತಿಗಳನ್ನು ರಕ್ಷಿಸುವ ಬಗ್ಗೆ ವೀರಾವೇಶದ ಮಾತುಗಳನ್ನು ಆಡಿತ್ತು. WTOದ ಈಗಿನ ಜನವಿರೋಧಿ ನೀತಿಗಳನ್ನು ಬದಲಾಯಿಸುವ, ಹೊಸ ಜನವಿರೋಧಿ ನಿತಿಗಳ ಬಗ್ಗೆ ಮಾತುಕತೆ ಆರಂಭಿಸದಿರುವ ಗುರಿಯನ್ನು ಸಾಧಿಸಿಯೇ ತೀರುತ್ತೇವೆ ಎಂದು ಮಾರನ್ ಹೊರಟಿದ್ದರು. ಆದರೆ ಇವ್ಯಾವೂ ನಡೆಯಲಿಲ್ಲ. ಅಮೇರಿಕಾದ ನೇತೃತ್ವದಲ್ಲಿ ಶ್ರೀಮಂತ ದೇಶಗಳು ಬುಲ್‌ಡೋಜರಿನಂತೆ ಭಾರತ ಸೇರಿದಂತೆ ಎಲ್ಲಾ ಮೂರನೇ ಜಗತ್ತಿನ ದೇಶಗಳ ಮೇಲೆ ಎರಗಿ ತಮ್ಮ ಪಟ್ಟು ಸಾಧಿಸಿದವು. ಒಟ್ಟಾರೆಯಾಗಿ ತೀವ್ರ ಹಿನ್ನಡೆ ಸಿಯೋಟಲ್‌ನ ಸಭೆಯಿಂದ ಆರಂಭವಾಗಿ ಜಗತ್ತಿನಾದ್ಯಂತ ದುಡಿಯುವ ಜನರ ಚಳುವಳಿಗಳು WTOನ ಜನವಿರೋಧಿ ಸ್ವರೂಪವನ್ನು ಕಳೆದ ಎರಡು ವರ್ಷಗಳಲ್ಲಿ ಬದಲಾಯಿಸಲು ಸಾಮೂಹಿಕ ಒತ್ತಡ ಹೇರಿವೆ. ಈ ಒತ್ತಡವನ್ನು WTO ಸಂಘಟನೆಯೊಳಗೆ ತೆಗೆದುಕೊಂಡು ಹೋಗುವುದರಲ್ಲಿ ಭಾರತ ಸರ್ಕಾರ ಸೇರಿದಂತೆ ಮೂರನೇ ಜಗತ್ತಿನ ದೇಶಗಳ ಸರ್ಕಾರಗಳು ವಿಫಲವಾಗಿವೆ. ಈ ವಿಫಲತೆ ಜನರಿಗೆ ಬಗೆದ ದ್ರೋಹ.

ಇತ್ತೀಚೆಗೆ (ನವೆಂಬರ್ 6 ರಂದು) ನವದೆಹಲಿಯಲ್ಲಿ WTO ವಿರುದ್ಧ ಭಾರತೀಯ ಚಳುವಳಿ' (ಹಲವು ರಾಜಕೀಯ ಪಕ್ಷಗಳು, ಟ್ರೇಡ್‌ಯೂನಿಯನ್‌ಗಳು, ರೈತಸಂಘಗಳು ಇತರ ಜನಪರ ಸಂಘಟನೆಗಳ ವಿಶಾಲ ವೇದಿಕೆ) ಸಾಮ್ರಾಜ್ಯಶಾಹಿಯ ಒತ್ತಡಕ್ಕೆ ದೋಹಾದಲ್ಲಿ ಸಿಕ್ಕಿ ಮಂಡಿಯೂರುವುದರ ವಿರುದ್ಧ ಎಚ್ಚರಿಸಿತ್ತು. ವಾಜಪೇಯಿ ಸರ್ಕಾರ ಕೊನೆಗೂ ಅದನ್ನೇ ಮಾಡಿದೆ. ಸಾಂಕೇತಿಕ ಪ್ರತಿಭಟನೆಯ ನಾಟಕ ಮಾಡಿ ಕೊನೆಗೆ ಶ್ರೀಮಂತ ದೇಶಗಳು ತಯಾರಿಸಿದ ಹೇಳಿಕೆಗೆ, ಹೇಳಿದಲ್ಲಿ ಹೆಬ್ಬೆಟ್ಟು ಒತ್ತಿದೆ. ದೋಹಾದ ಸಭೆಯ ಮುಂದೆ ಎರಡು ಪ್ರಮುಖ ವಿಚಾರಗಳಿದ್ದವು. ಒಂದು WTOದ ಈಗಿನ ನಿಯಮಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ವಿಮರ್ಶಿಸಿ, ನಿಯಮಗಳಿಗೆ ತಕ್ಕ ತಿದ್ದುಪಡಿ ಮಾಡುವುದು ಇನ್ನೊಂದು ಬಹು-ಪಕ್ಷೀಯ ವಾಣಿಜ್ಯ ಒಪ್ಪಂದವನ್ನು ಇತರ ಕ್ಷೇತ್ರಗಳಿಗೆ ವಿಸ್ತರಿಸುವುದು. ಮೊದಲನೆಯ ಅಂಶ ಕಾರ್ಯಗತವಾಗುವವರೆಗೆ ಎರಡನೇ ಅಂಶವನ್ನು ತೆಗೆದುಕೊಳ್ಳಬಾರದು. ಭಾರತ ಸೇರಿದಂತೆ ಮೂರನೇ ಜಗತ್ತಿನ ದೇಶಗಳ ನಿಲುವಾಗಿತ್ತು. ಆದರೆ ಈ ಎರಡೂ ಅಂಶಗಳಲ್ಲೂ ಸೋಲಾಗಿದೆ.

ನಿಯಮಗಳ ಜಾರಿ ವಿಮರ್ಶೆಯಲ್ಲಿ ಪ್ರಗತಿ ಇಲ್ಲ

ಈಗಿನ ನಿಯಮಗಳು ಹೇಗೆ ಕೆಲಸ ಮಾಡುತ್ತಿವೆ ಎಂಬ ಅಂಶದಲ್ಲಿ ಕೃಷಿ ಉತ್ಪನ್ನ ಮತ್ತು ಬಟ್ಟೆಯ ಕ್ಷೇತ್ರದ ವಿಮರ್ಶೆ ನಮಗೆ ಅಗತ್ಯವಾಗಿತ್ತು. ಶ್ರೀಮಂತ ದೇಶಗಳು ತಮ್ಮ ದೇಶದ ಕೃಷಿಗೆ ನೀಡುವ ಸಬ್ಸಿಡಿ 1994ರ ನಂತರ ಕಡಿಮೆಯಾಗುವ ಬದಲು ಹೆಚ್ಚಿದೆ. ಅದೇ ಸಮಯದಲ್ಲಿ ನಮ್ಮ ಬಟ್ಟೆ ರಫ್ತಿಗೆ ಶ್ರೀಮಂತ ದೇಶಗಳು ನಿರ್ಬಂಧ ಹೇರಿವೆ. ನಾವು ಹಲವು ಸರಕುಗಳ ಆಮದಿನ ಬಗ್ಗೆ ಇದ್ದ ನಿರ್ಬಂಧಗಳನ್ನು ಹಿಂತೆಗೆದುಕೊಂಡಿದೆ. ಭಾರತದ ರೈತನ ಬದುಕಿಗೆ ಮುಳುವಾಗುವ ರೀತಿಯಲ್ಲಿ ಶ್ರೀಮಂತ ದೇಶಗಳ ಸಬ್ಸಿಡಿ ಪಡೆದ ಕೃಷಿ ಉತ್ಪನ್ನಗಳು ಆಮದಾಗುತ್ತಿವೆ. ಹೀಗೆ WTOನ ನಿಯಮಗಳು ಜಾರಿಯಲ್ಲಿ ನಮ್ಮ ಹಿತಾಸಕ್ತಿಗೆ ವಿರುದ್ಧವಾಗಿವೆ. ಇಲ್ಲಿ ಹಲವು ನಿಯಗಳೇ ನಮ್ಮ ಹಿತಾಸಕ್ತಿಗೆ ವಿರುದ್ಧವಾಗಿವೆ. ಇನ್ನೂ ಹಲವು ಸಂದರ್ಭಗಳಲ್ಲಿ ಶ್ರೀಮಂತ ದೇಶಗಳು ಬಡದೇಶಗಳ ಮೇಲೆ ಹೇರುವ ನಿಯಮಗಳನ್ನು ತಾವೇ ಪಾಲಿಸುತ್ತಿಲ್ಲ. ಇದು ವಿಷಮ ವ್ಯಾಪಾರ ಪದ್ಧತಿಗೆ ಎಡೆಮಾಡಿಕೊಟ್ಟಿದೆ. ಆರು ದಿನಗಳ ಜಗ್ಗಾಟದ ನಂತರವೂ ಈಗಿನ ನಿಯಮಗಳ ಮತ್ತು ಅದರ ಜಾರಿ ಬಗ್ಗೆ ವಿಮರ್ಶೆಯಲ್ಲಿ ಯಾವುದೇ ಪ್ರಗತಿ ಆಗಲಿಲ್ಲ. ನಮ್ಮ ಹಿತಾಸಕ್ತಿಗೆ ವಿರುದ್ಧವಾದ ನಿಯಮಗಳು ಹೇಗೆ ಇವೆ. ಭಾರತದ ರೈತ, ಕಾರ್ಮಿಕ, ಕೃಷಿ ಕೈಗಾರಿಕೆ ಮೇಲೆ ಇದರಿಂದ ಈಗಲೇ ಆಗಿರುವ ದುಷ್ಪರಿಣಾಮಗಳು ಮುಂದುವರೆಯಲಿವೆ.

ದೋಹಾದ ಸಭೆಯಲ್ಲಿ ಮಾರನ್ ಬಡದೇಶಗಳ ನಾಯಕನಾಗಿ ವೀರಾವೇಶದಿಂದ ವರ್ತಿಸಿದರೂ ಅಂತಿಮ ದೋಹಾ ನಿರ್ಣಯದಲ್ಲಿ ಪರಿಣಾಮಕಾರಿಯಾಗಿ ಸೋತಿದ್ದು ಏಕೆ?

WTO ಸಭೆಯಲ್ಲಿ ಸಾಮ್ರಾಜ್ಯಶಾಹಿಗೆ ಮಣಿದ ವಾಜಪೇಯಿ ಸರ್ಕಾರ

ಸಿಂಗಾಪೂರ ವಿಷಯಗಳ ಬಗ್ಗೆ ಸಮಿತಿಗಳು

ಮೊದಲ ಅಂಶದ ಬಗ್ಗೆ ತೃಪ್ತಿಕರ ಪ್ರಗತಿ ಆಗದೆ ಎರಡನೇ ಅಂಶಕ್ಕೆ ಒಪ್ಪುವುದಿಲ್ಲ ಎಂಬ ನಿಲುವನ್ನೂ ದೋಹಾ ನಿರ್ಣಯ ತಿರಸ್ಕರಿಸಿದೆ. ಈಗಿನ WTO ನಿಯಮಗಳು ಬಂಡವಾಳ ಹೂಡಿಕೆ, ಸ್ಪರ್ಧೆ, ಸರ್ಕಾರಿ ಖರೀದಿ ಮತ್ತು ವಾಣಿಜ್ಯ ಸವಲತ್ತು ಈ ಕ್ಷೇತ್ರಗಳಿಗೆ ಅನ್ವಯವಾಗುವುದಿಲ್ಲ. ಈ ನಾಲ್ಕು ವಿಷಯಗಳನ್ನು ಸಿಂಗಾಪೂರ ವಿಷಯಗಳು ಎಂದೂ ಕರೆಯಲಾಗುತ್ತದೆ. ಸಿಂಗಾಪೂರದ ಸಭೆಯಲ್ಲಿ ಇದನ್ನು ಮೊದಲು ಪ್ರಸ್ತಾಪಿಸಲಾಗಿತ್ತು ಎಂಬ ಕಾರಣಕ್ಕಾಗಿ ಈ ಕ್ಷೇತ್ರಗಳಿಗೆ WTO ನಿಯಮಗಳನ್ನು ಅನ್ವಯ ಮಾಡುವ ಬಗ್ಗೆ ಮಾತುಕತೆ ಆರಂಭಿಸಬೇಕು ಎಂಬುದು ಶ್ರೀಮಂತ ದೇಶಗಳ ಒತ್ತಾಯವಾಗಿತ್ತು. ಈ ಕ್ಷೇತ್ರಗಳಿಗೆ WTO ನಿಯಮಗಳನ್ನು ವಿಸ್ತರಿಸಿದರೆ ಬಡದೇಶಗಳ ಸರ್ಕಾರಗಳಿಗೆ ತಮ್ಮ ದೇಶದ ಜನರ ಹಿತಾಸಕ್ತಿ ಕಾಪಾಡುವ ಯಾವುದೇ ವಿಧಾನ, ಉಪಕರಣ ಉಳಿಯುವುದಿಲ್ಲ. ಈಗಿನ ನಿಯಮಗಳು ಜಾರಿಯಲ್ಲಿ ಎಲ್ಲಾ ದೇಶಗಳ ಹಿತಾಸಕ್ತಿ ಕಾಪಾಡುವ ನ್ಯಾಯಯುತ ವ್ಯವಸ್ಥೆ ರೂಪಿಸುವಂತೆ ಮಾಡುವವರೆಗಂತೂ ಈ ಬಗ್ಗೆ ಮಾತುಕತೆ ಬೇಡ ಎನ್ನುವುದು ಬಡದೇಶಗಳ ನಿಲುವಾಗಿತ್ತು. ಈ ಬಗ್ಗೆ ಮಾತುಕತೆ ಬೇಡ ಎನ್ನುವುದು ಬಡದೇಶಗಳ ನಿಲುವಾಗಿತ್ತು. ಈ ಬಗ್ಗೆ ಭಾರತ ಇತರ ಬಡದೇಶಗಳ ಬೆಂಬಲದಿಂದ ಬಲವಂತವಾಗಿ ವಿರೋಧಿಸಿದರೂ, ದೋಹಾ ನಿರ್ಣಯ ಅದನ್ನು ಹಿಂಬಾಗಿಲಿಂದ ತಂದು ಬಿಟ್ಟಿದೆ. ಈ ಎಲ್ಲಾ ಒತ್ತಡದಿಂದ ಬದಲಾಗಿರುವುದೆಂದರೆ ಭಾಷೆ ಮಾತ್ರ ನಿರ್ಣಯ ಈ ಸಿಂಗಾಪೂರ ವಿಷಯಗಳ ಬಗ್ಗೆ ಹೊಸ ಸುತ್ತಿನ ಮಾತುಕತೆಗಳು ಎಂದು ನಿರ್ಣಯ ಹೇಳುತ್ತದೆ. ಈ ವಿಷಯಗಳ ಬಗ್ಗೆ ಬಹುಪಕ್ಷೀಯ ವಾಣಿಜ್ಯ ನಿಯಮಗಳನ್ನು ರೂಪಿಸುವುದು ಈ ಸಮಿತಿಗಳ ಉದ್ದೇಶ. ಇದನ್ನು ಎರಡು ವರ್ಷಗಳ ನಂತರ ಸೇರುವ ಮಂತ್ರಿಗಳ ಸಭೆ ಅಂಗೀಕರಿಸುತ್ತದೆ ಎಂದು ನಿರ್ಣಯ ಹೇಳಿದೆ. ಮಾರನ್ ಮತ್ತು ಸರ್ಕಾರ ಈ ಹೊಸ ವಿಷಯಗಳ ಬಗ್ಗೆ ಮಾತುಕತೆಗೆ ಒಪ್ಪಲಾಗಿಲ್ಲ, ಇದು ದೊಡ್ಡ ವಿಜಯ ಎಂದೆಲ್ಲಾ ಹೇಳುತ್ತಿದೆ. ಇದು ಎಷ್ಟು ದೊಡ್ಡ ಸುಳ್ಳು ಎಂದು ಗೊತ್ತಾಗುತ್ತದೆ. ಮಾರನ್ ಅಡಿಗೆ ಬಿದ್ದರೂ ಮೂಗು ಮೇಲು' ಎಂಬಂತೆ ಆಡುತ್ತಿದ್ದಾರೆ.

ಸಣ್ಣ ರಿಯಾಯಿತಿ - ಸಾಂಕ್ರಾಮಿಕ ಬಂದಾಗ ಕಡ್ಡಾಯ ಲೈಸೆನ್ಸ್

ಏನಾದರೂ ಸಾಧ್ಯವಾಗಿರುವುದು ಒಂದು ಸಣ್ಣ ರಿಯಾಯಿತಿ ತೆಗೆದುಕೊಳ್ಳಲು ಮಾತ್ರ. ಇದು ತೀವ್ರ ಸಾಂಕ್ರಾಮಿಕ ರೋಗಗಳು ಹಬ್ಬಿ ಔಷಧಿಗಳ ಅಗತ್ಯ ಪೂರೈಕೆ, ಬೆಲೆ ಸಾಧ್ಯಮಾಡಲು ಸರ್ಕಾರಗಳು ಮಧ್ಯಪ್ರವೇಶ ಮಾಡಬಹುದು. ಇದಕ್ಕಾಗಿ ನಿಯಮಾವಳಿಯನ್ನು ಸೂಕ್ತವಾಗಿ ಬದಲಾಯಿಸಬಹುದು. ಪೇಟೆಂಟ್ ಹೊಂದಿರುವ ಕಂಪನಿ ಸಾಕಷ್ಟು ಪ್ರಮಾಣದಲ್ಲಿ, ಅಗತ್ಯ ಬೆಲೆಯಲ್ಲಿ ಉತ್ಪಾದಿಸಿದ್ದರೆ, ಬೇರೆ ಕಂಪನಿ ಅದೇ ಔಷಧಿಯನ್ನು ಉತ್ಪಾದಿಸಲು ಲೈಸೆನ್ಸ್ ಕೊಡಬಹುದು. ಭಾರಿ ಸಾರ್ವಜನಿಕ ಒತ್ತಡದಿಂದ ಈ ಸಣ್ಣ ರಿಯಾಯಿತಿ ಕೊಡಲಾಗಿದೆ. ಆದರೆ ಈ ರಿಯಾಯಿತಿಯನ್ನು ಜಾರಿ ಮಾಡಿದ ರೀತಿ ಈ ವಿಷಯದಲ್ಲೂ ಭಾರಿ ಮುನ್ನಡೆ ಎನ್ನಲಾಗುವುದಿಲ್ಲ. ಮೊದಲನೆಯದಾಗಿ ಇದೊಂದು ರಿಯಾಯಿತಿ. ಮೂಲಭೂತ 'ಬೌದ್ಧಿಕ ಹಕ್ಕು' ಗಳ ಮೂಲ ಒಪ್ಪಂದದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ದೋಹಾದ ಅಂತಿಮ ನಿರ್ಣಯದಲ್ಲೂ ಈ ಬಗ್ಗೆ ಪ್ರಸ್ತಾಪವಿಲ್ಲ. ಒಂದು ಪ್ರತ್ಯೇಕ ಪ್ರಕಟಣೆಯಲ್ಲಿ ಮಾತ್ರ ಇದನ್ನು ಹೇಳಲಾಗಿದೆ. ಬಡದೇಶಗಳಲ್ಲಿ ತಂತ್ರಜ್ಞಾನ ಹರಡುವ, ಬಳಸುವ ಮೇಲೆ ನಿರ್ಬಂಧಗಳು ಹಾಗೇ ಮುಂದುವರೆಯುತ್ತಿವೆ. ಸಾರ್ವಜನಿಕ ಕಲ್ಯಾಣ ಮತ್ತು ಬೆಳವಣಿಗೆಗೆ ಮಾರಕವಾಗುವ ರೀತಿಯಲ್ಲಿ ಜ್ಞಾನ ಮತ್ತು ತಂತ್ರಜ್ಞಾನ ಖಾಸಗಿ ಏಕಸ್ವಾಮ್ಯದಲ್ಲಿರುತ್ತದೆ. ಈ ದಿಕ್ಕಿನಲ್ಲಿ ಯಾವುದೇ ಮೂಲಭೂತ ಬದಲಾವಣೆ ಇಲ್ಲ.

ಈ ರಿಯಾಯಿತಿಗೂ ಭಾರಿ ಬೆಲೆ

ಈ ರಿಯಾಯಿತಿಗೂ ಬಡದೇಶಗಳು ಭಾರಿ ಬೆಲೆ ತೆರಬೇಕಾಯಿತು. ಈ ರಿಯಾಯಿತಿಗೆ ಬದಲಾಗಿ ಬಡದೇಶಗಳ ರಫ್ತಿನ ಮೇಲೆ ಕಾರ್ಮಿಕರ ಮತ್ತು ಪರಿಸರ ವಿಷಯಗಳ ಆಧಾರಿತ ನಿರ್ಬಂಧ ಹೇರುವ ಅಂಶವನ್ನು ಅಂತಿಮ ನಿರ್ಣಯದಲ್ಲಿ ಸೇರಿಸಲಾಯಿತು. ಅಲ್ಲದೆ ಕಾರ್ಮಿಕರ ಜೀವನಮಟ್ಟದ ಅಂಶಗಳ ಬಗ್ಗೆ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌)ಯ ನಿಯಮಗಳು ಅಂತಿಮ ಎಂಬ ಅಂಶವನ್ನು ಬದಲಾಯಿಸಲಾಯಿತು. ಈಗ WTOನೇ ಈ ಎಲ್ಲಾ ಅಂಶಗಳ ಬಗ್ಗೆ ಅಂತಿಮ ನಿಯಮಗಳನ್ನು ರೂಪಿಸುತ್ತವೆ ಎಂದು ಹೇಳಲಾಗಿದೆ. ಇವೆರಡೂ ಅಂಶಗಳನ್ನೂ ಬಳಸಿ ಶ್ರೀಮಂತ ದೇಶಗಳು ಬಡದೇಶಗಳ ರಫ್ತಿನ ಮೇಲೆ ಹುಚ್ಚಿಚ್ಚು ನಿರ್ಬಂಧಗಳನ್ನು ಹೇರುತ್ತವೆ. ಬಾಲ ಕಾರ್ಮಿಕರನ್ನು ಬಳಸಲಾಗಿದೆ ಎಂಬ ಆಪಾದನೆ ಮೇಲೆ ಬಟ್ಟೆ ಕೈಕಸುಬಿನ ಉತ್ಪನ್ನಗಳ ಮೇಲೆ ನಿರ್ಬಂಧ ಹೇರುವುದು, ಪರಿಸರ ವಿರೋಧಿ ವಸ್ತುಗಳನ್ನು ಬಳಸಲಾಗಿದೆ ಎಂದು ಅಂತಹ ಉತ್ಪನ್ನಗಳ ಮೇಲೆ ನಿರ್ಬಂಧ ಹೇರುವುದು - ಇವು ಈಗಾಗಲೇ ಶ್ರೀಮಂತ ದೇಶಗಳು ಬಳಸುತ್ತಿರುವ ತಂತ್ರಗಳು. ಇದಲ್ಲದೆ ಮುಂದಿನ ಮಾತುಕತೆಗಳಲ್ಲಿ ಕೃಷಿ ಸಬ್ಸಿಡಿ, ಬಟ್ಟೆ ರಫ್ತಿನ ವಿಷಯದಲ್ಲಿ ರಿಯಾಯಿತಿಗಳೂ ಬದಲು, ಸಿಂಗಾಪುರ ವಿಷಯಗಳಲ್ಲಿ ಬಡದೇಶಗಳು ರಿಯಾಯಿತಿ ಕೊಡುವಂತೆ ಒತ್ತಡ ಹೇರಲಾಗುತ್ತದೆ.

ದೋಹಾದ ಸಭೆಯಲ್ಲಿ ಮಾರನ್ ಬಡದೇಶಗಳ ನಾಯಕನಾಗಿ ವೀರಾವೇಶದಿಂದ ವರ್ತಿಸಿದರೂ ಅಂತಿಮ ದೋಹಾ ನಿರ್ಣಯದಲ್ಲಿ ಪರಿಣಾಮಕಾರಿಯಾಗಿ ಸೋತಿದ್ದು ಏಕೆ? ಎಂಬ ಪ್ರಶ್ನೆ ಇಲ್ಲಿ ಏಳುತ್ತದೆ. ಕಳೆದ ಮೂರು ವರ್ಷಗಳಲ್ಲಿ ಅಮೇರಿಕಾದ ನಾಯಕತ್ವದಲ್ಲಿ ಶ್ರೀಮಂತ ದೇಶಗಳ ಆರ್ಥಿಕ ಯಜಮಾನಿಕೆ ವಿರೋಧಿಸುವಲ್ಲಿ ಭಾರತ (ವಾಜಪೇಯಿ ಸರ್ಕಾರದ ನಾಯಕತ್ವದಲ್ಲಿ) ತೀರಾ ಹಿಂದೆ ಬಿದ್ದದ್ದು, ನಮ್ಮ ದೇಶದ ವಿಶ್ವಾಸನೀಯತೆ ತೀರಾ ಕಡಿಮೆ ಮಾಡಿತ್ತು. ಸೆಪ್ಟೆಂಬರ್ 11ರ ನಂತರ ಭಾರತ ಅಮೆರಿಕಾದ ಜೂನಿಯರ್ ಪಾರ್ಟ್‌ನರ್ ಆಗಲು ಹಲುಬಿದ ರೀತಿಯಂತೂ ನಮ್ಮ ದೇಶವನ್ನು ಯಾರೂ ನಂಬಲಾರದ ಸ್ಥಿತಿಗೆ ತಲುಪಿಸಿತ್ತು. ಇದಲ್ಲದೆ WTO ನಿಯಮಗಳ ಪ್ರಕಾರವೂ ಅಗತ್ಯವಿಲ್ಲದಿರುವ ವಿಮೆಯಲ್ಲಿ ವಿದೇಶಿ ಹೂಡಿಕೆ ಹಾಗೂ ಕೃಷಿ ಉತ್ಪನ್ನಗಳ ಆಮದಿನ ಮೇಲೆ ನಿರ್ಬಂಧವನ್ನು ಬೇಗನೆ ತೆಗೆದುಹಾಕಿದ್ದು ಬಡದೇಶಗಳಲ್ಲಿ ಭಾರತದ ನೈತಿಕ ಸ್ಥೈರ್ಯದ ಬಗ್ಗೆ ವಿಶ್ವಾಸ ಮೂಡಿಸಲಿಲ್ಲ. ಇದಲ್ಲದೆ ದೋಹಾ ಸಭೆಯ ಮೇಲೂ ಬಡದೇಶಗಳ ಜತೆ ಮಾತುಕತೆ ನಡೆಸಿ, ತಕ್ಕ ವ್ಯವಸ್ಥಿತ ತಯಾರಿಯನ್ನು ಭಾರತ ಮಾಡಲಿಲ್ಲ. ಇದರಿಂದಾಗಿ ಭಾರತದ ಪ್ರತಿರೋಧ ಪರಿಣಾಮ ಬೀರದೆ ಹೋಯಿತು.

ಮುಂದಿನ ಎರಡು ವರ್ಷಗಳಲ್ಲಿ ಈ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಬೇಕು. WTOದ ನಿಯಮಗಳನ್ನು ದೇಶದ ಹಿತಾಸಕ್ತಿಗೆ ಧಕ್ಕೆ ತಂದಲ್ಲಿ, ಪ್ರಶ್ನಿಸುವುದು, ಇತರ ಬಡದೇಶಗಳ ಜತೆ ಸಂಯೋಜಿತ ಕಾರ್ಯಾಚರಣೆ, ಮುಂದಿನ ಸುತ್ತಿನ ಮಾತುಕತೆಗಳಲ್ಲಿ ಬಡದೇಶಗಳ ನಾಯಕತ್ವ ವಹಿಸುವುದು ಇವು ಭಾರತ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳು ಇದನ್ನು ವಾಜಪೇಯಿ ಸರ್ಕಾರ ವಹಿಸುವಂತೆ ಸಾರ್ವಜನಿಕ ಒತ್ತಡ ತರಬೇಕಾಗಿದೆ. ಇಲ್ಲದಿದ್ದರೆ ಸರ್ಕಾರ ಬದಲಾಯಿಸುವುದೂ ಅನಿವಾರ್ಯ. ದೋಹಾ ದ್ರೋಹವನ್ನು ಮುಂದುವರೆಸಲು ಬಿಡಬಾರದು.

- ಶರತ್‌ಚಂದ್ರ



ತಮಿಳುನಾಡು ಸ್ಥಳೀಯ ಚುನಾವಣೆ

ಹೆಚ್ಚಿನ ಅಧಿಕಾರಕ್ಕಾಗಿ ಜನತೆಯ ಹೋರಾಟ

ಇತ್ತೀಚೆಗೆ ತಮಿಳುನಾಡಿನಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಐಡಿಎಂಕೆ ನೇತೃತ್ವದ ಆಳುವ ಮಿತ್ರಕೂಟಗಳು ಪ್ರಥಮ ಸ್ಥಾನದಲ್ಲಿ ಜಯಗಳಿಸಿದರೆ ಡಿಎಂಕೆ ಬಿಜೆಪಿ ಕೂಟವು ನಂತರದ ಸ್ಥಾನದಲ್ಲಿದೆ. ಅಸೆಂಬ್ಲಿ ಚುನಾವಣೆಗಳಲ್ಲಿ ನಡೆದ ರೀತಿಯಲ್ಲಿ ಮೈತ್ರಿ ನಡೆದಿದ್ದರೆ, ಎಐಡಿಎಂಕೆ ಕೂಟವು ಪ್ರಚಂಡ ಜಯಭೇರಿ ಬಾರಿಸಬಹುದಿತ್ತು. ಸೀಟು ಹೊಂದಾಣಿಕೆಯಲ್ಲಿ ಒಪ್ಪಂದವಾಗದೆ ಹೊರ ಉಳಿದುದರಿಂದ ಸಿಪಿಐ(ಎಂ) ಮತ್ತು ಕಾಂಗ್ರೆಸ್ ಸ್ವಂತಂತ್ರವಾಗಿ ಸ್ಪರ್ಧಿಸಬೇಕಾಯ್ತು. ಇದರಿಂದಾಗಿ ಡಿಎಂಕೆ ಮೈತ್ರಿಕೂಟವು ತನ್ನ ಸ್ಥಾನಗಳಲ್ಲಿ ಗಣನೀಯ ಪ್ರಗತಿ ಸಾಧಿಸಿತಾದರೂ 1996ರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾವಣೆಯಲ್ಲಿ ಗಳಿಸಿದ ಯಶಸ್ಸನ್ನು ಗಳಿಸಲು ಸಾಧ್ಯವಾಗಿಲ್ಲ.

ಈ ಚುನಾವಣೆಯ ಅಪಾಯಕಾರಿ ಅಂಶವೆಂದರೆ, ಡಿಎಂಕೆ ಮೈತ್ರಿಕೂಟವು ಸಾಕಷ್ಟು ಸ್ಥಾನಗಳನ್ನು ಬಿಜೆಪಿಗೆ ಬಿಟ್ಟುಕೊಟ್ಟುದರಿಂದ ಗ್ರಾಮ ಮಟ್ಟಗಳಲ್ಲಿ ಬಿಜೆಪಿ ಬಾರದಿರಲು ಸಾಧ್ಯವಾಗಿದೆ.

ಸ್ಥಾನ ಹೊಂದಾಣಿಕೆಗಳು ಸಾಧ್ಯವಾಗದ್ದರಿಂದ ಸಿಪಿಐ(ಎಂ) ಸ್ವತಂತ್ರವಾಗಿ ಸ್ಪರ್ಧಿಸಿತ್ತು. ಆದರೂ ಉತ್ತಮ ಸ್ಪರ್ಧೆ ನೀಡಿದೆ. 1996ರಲ್ಲಿ ಎಂ.ಡಿ.ಎಂ.ಕೆ ಜತೆ ಸೇರಿ ಪಡೆದ ಸ್ಥಾನವಷ್ಟೇ ಸ್ಥಾನಗಳನ್ನು ಈ ಬಾರಿ ಪಡೆದಿದೆ. ಕನ್ಯಾಕುಮಾರಿ ಜಿಲ್ಲೆಯಲ್ಲಿ ಕಳೆದ ಬಾರಿ ಗೆದ್ದಿದ್ದ ಮುನಿಸಿಪಾಲಿಟಿಯನ್ನು ಈ ಬಾರಿ ಉಳಿಸಿಕೊಂಡಿದೆ. ಟೆಕ್ಸ್‌ಟೈಲ್ ಕಾರ್ಖಾನೆಗಳ ಕೇಂದ್ರವಾದ ತಿರುಪೂರ್‌ನಲ್ಲಿ 52 ವಾರ್ಡ್‌ಗಳ ಪೈಕಿ 11 ವಾರ್ಡ್‌ಗಳನ್ನು ಗೆದ್ದಿದೆ.

ಸ್ಥಾನ ಹೊಂದಾಣಿಕೆ ನಡೆಯದಿದ್ದರೂ ಡಿಎಂಕೆ ಮೈತ್ರಿಕೂಟವನ್ನು ಅದರಲ್ಲೂ ಬಿಜೆಪಿಯನ್ನು ಸೋಲಿಸಲು ಕೋಯಮತ್ತೂರು ಮೇಯರ್ ಚುನಾವಣೆಯಲ್ಲಿ ಸಿಪಿಐ(ಎಂ) ಎಐಡಿಎಂಕೆಗೆ ಬೆಂಬಲ ನೀಡಿದ್ದು ಎಐಡಿಎಂಕೆ ಜಯಗಳಿಸಿದೆ. ಮಧುರೈ ಮತ್ತು ಚೆನ್ನೈಗಳಲ್ಲಿ ಹೊಂದಾಣಿಕೆ ನಡೆದಿದ್ದರೆ, ಎಐಡಿಎಂಕೆ ಸಿಪಿಐ(ಎಂ) ಗೆಲ್ಲಬಹುದಾಗಿತ್ತು ಇವೆರಡೂ ಸ್ಥಾನಗಳನ್ನು ಡಿಎಂಕೆ ಗೆದ್ದುಕೊಂಡಿತು.

ಪ್ರಚಾರ : ಬೇರೆ ಬೇರೆ ಮೈತ್ರಿಕೂಟಗಳು ತಮ್ಮದೇ ಆದ ಚುನಾವಣಾ ಪ್ರಣಾಳಿಕೆಗಳನ್ನು ಪ್ರಕಟಿಸಿದ್ದ, ಸ್ವತಂತ್ರವಾಗಿ ಸ್ಪರ್ಧಿಸಿದ್ದ ಸಿಪಿಐ(ಎಂ) ತನ್ನ ಪ್ರಣಾಳಿಕೆಯನ್ನು ಹೊರತಂದು ಪ್ರಚಾರ ನಡೆಸಿತ್ತು. ಇದರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ಮತ್ತು ರಾಜ್ಯ ಸರಕಾರದಿಂದ ಅಧಿಕ ಹಣ ಬಿಡುಗಡೆಗೆ ಒತ್ತಾಯಿಸಲಾಗಿತ್ತು. ಪಿ.ಬಿ. ಸದಸ್ಯರಾದ ಆರ್. ಉಮಾನಾಥ, ಸೀತಾರಾಂ ಯೆಚೂರಿ, ರಾಜ್ಯ ಕಾರ್ಯದರ್ಶಿ ಎನ್. ಶಂಕರಯ್ಯ ಕಾರ್ಯದರ್ಶಿ ಮಂಡಳಿ ಮತ್ತು ರಾಜ್ಯ ಸಮಿತಿಯ ಸದಸ್ಯರು ಪ್ರಚಾರದಲ್ಲಿ ತೊಡಗಿದ್ದರು. ಕೆಲವೊಂದು ಬಹಿರಂಗ ಸಭೆಗಳನ್ನು ನಡೆಸಿದರೆ ಹೆಚ್ಚಾಗಿ ಬೀದಿ ಬದಿ ಸಭೆಗಳಿಗೆ ಒತ್ತು ನೀಡಲಾಗಿತ್ತು. ಎಐಡಿಎಂಕೆ ಮತ್ತು ಅಮೆರಿಕಾ ಮೈತ್ರಿಕೂಟಗಳು ಅಡೆತಡೆ ಇಲ್ಲದೆ, ನಕಲಿ ಮತ, ಮತಗಟ್ಟೆ ಸ್ವಾಧೀನ, ರಿಗ್ಗಿಂಗ್‌ಗಳನ್ನು ನಡೆಸಿದವು.

ಚುನಾವಣೆಯನ್ನು ಗೆಲ್ಲಲು ಯಾವುದೇ ಬಂಡವಾಳಶಾಹಿ ರಾಜಕೀಯ ಪಕ್ಷಗಳು ಅನುಸರಿಸುವ ಮಾರ್ಗವನ್ನು ಈ ಮೈತ್ರಿಕೂಟಗಳು ನಡೆಸಿದ್ದವು. ಎಐಡಿಎಂಕೆ ಸರಕಾರ ಯಂತ್ರ, ಪೊಲೀಸು ಇಲಾಖೆಯನ್ನು ತನ್ನ ಸಹಕಾರಕ್ಕೆ ಬಳಸಿ ಮತಗಟ್ಟೆ ಸ್ವಾಧೀನ ಮಾಡಿಕೊಂಡುದು ಮಾತ್ರವಲ್ಲದೆ, ಚೆನ್ನೈನಲ್ಲಿ ಮತ ಎಣಿಕೆ ಮಾಡುವ ಸಂದರ್ಭದಲ್ಲೂ 'ರಿಗ್ಗಿಂಗ್' ನಡೆಸಿತ್ತು.

ಇವುಗಳೆಲ್ಲದರ ನಡುವೆ ಸಿಪಿಐ(ಎಂ) ತನ್ನ ಸ್ವತಂತ್ರಧೋರಣೆಯನ್ನು ಪ್ರತಿಪಾದಿಸಿ ಗೆಲುವನ್ನು ಸಾಧಿಸಿತ್ತು. ಹಲವಾರು ಕ್ಷೇತ್ರಗಳಲ್ಲಿ ಎರಡನೇ ಸ್ಥಾನಗಳಿಸಿದ ಸಿಪಿಐ(ಎಂ) ಚುನಾವಣಾ ಹೋರಾಟದ ನಂತರ, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರಕ್ಕಾಗಿ ತನ್ನ ಹೋರಾಟ ಮತ್ತು ಪ್ರಚಾರವನ್ನು ಜನತೆಯ ಮುಂದಿರಿಸಿದೆ.

ಆಂಧ್ರದಲ್ಲಿ ಸಾರಿಗೆ ಮುಷ್ಕರ

ಆಂಧ್ರಪ್ರದೇಶದ ಸಾರ್ವಜನಿಕ ಉದ್ದಿಮೆಯಾದ ರಸ್ತೆ ಸಾರಿಗೆ ಸಂಸ್ಥೆ ಈಗ ಅನಿರ್ದಿಷ್ಟ ಮುಷ್ಕರ ನಡೆಸುತ್ತಿದೆ. ಈ ಮುಷ್ಕರ 28ನೇ ಅಕ್ಟೋಬರ್ ಗೆ ಸರಿಯಾಗಿ 14 ನೇ ದಿನಕ್ಕೆ ಕಾಲಿಡುತ್ತಿದೆ. (ನವೆಂಬರ್ 6, 2001 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿದೆ.) ಚಂದ್ರಬಾಬು ನಾಯ್ಡುವಿನ ಜನವಿರೋಧಿ ನೀತಿಗಳ ವಿರುದ್ಧವಿರುವ ತೀವ್ರ ಪ್ರತಿರೋಧಗಳನ್ನು ಇದು ತೋರಿಸುತ್ತದೆ.

ಆಂಧ್ರಪ್ರದೇಶದ ರಾಜ್ಯ ಸರ್ಕಾರ ವಿಶ್ವಬ್ಯಾಂಕಿನೊಂದಿಗೆ ತನ್ನ ಒಪ್ಪಂದದಂತೆ ರಸ್ತೆ ಸಾರಿಗೆ ಸಂಸ್ಥೆಯೂ ಸೇರಿದಂತೆ ಎಲ್ಲಾ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಲು ತೀವ್ರ ಪ್ರಯತ್ನ ಮಾಡುತ್ತಿದೆ. ಆ ಕಾರಣಕ್ಕಾಗಿ ರಸ್ತೆ ಸಾರಿಗೆ ಸಂಸ್ಥೆ ಕ್ರಮೇಣ ನಷ್ಟ ಅನುಭವಿಸಲು ಅದರ ಗಳಿಕೆ ಮೇಲಿನ ಮೋಟಾರು ವಾಹನ ತೆರಿಗೆಯನ್ನು 4 ವರ್ಷಗಳ ಅವಧಿ ಒಳಗಡೆಯಲ್ಲಿಯೇ ಶೇ 6 ರಿಂದ ಶೇ 15 ರವರೆಗೆ ಏರಿಸಿದೆ. ಇದೇ ವೇಳೆಯಲ್ಲಿ ಖಾಸಗಿ ಸಾರಿಗೆ ಸಂಸ್ಥೆಗಳಿಂದ ಬರುತ್ತಿರುವ ಅದೇ ತೆರಿಗೆ ಶೇ 9 ಮಾತ್ರವಾಗಿದೆ.

ಸಾರ್ವಜನಿಕರಿಗೆ (ವಿದ್ಯಾರ್ಥಿಗಳು, ಅಂಗವಿಕಲರು ಇನ್ನಿತರೆ) ಸರ್ಕಾರ ಒದಗಿಸಿಕೊಡುವ ರಿಯಾಯಿತಿ ಸೌಲಭ್ಯವೇ ಸರಿಸುಮಾರು ವಾರ್ಷಿಕ 234 ಕೋಟಿಗೆ ಏರಿದೆ. ಆ ರೀತಿಯ ಯಾವುದೇ ವಾರ್ಷಿಕ ಹಣವನ್ನು ಸರ್ಕಾರ ಇದುವರೆಗೆ ಭರಿಸಿಲ್ಲ ಮತ್ತು ಖಾಸಗಿ ಬಸ್ಸುಗಳಿಗೆ ಆ ರೀತಿಯ ಯಾವುದೇ ಹೊರೆ ಮತ್ತು ನಿರ್ಬಂಧವಿಲ್ಲ. ಈ ಕಾರಣಕ್ಕಾಗಿ ವಾರ್ಷಿಕ 400 ಕೋಟಿ ಆದಾಯ ಕಡಿತವಾಗುತ್ತಿದೆ ಎಂದು ತನ್ನ ಆರೋಪದಲ್ಲಿ ರಸ್ತೆ ಸಾರಿಗೆ ನಿಗಮ ತಿಳಿಸಿದೆ.

ಈ ರೀತಿಯ ಆಂಧ್ರಸರ್ಕಾರದ ಸಾರ್ವಜನಿಕ ಉದ್ದಿಮೆ ವಿರೋಧಿ ನೀತಿಯಿಂದಾಗಿ ತನ್ನ ಸೇವೆ, ದಕ್ಷತೆ ಇಂಧನ ಕ್ಷಮತೆ ಹಾಗೂ ಅತಿ ಕಡಿಮೆ ಅಪಘಾತದ ದಾಖಲೆಯಿಂದಾಗಿ ಹಲವಾರು ಹೆಗ್ಗಳಿಕೆ ಇದ್ದರೂ, ವಾರ್ಷಿಕ 200 ಕೋಟಿ ರೂ.ಗಳ ಕೃತಕ ನಷ್ಟವನ್ನು ಅನುಭವಿಸುವಂತೆ ಮಾಡಿದೆ. ಇವೆಲ್ಲದರ ಮಧ್ಯೆ 618 ಕೋಟಿ ಯಷ್ಟು ಆದಾಯವನ್ನು ರಸ್ತೆ ಸಾರಿಗೆ ನಿಗಮ ಪಡೆಯುತ್ತಿದೆ.

ಕಳೆದ ಮೂರು ವರ್ಷಗಳಿಂದ ಅನುಸರಿಸುತ್ತಿರುವ ಜನವಿರೋಧಿ ನೀತಿಗಳನ್ನು ನಾಯ್ಡು ಸರ್ಕಾರ ಕೈಬಿಡಬೇಕೆಂದು ನೌಕರರು ಆಗ್ರಹಿಸಿದ್ದರು ಸಾರಿಗೆ ನೌಕರರನ್ನು ಕಡಿತಗೊಳಿಸುವ ಮೂಲಕ ನೌಕರರ ಮೇಲಿನ ಕೆಲಸದ ಒತ್ತಡವನ್ನು ಹೆಚ್ಚು ಮಾಡುವ ರೀತಿಯ ನೌಕರ ವಿರೋಧಿ ನೀತಿ ಅನುಸರಿಸುತ್ತಿದೆ. ಹಾಗೂ ಸಂಸ್ಥೆ ಮತ್ತು ಆಂಧ್ರ ಸರ್ಕಾರ 2001 ರ ಏಪ್ರಿಲ್‌ನಿಂದಲೂ ಬಾಕಿ ಇರುವ ವೇತನ ಪರಿಷ್ಕರಣೆಯನ್ನು ತಿರಸ್ಕರಿಸಿದೆ.

ಆಂಧ್ರ ಸರ್ಕಾರದ ಕಾರ್ಮಿಕ ವಿರೋಧಿ ಮತ್ತು ಖಾಸಗೀಕರಣ ನೀತಿಗಳಿಂದಾಗಿ ಕೂಲಿಕಾರರು ಮತ್ತು ಕಾರ್ಮಿಕ ಸಂಘಗಳು ಸೇರಿ ಒಂದು 'ಜಂಟಿ ಕ್ರಿಯಾ ಸಮಿತಿ' ರಚಿಸಿಕೊಂಡವು. ಸಿಐಟಿಯು ಸೇರಿದಂತೆ ಇನ್ನಿತರೆ ಪ್ರಮುಖ ಕಾರ್ಮಿಕ ಸಂಘಗಳು ಈ ಹೋರಾಟ ಸಮಿತಿಯಲ್ಲಿವೆ. ಇವುಗಳು ಆಂಧ್ರ ಸರ್ಕಾರದ ಖಾಸಗೀಕರಣ ಹಾಗೂ ನೌಕರ ವಿರೋಧಿ ನೀತಿ ವಿರುದ್ಧ ಸಮರ ಸಾರಲು ನಿರ್ಧರಿಸಿದವು. ಇವೆಲ್ಲದರ ಪರಿಣಾಮವಾಗಿ ಸುಮಾರು 1 ಲಕ್ಷ 25 ಸಾವಿರ ಸಾರಿಗೆ ನಿಗಮದ ನೌಕರರು, ಸರ್ಕಾರ ಅನುಸರಿಸುತ್ತಿರುವ ಸಾರಿಗೆ ವಿರೋಧಿ ನೀತಿಯನ್ನು ನಿಲ್ಲಿಸಲು ಸೇವೆಗಳ ದಕ್ಷತೆಗೆ ಹಾಗೂ ವೇತನ ಪರಿಷ್ಕರಣೆಗೆ ಆಗ್ರಹಿಸಿ 15 ಅಕ್ಟೋಬರ್ 2001 ರಿಂದ ಅನಿರ್ದಿಷ್ಟ ಮುಷ್ಕರಕ್ಕೆ ಇಳಿದರು.

ಈ ರೀತಿಯ ರಾಜಿಇಲ್ಲದ ಕಾರ್ಮಿಕರ ಐಕ್ಯತೆಯನ್ನು ಸಹಿಸಿಕೊಳ್ಳಲಾಗದ ಸರ್ಕಾರ ಕಾರ್ಮಿಕರ ಮೇಲೆ ಅತ್ಯಂತ ಅಮಾನುಷ ದೌರ್ಜನ್ಯವನ್ನು ಎಸಗಿತು. ರಾಜ್ಯ ಸರ್ಕಾರ 27.10.2001 ರ ಸಾಯಂಕಾಲ 4338 ಕಾರ್ಮಿಕರನ್ನು ಬಂಧನಕ್ಕೆ ಒಳಪಡಿಸಿತು. ಸಾವಿರಾರು ನೌಕರರ ಮೇಲೆ 'ಎಸ್ಮಾ' ಮತ್ತಿತರ ಜಾಮೀನುರಹಿತ ಮೊಕದ್ದಮೆ ಹೂಡಿತು. ಈ ಹೋರಾಟ ಬೆಂಬಲಿಸಿರುವ ವಿವಿಧ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರನ್ನು ಕೂಡ ಬಂಧಿಸಿದೆ. ಸಾರಿಗೆ ನಿಗಮದ ಆಡಳಿತ ಮಂಡಳಿ 300 ಉದ್ಯೋಗಿಗಳನ್ನು ಕೆಲಸದಿಂದ ವಜಾ ಮಾಡಿದೆ. ಹಾಗೂ ಅಷ್ಟೇ ಸಂಖ್ಯೆಯ ಉದ್ಯೋಗಿಗಳನ್ನು 'ಅಮಾನತಿ' ನಲ್ಲಿಡಲಾಗಿದೆ. ಈ ಎಲ್ಲಾ ದೌರ್ಜನ್ಯಗಳನ್ನು ಎದುರಿಸಿಯೂ ಕಾರ್ಮಿಕರು, ಧರಣಿ, ಪಿಕೆಟಿಂಗ್, ರಸ್ತೆ ತಡೆ ಮುಂತಾದ ಹೋರಾಟಗಳ ಮೂಲಕ ತವ್ರ ಪ್ರತಿರೋಧ ಮುಂದುವರಿಸಿದರು.

ಈ ಹೋರಾಟಕ್ಕೆ ಎಡಪಕ್ಷಗಳು ಸೇರಿದಂತೆ ವಿವಿಧ ವಿರೋಧಿ ಪಕ್ಷಗಳು, ಕೇಂದ್ರ ಕಾರ್ಮಿಕ ಸಂಘಟನೆಗಳು, ವಿವಿಧ ಸಂಘಟನೆಗಳು ಬೆಂಬಲ ನೀಡಿದವು.

ಕಳೆದ ಅಕ್ಟೋಬರ್ 28 ರಂದು ಹೈದರಾಬಾದ್‌ನಲ್ಲಿ ಜರುಗಿದ 'ಕಾರ್ಮಿಕ ಸಂಘಗಳ ರಾಜ್ಯ ಸಮಾವೇಶ' ನವೆಂಬರ್ 6 ರ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತು. ಅಕ್ಟೋಬರ್‌ನಿಂದ ಯಾವುದೇ ರೀತಿಯ ಖಾಸಗಿ ಬಸ್ಸು, ಗುತ್ತಿಗೆ ನೌಕರರು ಹಾಗೂ ಗೃಹರಕ್ಷಕ ಮತ್ತು ಪೋಲೀಸ್‌ರನ್ನು ಮುಷ್ಕರ ಮುರಿಯಲು ಬಳಸುವುದನ್ನು ನಿಲ್ಲಿಸಲು ಆಗ್ರಹಿಸಿ ಇದೇ ಸಮಾವೇಶದಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಎಡಪಕ್ಷಗಳು ಕೂಡ ನೌಕರರ ಹೋರಾಟ ಬೆಂಬಲಿಸಿ ಇದೇ ರೀತಿಯ ಕಾರ್ಯಕ್ರಮ ಆಯೋಜಿಸಿದವು. ಇವರ ಹೋರಾಟಕ್ಕೆ ಸಿಕ್ಕಿರುವ ಅಭೂತಪೂರ್ವ ಬೆಂಬಲದೊಂದಿಗೆ ಹೋರಾಟವನ್ನು ತೀವ್ರಗೊಳಿಸಲಾಯಿತು. ನೌಕರರ ಕುಟುಂಬ ವರ್ಗದವರು ಕೂಡ ಇಡೀ ರಾಜ್ಯದಾದ್ಯಂತ ಈ ಹೋರಾಟಕ್ಕೆ ದುಮುಕಿದ್ದಾರೆ.

ಆದರೆ ನಾಯ್ಡು ಸರ್ಕಾರ ಜನರ ಮಾತಿಗೆ ಕಿವಿಗೊಡದೇ ದೌರ್ಜನ್ಯಗಳಿಂದ ಮುಷ್ಕರ ಮುರಿಯಲು ನೋಡಿದರು. ಆದರೆ ಜನ ಬಗ್ಗಲಿಲ್ಲ. ಆದಾಗ್ಯೂ ರಸ್ತೆ ಸಾರಿಗೆ ಸಂಸ್ಥೆಯ ಈ ಹೋರಾಟ, ವಿದ್ಯುಚ್ಛಕ್ತಿ ಬೆಲೆ ಏರಿಕೆಯ ನಂತರದ ವಿಶ್ವಬ್ಯಾಂಕ್ ಮತ್ತು ಅದರ ಗುಲಾಮ ಆಂಧ್ರ ಸರ್ಕಾರದ ವಿರುದ್ಧದ ಮತ್ತೊಂದು ಸಮರವಾಗಿದೆ.

ಅಂತಿಮವಾಗಿ ಇದೀಗ ಮುಷ್ಕರ ಕೊನೆಗೊಂಡಿದೆ.

ಇಂಡಿಯನ್ ಪೆಟ್ರೋ ಕೆಮಿಕಲ್ಸ್ 'ನವರತ್ನ'ದ ಮಾರಾಟ

ನವರತ್ನ ಎಂಬುದು ಸಂಪತ್ತಿನ ಸಂಕೇತ. ಅದು ಶೋಭಾಯಮಾನದ ಸಂಕೇತವೂ ಹೌದು. ದೀವಾಳಿಕೋರರು ಮಾತ್ರವೇ ಇದನ್ನು ಮಾರಾಟ ಮಾಡುತ್ತಾರೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ, ತನ್ನ ದೀವಾಳಿಕೋರ ನೀತಿಗೆ ಇನ್ನೊಂದು 'ಕೊಡುಗೆ' ನೀಡಿದೆ. ದೇಶದ ಸ್ವಾವಲಂಬನೆಯ ಸಂಕೇತ ಗಳಲ್ಲೊಂದಾದ 'ನವರತ್ನ'ಗಳಲ್ಲಿ ಒಂದೆಂದು ಪ್ರಖ್ಯಾತವಾದ ಇಂಡಿಯನ್ ಪೆಟ್ರೋಕೆಮಿಕಲ್ಸ್ ಸಂಸ್ಥೆಯನ್ನು ಮಾರಾಟ ಮಾಡಲು ಹೊರಟಿದೆ. ಇದು ಅತ್ಯಂತ ಲಾಭದಾಯಕ ಸಂಸ್ಥೆ. 2780 ಕೋಟಿ ರೂಪಾಯಿ ಆವರ್ತ ನಿಧಿ (ರಿಸರ್ವ್ ಫಂಡ್) ಈ ಕಂಪನಿಗಿದೆ. ಅದರ ಆಸ್ತಿಯ ಒಟ್ಟು ಮೌಲ್ಯ 10000 ಕೋಟಿ ರೂಪಾಯಿಗಳು. ಇದನ್ನೀಗ 1100 ಕೋಟಿ ರೂಪಾಯಿಗೆ ಖಾಸಗಿ ಉದ್ಯಮಪತಿಗಳಿಗೆ ಮಾರಾಟ ಮಾಡಲು ಹುನ್ನಾರ ನಡೆಸಿದೆ.

ಈಗಾಗಲೇ ಪೆಟ್ರೋಲ್ ಉತ್ಪನ್ನಗಳ ಉದ್ಯಮದಲ್ಲಿ ಏಕಸ್ವಾಮ್ಯಾಧಿಪತಿಯಾಗಿರುವ ಉದ್ಯಮಿಯನ್ನು ಪಾಲುದಾರನಾಗಿ ತೆಗೆದುಕೊಳ್ಳುವ ಆಲೋಚನೆ ಸರ್ಕಾರಕ್ಕಿದೆ.ಆ ಮೂಲಕ ಈ ಉದ್ಯಮದಲ್ಲಿ ಸ್ಪರ್ಧೆಯೆ ಇಲ್ಲದೆ, ಖಾಸಗಿ ಉದ್ಯಮಪತಿ ಮಾತ್ರ ಉಳಿದುಕೊಳ್ಳುತ್ತಾನೆ. ಹಾಗಾದರೆ ಮುಂದೆ ಗ್ರಾಹಕರ ಪರಿಸ್ಥಿತಿ?

ಇದೇ ಸಂದರ್ಭದಲ್ಲಿ ಐಪಿಸಿಎಲ್‌ನ ಶೇ 51 ರಷ್ಟು ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ನಿರ್ಧರಿಸಲಾಗಿದೆ. ಈಗಾಗಲೇ ಕುಸಿತಗೊಂಡಿರುವ ಶೇರು ಮಾರುಕಟ್ಟೆಯಲ್ಲಿ ಉತ್ತಮ ಪ್ರತಿಕ್ರಿಯೆ ಬರಲು ಸಾಧ್ಯವೆ?

ಈ ಹಿಂದೆ ಮಾರಾಟ ಮಾಡಿದ ಕಂಪನಿಗಳನ್ನು ನೆನಪಿಸಿಕೊಳ್ಳೋಣ. 5500 ಕೋಟಿ ರೂ. ಬೆಲೆಯ ಬಾಲ್ಕೊವನ್ನು 551 ಕೋಟಿ ರೂ.ಗೆ ಮಾರಾಟ ಮಾಡಿದ ಬಿಜೆಪಿ ಸರಾಕರ, 2200 ಕೋಟಿ ಬೆಲೆಬಾಳುವ ಮಾರ್ಡರ್ನ್ ಫುಡ್ ಕಂಪನಿಯನ್ನು ಬರೇ 157 ಕೋಟಿ ರೂ. ಗಳಿಗೆ ಮಾರಾಟ ಮಾಡಿತು. ಇದನ್ನು ಖರೀದಿಸಿದ ಖದೀಮರು ಯಾರು ಗೊತ್ತೆ? ಬ್ಯಾಂಕುಗಳಲ್ಲಿ ದೊಡ್ಡ ಮೊತ್ತದ ಸಾಲ ಪಡೆದು ವಾಪಸ್ಸು ನೀಡದಿರುವವರು, ಈ ಖರೀದಿಯಲ್ಲಿ ಸೇರಿದ್ದಾರೆ. ಇಂತಹ ಖದೀಮರನ್ನು ಬಿಜೆಪಿ ಸರಕಾರ ರತ್ನಗಂಬಳಿ ಹಾಕಿ ಸ್ವಾಗತಿಸುತ್ತಿದೆ. ಇದೆಂತಹ ಸರಕಾರ? 'ಬಿಡ್ಡರ' ಖರೀದಿಸುವವರು ಸಿಗದೆ ಇರುವ ಕಾರಣ ಇಂಡಿಯನ್ ಏರ್‌ಲೈನ್ಸ್‌ನ್ನು ಇದುವರೆಗೂ ಮಾರಾಟ ಮಾಡಲು ಸಾಧ್ಯವಾಗಿಲ್ಲ. ಐಟಿಡಿಸಿಗೆ ಸೇರಿದ ಒಂದೊಂದೇ ಹೋಟೆಲುಗಳು ಖಾಸಗಿಯವರ ಕೈ ಸೇರಲಿವೆ. ಬೆಂಗಳೂರು ಮತ್ತು ಹಾಸನಗಳಲ್ಲಿರುವ 'ಅಶೋಕ' ಹೋಟೆಲಿನ ಕಾರ್ಮಿಕರಿಗೆ ಆರ್ಥಿಕ ಲಾಭವಿಲ್ಲದ ಸ್ವಯಂ ನಿವೃತ್ತಿಯನ್ನು ತೆಗೆದುಕೊಳ್ಳಲು ಆದೇಶಿಸ ಲಾಗಿದೆ. ಇನ್ನು ಮುಂದೆ ಈ ಹೋಟೆಲುಗಳು ಕೇಂದ್ರ ಮಂತ್ರಿ ಅನಂತಕುಮಾರ ಅವರ ಚೇಲಾಗಳ ಕೈ ಸೇರಿದರೆ ಆಶ್ಚರ್ಯ ಪಡುವಂತದ್ದೇನಿಲ್ಲ.

ಆದ್ದರಿಂದ ಇಂಡಿಯನ್ ಪೆಟ್ರೋ ಕೆಮಿಕಲ್ಸ್ ನಿಗಮವನ್ನು (ಐಪಿಸಿಎಲ್) ಖಾಸಗೀಕರಣ ಗೊಳಿಸುವ ಪ್ರಕ್ರಿಯೆಯನ್ನು ಕೈಬಿಟ್ಟು ಸಾರ್ವಜನಿಕ ಕ್ಷೇತ್ರದಲ್ಲೇ ಉಳಿಸಿಕೊಳ್ಳಬೇಕೆಂದು ಜನತೆ ಒತ್ತಾಯಿಸಬೇಕಾಗಿದೆ.

ಚಿತ್ರಾವತಿ ನದಿಗೆ ಅಣೆಕಟ್ಟು ಕಟ್ಟಿದರೆ ಕ್ಷಾಮಪೀಡಿತ ಬಾಗೇಪಲ್ಲಿ ತಾಲೂಕು ಹಸಿರಿನಿಂದ ಬೀಗಲಿದೆ. ಇದಕ್ಕಾಗಿ ದೀರ್ಘಕಾಲದ ಹೋರಾಟ ಆರಂಭಗೊಂಡಿದ್ದು ಸರ್ಕಾರ, ಶಾಸಕರು, ಕಣ್ಣು ಮುಚ್ಚಾಲೆ ಆಡುತ್ತಿದ್ದಾರೆ. ಪೂರ್ಣ ನಿರ್ಲಕ್ಷಿಸಿದ್ದಾರೆ. ಈ ಮಳೆಗೆ ತುಂಬಿ ಹರಿದ ನದಿ ನೋಡಿ ಜನ ಪರಿತಪಿಸುತ್ತಿದ್ದಾರೆ.

ಅಪರೂಪದ ಚಿತ್ರಾವತಿ ನಿಲ್ಲಲು ಜಾಗವಿಲ್ಲವೇ?

ಭಾಸ್ಕರ್ ರೆಡ್ಡಿ

ಬಾಗೇಪಲ್ಲಿ ಕ್ಷಾಮದ ಬೀಡು ಎಂದು ಖಂಡಿತಾ ಹೆಸರಾಗಿದೆ. ಪ್ರತಿವರ್ಷ ಆಗಸ್ಟ್‌ವರೆಗೂ ಮಳೆ ನೆಲಕ್ಕುದುರುವುದಿಲ್ಲ. ಸೆಪ್ಟೆಂಬರ್ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಅಲ್ಪಸ್ವಲ್ಪ ಮಳೆ ಬಿದ್ದು ಕುಷ್ಕಿ ಭೂಮಿಯಲ್ಲಿ ಅಷ್ಟೋ ಇಷ್ಟೋ ಬೆಳೆ ಬರುವುದು. ಮತ್ತೆ ಇಡೀ ವರ್ಷ ಮಳೆಯನ್ನು ನೋಡುವ ಭಾಗ್ಯ ಬಾಗೇಪಲ್ಲಿಗಿಲ್ಲ. ಆದರೆ ಈ ವರ್ಷ ಅಪರೂಪವಾಗಿ ಅಕ್ಟೋಬರ್‌ನಲ್ಲಿ ಭಾರಿ ಮಳೆ ಬಿದ್ದು ಹಳ್ಳಕೊಳ್ಳಗಳು ತುಂಬಿ ಹರಿದಿವೆ. ಆದರೇನು ಮಾಡುವುದು ಇಡೀ ತಾಲೂಕಿನಲ್ಲಿ ಪೂರ್ತಿ ಹೂಳು ತುಂಬಿಕೊಂಡು ನೀರು ನಿಲ್ಲುವ ಸಾಮರ್ಥ್ಯ ಕಳೆದುಕೊಳ್ಳುತ್ತಿದೆ. ಈ ಹಿಂದೆ ಎರಡು ಬೆಳೆಗೆ ಆಗುತ್ತಿದ್ದ ನೀರು ಇಂದು ಒಂದು ಬೆಳೆಗೂ ಸಾಲದೇ ಬರುತ್ತಿರುವ ಪರಿಸ್ಥಿತಿ ಬಂದೊದಗಿದೆ. ಹಲವಾರು ಕೆರೆಗಳು ಸರಿಯಾದರೀತಿಯಲ್ಲಿ ದುರಸ್ಥಿಗೊಳ್ಳದೇ ಸುಮಾರು ನೀರು ಸೋರಿ ಹೋಗುತ್ತಿದೆ. ಆದರೆ ಇದನ್ನು ಗಮನಿಸುವ ಸರ್ಕಾರಗಳು ಮಾತ್ರ ಬರುತ್ತಿಲ್ಲ. ಅದರ ಪರಿಣಾಮ ಅಪರೂಪಕ್ಕೆ ಬಂದ ಮಳೆಯಿಂದ ಕುಷ್ಕಿ ಬೆಳೆಗೂ ಪ್ರಯೋಜನವಾಗಲಿಲ್ಲ. ನೀರಾವರಿಗೂ ಪ್ರಯೋಜನವಾಗಲಿಲ್ಲ. ಅದರಜೊತೆಗೆ ನೀರಾವರಿ ಇಲಾಖೆಯ ಉಪವಿಭಾಗ ಗೌರಿಬಿದನೂರನಲ್ಲಿ ರುವುದರಿಂದ ಬಾಗೇಪಲ್ಲಿಯ ಕೆರೆಗಳ ಪರಿಸ್ಥಿತಿ ನೋಡುವ ನಾಥರಿಲ್ಲದೆ ಅನಾಥವಾಗಿದೆ.

ಕೋಟಿಗಳ ಖರ್ಚಿನ ಲೆಕ್ಕ

ಈ ಹಿಂದಿನ ಜನತಾದಳ ಸರ್ಕಾರವೂ ಕೇವಲ ಪತ್ರಿಕೆಗಳಲ್ಲಿ ಪ್ರಚಾರಕ್ಕಾಗಿ ಕೆರೆಗಳ ಹೂಳೆತ್ತುವ ಕಾರ್ಯಕ್ರಮದ ಬಗ್ಗೆ ಪುಟಗಟ್ಟಲೆ ಹೇಳಿಕೆಗಳನ್ನು ಕೊಟ್ಟಿತು. ಆದರೆ ಮಾಡಿದ್ದು ಮಾತ್ರ ಶೂನ್ಯ. ಇಂದಿನ ಕಾಂಗ್ರೆಸ್ ಸರ್ಕಾರ ಬಂದು 2 ವರ್ಷವಾಯಿತು. ಆದರೆ ಐ.ಟಿ., ಬಿ.ಟಿ. ಬಿಟ್ಟು ಪಕ್ಕಕ್ಕೆ ಸರಿದಿಲ್ಲ. ರೈತರು, ಕೆರೆಗಳು ಎಲ್ಲಿ ಜ್ಞಾಪಕಕ್ಕೆ ಬರ್ತಾರೆ. ಜಿಲ್ಲಾ ಮಂತ್ರಿ ಮುನಿಯಪ್ಪನವರು 2 ವರ್ಷಗಳ ಸಾಧನೆಯನ್ನು ಕೋಟಿಗಳ ರೂಪದಲ್ಲಿ ಖರ್ಚಾಗಿರುವುದನ್ನು ಪತ್ರಿಕೆಗಳಿಗೆ ಅಂಕಿ ಸಂಖ್ಯೆಗಳೊಂದಿಗೆ ಕೊಟ್ಟಿದ್ದಾರೆ. ಇವು ಎಲ್ಲಾ ಖರ್ಚಾಗಿವೆ. ಹೇಗೆ ಖರ್ಚಾಗಿವೆ ಎನ್ನುವುದು ಮಾತ್ರ ಜನಕ್ಕೆ ಗೊತ್ತಿಲ್ಲ. ಮಾಡಿಲ್ಲದ ರಸ್ತೆಗೆ, ಕಟ್ಟದ ಕಟ್ಟಡಕ್ಕೆ ಬಿಲ್ಲು ಮಾಡುವುದನ್ನೇ ಖರ್ಚಾಗಿದೆ ಎಂದು ಹೇಳುತ್ತಿರಬಹುದು.

ಮೂಗು ತೂರಿಸುವ ಸಣ್ಣತನ

ಕಟ್ಟಡದ ನಿರ್ಮಾಣವೇ ಆಗದೇ ಶಾಲಾ ಕಟ್ಟಡವೊಂದಕ್ಕೆ ಬಿಲ್ಲು ಮಾಡಿ ತಿಂದು ತೇಗಿರುವ ಬಗ್ಗೆ ತನಿಖೆ ನಡೆಯಬೇಕೆಂದು ಸಿಪಿಐ(ಎಂ) ನ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಬಿ.ವಿ.ರಾಮರೆಡ್ಡಿಯವರು ಒತ್ತಾಯಿಸಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರನ್ನು ಕರೆದಕೊಂಡು ಬಂದರೆ, ಇಲ್ಲಿನ ಮಂತ್ರಿಗಳ ಶಿಷ್ಯಂದಿರಿರುವ ತನಿಖೆಗೆ ಹೋಗಬಾರದೆಂದು ಪಟ್ಟು ಹಿಡಿದು ಕೂತರು. ಆದರೆ ಅಧ್ಯಕ್ಷರು ಹೋಗಲೇಬೇಕೆಂದು ಪಟ್ಟು ಹಿಡಿದರು. ಕಡೆಗೆ ಜಿಲ್ಲಾ ಮಂತ್ರಿಗಳು ಫೋನು ಮಾಡಿ ತನಿಖೆಗೆ ಹೋಗಬಾರದೆಂದು ಆದೇಶದೊಂದಿಗೆ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು ಬುಸ್ಸೆಂದು ಎದ್ದವರು ಠುಸ್ಸೆಂದು ತಣ್ಣಗಾದರು. ಈ ರೀತಿಯಾಗಿ ಖರ್ಚಾದ ಹಣ ಲಕ್ಷಗಟ್ಟಲೆ ಇದೆ. ಪಟ್ಟಿ ಮಾಡುತ್ತಾ ಹೋದರೆ ಪುಟಗಟ್ಟಲೆ ಆಗುತ್ತದೆ. ಆ ರೀತಿಯ ಅಭಿವೃದ್ಧಿಯನ್ನು 2 ವರ್ಷದ ಸಾಧನೆಯೆಂದು ಜಂಬಕೊಚ್ಚಿಕೊಳ್ಳುವ ಮಂತ್ರಿಗಳು ಒಂದು ನಿರ್ದಿಷ್ಟ ಯೋಜನೆಯನ್ನು ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಿದ್ದೇವೆಂದು ಹೇಳಲಿ! ಇಡೀ ಆಡಳಿತವನ್ನು ಕಾಂಗ್ರೆಸ್ಸೀಕರಣಗೊಳಿಸಲು ಪ್ರಯತ್ನಿಸುತ್ತಿರುವುದು ಬಿಟ್ಟರೆ ಸಾಮಾನ್ಯ ಜನತೆಯ ಹತ್ತಿರಕ್ಕೆ ಆಡಳಿತವಂತೂ ಹೋಗಿಲ್ಲ. ಕೇವಲ 10-15 ಸಾವಿರ ರೂ. ಕೆಲಸಗಳಿಗೂ ಮಂತ್ರಿಯ ಪತ್ರ ಸಿಗುತ್ತಿದೆ. ಆ ಥರದ ಜಿಲ್ಲಾ ಪಂಚಾಯ್ತಿಯಿಂದ ಶಾಲಾ ಕಟ್ಟಡದ ರಿಪೇರಿಗೆಂದು ಕೇವಲ 15 ಸಾವಿರ ರೂ.ಗಳ ಟೆಂಡರನ್ನು ಜಿಲ್ಲಾ ಪಂಚಾಯ್ತಿ ಸದಸ್ಯರಾದ ಭಾರತೀದೇವಿಯವರು ಹಾಕಿಸಿದ್ದರೆ ಅದಕ್ಕೆ ಮಂತ್ರಿಗಳು ಪತ್ರ ಕೊಟ್ಟಿದ್ದಾರೆ. ಪ್ರತೀ ಸಣ್ಣ ವಿಷಯದಲ್ಲೂ ಮಂತ್ರಿಗಳು ಮೂಗು ತೂರಿಸುವ ಸಣ್ಣತನಕ್ಕೆ ಇಳಿದಿದ್ದಾರೆ.

ಸುಳ್ಳುಗಳು ಮತ್ತು ಸೂಪರ್ ಸುಳ್ಳುಗಳು

ಆದರೆ ನಿರಂತರ ಎರಡು ತಿಂಗಳ ಕಾಲ ಚಿತ್ರಾವತಿ ಹೋರಾಟ ಸಮಿತಿಯ ಮೂಲಕ ಬಾಗೇಪಲ್ಲಿ ಜನತೆ ಶಾಂತಿಯುತ ಹೋರಾಟ ನಡೆಸಿದರೆ, ಕನಿಷ್ಠ ಗಮನ ಹರಿಸದ ಮಂತ್ರಿಗಳು ಸಾಧನೆಯ ಬಗ್ಗೆ ಉಡಾಫೆ ಹೊಡೆಯುವುದು ಜಿಲ್ಲೆಯ ದುರಂತ. ಜುಲೈ 24 ರಂದು ಚಿತ್ರಾವತಿ ಅಣೆಕಟ್ಟಿಗೆ ಇನ್ನೆರೆಡು ತಿಂಗಳಲ್ಲಿ ಟೆಂಡರ್ ಕರೆಯುತ್ತೇವೆಂದು ಹೇಳಿಕೆ ಕೊಟ್ಟರು. ಅದು ಶುದ್ಧ ಸುಳ್ಳೆಂದು ಗೊತ್ತಿದ್ದರೂ ಜನ ನಂಬಿದ್ದರು. ಅವರ ಮುಖಗಳನ್ನು ನೋಡಿದರು. ಸಂಪುಟ ದರ್ಜೆ ಸಚಿವರಾಗಿ 2 ವರ್ಷದಿಂದ ನಾಲ್ಕಾರು ಬಾರಿ ಈ ಸುಳ್ಳನ್ನು ಪದೆ ಪದೇ ಹೇಳುತ್ತಾ ಬಂದರು.


ಆದರೂ ಜನ ಎರಡು ತಿಂಗಳ ಕಾಲ ತುಂಬಾ ತಾಳ್ಮೆಯಿಂದ ಕಾದರು. ಮತ್ತೆ ಅಕ್ಟೋಬರ್ 18 ರಂದು ಮತ್ತೆ ಇನ್ನೊಂದು ತಿಂಗಳಲ್ಲಿ ಟೆಂಡರ್ ಕರೆಯುತ್ತೇವೆಂದು ಸೂಪರ್ ಸುಳ್ಳನ್ನು ಪತ್ರಿಕೆಗಳಿಗೆ ಬಿಡುಗಡೆಗೊಳಿಸಿದ್ದಾರೆ. ಆದರೆ ಜನ ನಂಬುವ ಪರಿಸ್ಥಿತಿಯಲ್ಲಿಲ್ಲ. ಅಕ್ಟೋಬರ್ 15 ರಂದು ಚಿತ್ರಾವತಿ ಹೋರಾಟ ಸಮಿತಿಯ ಕಾರ್ಯಕರ್ತರು, ಸಿ.ಡಿ.ಗಂಗುಲಪ್ಪ, ಭಾಸ್ಕರರೆಡ್ಡಿ, ಜಿಲ್ಲಾ ಪಂಚಾಯ್ತಿ ಸದಸ್ಯರಾದ ಎಸ್.ಭಾರತೀದೇವಿ, ಎನ್.ಎಸ್.ಚಲಪತಿಯವರ ನೇತೃತ್ವದಲ್ಲಿ ಪಟ್ಟಣದ ಹೋರಾಟ ವೃತ್ತದಲ್ಲಿ ಘೆರಾವೋ ಮಾಡಿ ಒತ್ತಾಯಿಸಲಾಯಿತು. ನಿರ್ದಿಷ್ಟ ಸಮಯವನ್ನು ಕೇಳಿದರೆ ಜಾರಿಕೊಂಡು ಶೀಘ್ರದಲ್ಲೇ ನಿರ್ಮಿಸುತ್ತೇವೆಂದು ಒಂದು ಸುಳ್ಳನ್ನು ಬಿಡುಗಡೆಗೊಳಿಸಿ ಜಾರಿಕೊಂಡರು.

60 ದಿನಗಳ ಧರಣಿ ಸತ್ಯಾಗ್ರಹವೀಗ ಅಂತ್ಯಗೊಂಡಿದೆ. ಆದರೆ ಮುಂದೆ ಹೋರಾಟ ತೀವ್ರಗೊಳ್ಳಲಿದೆ ಎಂದು ಅಕ್ಟೋಬರ್ 24 ರಂದು ಚಿತ್ರಾವತಿ ಹೋರಾಟ ಸಮಿತಿಯ ಸಂಚಾಲಕರಾದ ಜಿ.ವಿ.ಶ್ರೀರಾಮರೆಡ್ಡಿಯವರು ಎಚ್ಚರಿಸಿದ್ದಾರೆ. ಸರ್ಕಾರ ಕಿವುಡಾಗಿದೆ ಕಿವುಡ ಸರ್ಕಾರಕ್ಕೆ ಶಾಂತವಾಗಿ ಹೇಳಿದರೆ ಕೇಳಿಸುವುದಿಲ್ಲ, ಅದಕ್ಕೇನಾದರೂ ಜೋರಾಗಿ ಕೂಗಿ ಹೇಳಬೇಕು. ಅದಕ್ಕೆ ನಮ್ಮ ಹೋರಾಟದ ಸ್ವರೂಪವನ್ನು ಬದಲಿಸಿ ಸರ್ಕಾರ ಕೇಳುವಂತೆ ಮಾಡುತ್ತೇವೆಂದು ತಿಳಿಸಿದರು.

ನವೆಂಬರ್ 5 ರಂದು ಬಾಗೇಪಲ್ಲಿ ತಾಲ್ಲೂಕು ಬಂದ್‌ಗೆ ಚಿತ್ರಾವತಿ ಅಣೆಕಟ್ಟು ಹೋರಾಟ ಸಮಿತಿ ಕರೆ ನೀಡಿತು. ಆ ನಂತರ ವಿವಿಧ ರೂಪಗಳಲ್ಲಿ ಹೋರಾಟ ಉಗ್ರವಾಗಿರುತ್ತದೆ ಎಂದು ರೆಡ್ಡಿಯವರು ತಿಳಿಸಿದರು. ತಾ. 29.10.2001 ರಂದು ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯವನ್ನು ನಡೆಸಲಾಯಿತು.

ಅಪರೂಪದ ನೀರು ನಿಲ್ಲಲು ಜಾಗವೆಲ್ಲಿ?

ಆರೇಳು ವರ್ಷಕ್ಕೊಮ್ಮೆ ಬಾರಿ ಮಳೆ ಬೀಳುತ್ತೆ. ಆಗ ಮಾತ್ರ ಹರಿಯುವ ಚಿತ್ರಾವತಿ ಈ ವರ್ಷ ಅಕ್ಟೋಬರನಲ್ಲಿ ಬಿದ್ದ ಬಾರಿ ಮಳೆಯಿಂದ ಮೈತುಂಬಿ ಹರಿದಿದೆ. ಸಾವಿರಾರು ಕ್ಯೂಸೆಕ್ಸ್‌ಗಳಷ್ಟು ಹರಿದ ನೀರನ್ನು ಸಾವಿರಾರು ಜನ ನೋಡಿ ಮೂಕರಾಗದೇ ಇರಲಿಲ್ಲ. ಚಿತ್ರಾವತಿ ಮೈತುಂಬಿ ಹರಿದು ಚಿತ್ರಾವತಿ ಅಣೆಕಟ್ಟಿನ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ. ಜನತೆಯನ್ನು ಎಚ್ಚರಿಸಿದೆ. ಮರಳು ಮಾತ್ರ ಹರಿದು ಮರಳು ಕಳ್ಳರ ಜೇಬಿಗೆ ಹಣ ತುಂಬಿಸುವುದು ಮಾತ್ರ ನನ್ನ ಕೆಲಸ ಎಂದು ತಿಳಿದುಕೊಂಡಿರುವಿರಾ? ನೀರು ಕೂಡಾ ಹರಿದು ನಿಮ್ಮ ಹೊಟ್ಟೆ ಉರಿಯುವಂತೆ ಮಾಡಿ ಆಂಧ್ರದತ್ತ ಹೊರಟುಹೋಗುತ್ತೇನೆ ಎಂದು ಜನರ ಮನಸ್ಸಿಗೆ ನಾಟುವಂತೆ ಮಾಡಿತು. ನೋಡಿದ ಪ್ರತಿಯೊಬ್ಬರೂ ಅಣೆಕಟ್ಟು ನಿರ್ಮಿಸಿದ್ದರೆ ಎಷ್ಟು ನೀರು ನಿಲ್ಲುತ್ತಿತ್ತು, 4-5 ವರ್ಷ ನೀರಿನ ಕೊರತೆ ಇಲ್ಲದೇ ಎಷ್ಟು ಪ್ರಯೋಜನವಾಗುತ್ತಿತ್ತು ಎನ್ನುವವರೇ. ಅಷ್ಟೇ ಅಲ್ಲ, ಚಿತ್ರಾವತಿ ಹರಿಯುವ ಉದ್ದಕ್ಕೂ ಸಣ್ಣಪುಟ್ಟ ಹಳ್ಳಕೊಳ್ಳಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಒಂದೊಂದು ಕಡೆ ರಭಸವಾಗಿ ಝುಳಪಿಸಿಕೊಂಡು ನಾಟ್ಯವಾಡುತ್ತಾ ಇನ್ನೂ ಕೆಲವು ಕಡೆ ಶಾಂತವಾಗಿ ಹರಿದು 3 ಸೇತುವೆಗಳಿಗೆ ಡಿಕ್ಕಿ ಹೊಡೆದು ನಾಶಪಡಿಸುತ್ತಾ ಹರಿದು ಹೋಗಿದೆ. ಎರಡು ಸೇತುವೆಗಳು ಸಂಪರ್ಕಕ್ಕೆ ಸಾಧ್ಯವಿಲ್ಲದೇ ಇನ್ನೊಂದು ಪ್ರಮುಖ ಸೇತುವೆಯು ಕೆಳಗೆ ಪಾಯದ ವರೆಗೂ ಭಾಗಶಃ ಕೊಚ್ಚಿಕೊಂಡು ಹೋಗಿದೆ. ನನ್ನನ್ನು ನಿಲ್ಲಿಸಲು ನಿಮ್ಮ ಕೈಯಲ್ಲಿ ಆಗಲಿಲ್ಲ ಎನ್ನುವ ಕೋಪ ಇರಬಹುದು. ನಿರಂತರ ಒಂದು ತಿಂಗಳಿಂದ ಸತತವಾಗಿ ಹರಿಯುತ್ತಿದೆ. ಇನ್ನೆರೆಡು ತಿಂಗಳು ಸತತವಾಗಿ ಹರಿಯಬಹುದಾಗಿದೆ. ಆದರೆ



ಜಿಲ್ಲಾ ಉಸ್ತುವಾರಿ ಸಚಿವ ಮುನಿಯಪ್ಪ.ವಿ

ನಿಲ್ಲಿಸುವ ತಾಕತ್ತು ಸರ್ಕಾರದಲ್ಲಿ ಇರದೇ ಒಂದು ತೊಟ್ಟು ನಿಲ್ಲದೇ ಹೋಗುತ್ತಿದ್ದರೆ ಜನತೆಯ ಹೋರಾಟವನ್ನು ಗಮನಕ್ಕೆ ತೆಗೆದುಕೊಳ್ಳದೆ ಇದ್ದುದು ಜನತೆಯ ಸಹನೆಗೆ ಪರೀಕ್ಷೆ ಇಟ್ಟಂತಾಗಿದೆ.

ಸರ್ಕಾರದ ನೀತಿಗಳಿಂದ ರೈತರು ಒಂದು ಕಡೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಇನ್ನೊಂದುಕಡೆ ಗೋಲಿಬಾರ್‌ನಲ್ಲಿ ರೈತರನ್ನು ಸಾಯಿಸುತ್ತಾರೆ. ಸಹನೆಯ ಕಟ್ಟೆ ಹೊಡೆದರೆ ರೊಚ್ಚಿಗೆದ್ದ ಜನತೆಯನ್ನು ಪೋಲೀಸರ ಮೂಲಕ ಸದೆಬಡೆಯಲು ಪ್ರಯತ್ನಿಸುವ ಬದಲು ಹೋರಾಟವನ್ನು ಮನ್ನಿಸಿ, ಅದಕ್ಕೆ ಮಾರ್ಗೋಪಾಯ ಕಂಡು ಹಿಡಿದರೆ ಸಾವುಗಳೆಲ್ಲಿಂದ ಬರ್ತಾವೆ. ಜನತೆಯು ಹರಿದುಹೋಗುತ್ತಿರುವ ನೀರನ್ನು ಕಂಡು ರೋಸಿ ಹೋಗಿದ್ದಾರೆ. 60 ದಿನಗಳ ಸುದೀರ್ಘ ಹೋರಾಟ ಸರ್ಕಾರದ ಕಣ್ಣಲ್ಲಿ ಬೀಳದೇ ಇರುವುದು ಶಾಸಕ, ಸಚಿವರ ದುರಂತ. ನಿರ್ಲಕ್ಷ್ಯ ವೃತ್ತಿ ಪ್ರತೀಕ. ಯಾರಿಗಾಗಿ ಈ ಸರ್ಕಾರ ಎನ್ನುವುದು ಜನರ ಪ್ರಶ್ನೆ. ಈಗಲಾದರೂ ಅಣೆಕಟ್ಟು ನಿರ್ಮಿಸಿದರೆ ಮುಂದಿನ ದಿನಗಳಲ್ಲಿ ಬೀಳುವ ಮಳೆಯಿಂದಲಾದರೂ ನೀರು ನಿಲ್ಲುವಂತಾದೀತು ಎಂದು ಹಾರೈಸೋಣವೇ?



ಮುಂದುವರಿದ ನಿರಂತರ ಧರಣಿ

ಅಕ್ಟೋಬರ್ ಕ್ರಾಂತಿ ತೋರಿದ ದಾರಿ

ಹರ್ಕಿಶನ್ ಸಿಂಗ್ ಸುರ್ಜಿತ್

ಜಗತ್ತಿನ ಇತಿಹಾಸದ ಗತಿಯನ್ನೇ ಬದಲಾಯಿಸಿದ ಮಹಾನ್ ಘಟನೆ ಅಕ್ಟೋಬರ್ ಮಹಾನ್ ಕ್ರಾಂತಿ. ಅದು ತೋರಿದ ಕ್ರಾಂತಿಕಾರಿ ದಾರಿ, ಉಂಟು ಮಾಡಿದ ಪರಿಣಾಮಗಳನ್ನು ಆಳ ಅನುಭವದ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ ಕಾಂ. ಸುರ್ಜಿತ್.



ಮಹಾನ್ ಅಕ್ಟೋಬರ್ ಕ್ರಾಂತಿಯ ಯಶಸ್ಸು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತ ಎಷ್ಟೊಂದು ಸರಿಯಾದ, ವೈಜ್ಞಾನಿಕವಾಗಿ ಎಷ್ಟೊಂದು ಸಮಂಜಸವಾದ ಸಿದ್ಧಾಂತ ಎನ್ನುವುದನ್ನು ಸಿದ್ಧಪಡಿಸಿತು. ಜಗತ್ತನ್ನೇ ನಡುಗಿಸಿದ ಈ ಘಟನೆ ಇತಿಹಾಸದಲ್ಲಿ ಒಂದು ಹೊಸ ಯುಗವನ್ನೇ ಆರಂಭಿಸಿತು.

ಬದಲಾವಣೆಯ ಹಾದಿ

ವೈಜ್ಞಾನಿಕ ಸಮಾಜವಾದದ ಸಂಸ್ಥಾಪಕರಾದ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ಬಂಡವಾಳಶಾಹಿಯಿಂದ ಸಮಾಜವಾದ ಮತ್ತು ಸಮಾಜವಾದದ ವರೆಗೆ ಮಾನವ ಬೆಳವಣಿಗೆಯ ಇತಿಹಾಸ ಹಿಡಿಯುವ ದಾರಿಯ ರೂಪುರೇಶೆಗಳನ್ನು ನೀಡಿದರು. ಈ ಬದಲಾವಣೆ ತರುವ ಸಾಮಾನ್ಯ ದಾರಿಯ ಬಗ್ಗೆ ತಿಳಿದಿದ್ದರೂ ಇದನ್ನು ಸಾಧಿಸಲು ನಿರ್ದಿಷ್ಟ ದಾರಿಗಳು ವಿಧಾನಗಳು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತವೆ. ಇವು ಅಂತರ್ರಾಷ್ಟ್ರೀಯ ಸನ್ನಿವೇಶವನ್ನು ಮತ್ತು ಆಯಾ ದೇಶದ ಪರಿಸ್ಥಿತಿಯನ್ನು ಅವಲಂಬಿಸುತ್ತದೆ.

'ಸಮಾಜವಾದದ ದಾರಿಯ ಪ್ರತಿಯೊಂದು ವಿವರ ಮಾರ್ಕ್ಸ್‌ಗೆ ಗೊತ್ತಿತ್ತು ಅಥವಾ ಮಾರ್ಕ್ಸ್‌ವಾದಿಗಳಿಗೆ ಗೊತ್ತಿದೆ ಎಂದೇನೂ ನಾವು ಹೇಳಿಕೊಳ್ಳುತ್ತಿಲ್ಲ. ಹಾಗೆ ಹೇಳಿಕೊಳ್ಳುವುದೂ ಅಸಂಬದ್ಧ. ನಮಗೆ ಗೊತ್ತಿರುವುದು ಈ ದಾರಿಯ ದಿಕ್ಕು ಅದನ್ನು ಅನುಸರಿಸುವ ವರ್ಗ ಶಕ್ತಿಗಳು; ಅದರ ನಿರ್ದಿಷ್ಟ, ಕಾರ್ಯರೂಪದ ವಿವರಗಳು ಮಿಲಿಯಗಟ್ಟಲೆ ಜನ ಪರಿಸ್ಥಿತಿಯನ್ನು ತಮ್ಮ ಕೈಗೆ ತಗೊಂಡಾಗ ಅದರ ಅನುಭವದ ಮೂಲಕವಷ್ಟೇ ಬೆಳಕಿಗೆ ಬರುವುದು' ಎಂದು ಲೆನಿನ್ 1917 ರಲ್ಲಿ ಹೇಳಿದ್ದರು.

ಮಾನವಕುಲದ ಅತ್ಯುನ್ನತ ಮನಸ್ಸುಗಳು ಆದಾಗಲೇ ಎತ್ತಿದ್ದ ಪ್ರಶ್ನೆಗಳಿಗೆ ಉತ್ತರ ನೀಡಿದ್ದೇ ಮಾರ್ಕ್ಸ್‌ರವರ ನಿಜವಾದ ಹಿರಿಮೆ. 'ತತ್ವಶಾಸ್ತ್ರ ರಾಜಕೀಯ ಅರ್ಥಶಾಸ್ತ್ರ ಮತ್ತು ಸಮಾಜವಾದದ ಅತ್ಯಂತ ಮಹಾನ್ ಪ್ರತಿನಿಧಿಗಳ ಬೋಧನೆಗಳ ನೇರ ಮತ್ತು ತಕ್ಷಣದ ಮುಂದುವರಿಕೆಗಳೇ ಅವರ ಈ ಸಿದ್ಧಾಂತ' ಎಂದೂ ಲೆನಿನ್ ಹೇಳಿದ್ದಾರೆ.

ಲೆನಿನ್‌ರ ಈ ಮಾತುಗಳು ಮಾರ್ಕ್ಸ್‌ವಾದಿ ಸಿದ್ಧಾಂತದ ಬೆಳವಣಿಗೆಯ ಹಿನ್ನೆಲೆಯನ್ನು ತೋರಿಸುತ್ತದೆ.

ಲೆನಿನ್‌ನಾಯಕತ್ವ

ಎಲ್ಲರೂ ತಿಳಿದಿರುವಂತೆ ಮೊದಲ ಮಹಾ ಯುದ್ಧದ ವೇಳೆಯಲ್ಲಿ 'ಎರಡನೇ ಅಂತರ್ರಾಷ್ಟ್ರೀಯ' (Second International) ದಲ್ಲಿ ಲೆನಿನ್ ಎಲ್ಲಾ ಸಾಮಾಜಿಕ ಪ್ರಜಾಪ್ರಭುತ್ವವಾದೀ ಪಕ್ಷಗಳು ಯುದ್ಧ-ವಿರೋಧಿ ವೇದಿಕೆಯನ್ನು ಸ್ವೀಕರಿಸುವಂತೆ ಅವುಗಳಿಗೆ ಮನವರಿಕೆ ಮಾಡಿಸುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದರು. ಆದರೆ ಯುದ್ಧ ಸಿಡಿದಾಗ ಮಾತ್ರ ಈ ಎಲ್ಲಾ ಪಕ್ಷಗಳು ತಮ್ಮ ನಿಲುವು ಬದಲಿಸಿ ತಂತಮ್ಮ ದೇಶಗಳ ಬೂರ್ಜ್ವಾ ವರ್ಗದ ಯುದ್ಧ ಪ್ರಯತ್ನಗಳ ಬೆಂಬಲಕ್ಕೆ ನಿಂತರು. 'ಎರಡನೇ ಅಂತರ್ರಾಷ್ಟ್ರೀಯ' ಇದರಿಂದಾಗಿ ಕುಸಿಯಿತು. ರಶ್ಯಾದ ಪಕ್ಷದೊಳಗೂ ತೀವ್ರ ಹೋರಾಟ ನಡೆದು ಪಕ್ಷ ಬೊಲ್ಶೆವಿಕ್‌ರು (ಬಹುಸಂಖ್ಯಾತರು) ಮತ್ತು ಮೆನ್ಶೆವಿಕರು (ಅಲ್ಪಸಂಖ್ಯಾತರು) ಎಂದು ವಿಭಜನೆಯಾಯಿತು. ಲೆನಿನ್ ಬೊಲ್ಶೆವಿಕರ ನೇತೃತ್ವದಲ್ಲಿದ್ದರು.

ಅಕ್ಟೋಬರ್ ಕ್ರಾಂತಿ

ಈ ಸಾಮ್ರಾಜ್ಯಶಾಹಿ ಘಟ್ಟದಲ್ಲಿ ಕ್ರಾಂತಿಯ ವಿಶ್ಲೇಷಣೆ ಮಾಡುತ್ತಾ ಲೆನಿನ್ ಸಮಾಜವಾದಿ ಕ್ರಾಂತಿ ಬಂಡವಾಳಶಾಹಿ ದೇಶಗಳಲ್ಲಿ ಮಾತ್ರವಲ್ಲ, ಅದಕ್ಕಿಂತ ಹಿಂದುಳಿದ, ಆದರೆ ಸಾಮ್ರಾಜ್ಯಶಾಹಿ ಕೊಂಡಿ ಅತ್ಯಂತ ದುರ್ಬಲವಾಗಿರುವ ಒಂದು ದೇಶದಲ್ಲೂ ಸಾಧ್ಯ ಎಂಬ ತೀರ್ಮಾನಕ್ಕೆ ಲೆನಿನ್ ಬಂದರು.

ಹೀಗೆ ಹೊಸ ಅವಧಿಯ ಈ ವೈಜ್ಞಾನಿಕ ತಿಳುವಳಿಕೆ ಮತ್ತು ಸಿದ್ಧಾಂತವನ್ನು ರಶ್ಯಾದ ನಿರ್ದಿಷ್ಟ ಸನ್ನಿವೇಶಕ್ಕೆ ನಿರ್ದಿಷ್ಟ ರೀತಿಯಲ್ಲಿ ಅನ್ವಯಿಸಿದ್ದರಿಂದ ಬೊಲ್ಶೆವಿಕ್ ಪಕ್ಷ ಲೆನಿನ್ ನೇತೃತ್ವದಲ್ಲಿ ಹಿಂದುಳಿದ ಝಾರ್‌ಶಾಹಿ ರಶ್ಯಾದಲ್ಲಿ ಕ್ರಾಂತಿಗೆ ಸಿದ್ಧಗೊಳ್ಳಲು, ಅದನ್ನು ಯಶಸ್ವಿಯಾಗಿ ಈಡೇರಿಸಲು ಸಾಧ್ಯವಾಯಿತು. ಹಳೆಯ ಆಳ್ವಿಕೆಯನ್ನು ರಶ್ಯಾದ ಹಳೆಯ ಕ್ಯಾಲೆಂಡರಿನ ಪ್ರಕಾರ ಅಕ್ಟೋಬರ್ 25, 1917 ರಂದು (ನಂತರದ ಕ್ಯಾಲೆಂಡಿರಿನಲ್ಲಿ ನವೆಂಬರ್ 7) ಕಿತ್ತೆಸೆದುದರಿಂದ ಇದು 'ಅಕ್ಟೋಬರ್ ಕ್ರಾಂತಿ' ಯೆಂದು ಜನಪ್ರಿಯವಾಯಿತು.

ಕ್ರಾಂತಿ ರಕ್ಷಣೆ

ಇಂತಹ ಬೃಹತ್ ಬೆಳವಣಿಗೆ ಹಾಗೂ ತನ್ನ ವ್ಯವಸ್ಥೆಯ ಮೇಲೆ ಇಂತಹ ಧಾಳಿಯಿಂದ ತತ್ತರಿಸಿದ ಬಂಡವಾಳಶಾಹಿ ಇನ್ನೂ ಶೈಶವಾವಸ್ಥೆಯಲ್ಲಿದ್ದ ಸಮಾಜವಾದಿ ಪ್ರಭುತ್ವದ ಕುತ್ತಿಗೆ ಹಿಸುಕಲು ಸರ್ವ ಪ್ರಯತ್ನ ನಡೆಸಿತು. ಆದರೆ ಲೆನಿನ್ ನೇತೃತ್ವದ ಬೊಲ್ಶೆವಿಕರ ಸಮಾಜವಾದಿ ಪ್ರಭುತ್ವ ತಕ್ಷಣವೇ ಶಾಂತಿಯ ಕುರಿತು, ಭೂಮಿಯ ರಾಷ್ಟ್ರೀಕರಣದ ಕುರಿತು ಎರಡು ಡಿಕ್ರಿಗಳನ್ನು ಘೋಷಿಸಿ ಈ ಬಗ್ಗೆ ತನ್ನ ನಿಲುವನ್ನು ಸಾರಿತು. ಈ ಮೂಲಕ ರೈತಾಪಿವರ್ಗ ಕ್ರಾಂತಿಯ ರಕ್ಷಣೆಯಲ್ಲಿ ಕಾರ್ಮಿಕ ವರ್ಗದೊಡನೆ ಕೈಜೋಡಿಸು ವಂತಾಯಿತು. ಈ ರೀತಿ ಗಳಿಸಿದ ಶಕ್ತಿಯಿಂದ ಇನ್ನೂ ಶೈಶವಾವಸ್ಥೆಯಲ್ಲಿದ್ದ ಸಮಾಜವಾದಿ ಪ್ರಭುತ್ವ ಬಂಡವಾಳಶಾಹಿ ಪ್ರಭುತ್ವಗಳು ಹಾಗೂ ಸೇನೆಗಳಿಂದ ಸುತ್ತುವರೆದಿದ್ದರೂ ಅದನ್ನೆಲ್ಲಾ ಯಶಸ್ವಿಯಾಗಿ ಎದುರಿಸಿ ಕೊನೆಗೆ ಸಾಮ್ರಾಜ್ಯಶಾಹಿ ಸಶಸ್ತ್ರ ಮಧ್ಯಪ್ರವೇಶವನ್ನು ವಿಫಲಗೊಳಿಸಿ ಅವರ ಬೆಂಬಲದಿಂದ ನಡೆಯುತ್ತಿದ್ದ ಆಂತರಿಕ ಯುದ್ಧವನ್ನು ಕೊನೆಗೊಳಿಸಿತು.

ವಿಶ್ವಹೋರಾಟಕ್ಕೆ ದಾರಿದೀಪ

ನಿಜವಾಗಿಯೂ 'ವಿಶ್ವವನ್ನು ನಡುಗಿಸಿದ' ಈ ಘಟನೆ ಅಂತರ್ರಾಷ್ಟ್ರೀಯವಾಗಿ ಕಾರ್ಮಿಕ ವರ್ಗದ ಆಂದೋಲನಕ್ಕೆ ಸ್ಫೂರ್ತಿ ನೀಡಿತು. ಹಲವಾರು ವಸಾಹತುಗಳು ಹಾಗೂ ಅರೆ ವಸಾಹತುಗಳ ಸ್ವಾತಂತ್ರ್ಯ ಹೋರಾಟಗಳನ್ನು ತ್ವರಿತಗೊಳಿಸಿತು. ಅದೇ ವೇಳೆಗೆ ಒಂದು ಸಮಾಜವಾದಿ ಪ್ರಭುತ್ವದ ಉದಯ ಹಾಗೂ ಸೋವಿಯತ್ ಒಕ್ಕೂಟದ ರಚನೆಯಿಂದಾಗಿ ಹಿಂದಿನ ಜಾರ್‌ನ 'ಸೆರೆಮನೆ' ಯಂತಿದ್ದ ದಮನಕ್ಕೊಳಗಾದ ದೇಶಗಳಲ್ಲಿನ ಜನಗಳ ವಿಮೋಚನೆಯೂ ಆಯಿತು.

ಸೋವಿಯತ್ ಒಕ್ಕೂಟ ತನ್ನ ಏಳು ದಶಕಗಳಿಗೂ ಮೀರಿದ ಅವಧಿಯಲ್ಲಿ ತನ್ನ ನಾಗರಿಕರಿಗೆ ಇದುವರೆಗೆ ಯಾರು ಕಂಡಿರದಿದ್ದ ಕೇಳಿರದಿದ್ದ ಹಕ್ಕುಗಳನ್ನು ನಿಜವಾಗಿಯೂ ಒದಗಿಸಿತು. ಕೆಲಸದ ಹಕ್ಕು, ಶಿಕ್ಷಣದ ಹಕ್ಕು, ಆರೋಗ್ಯಕರ ಹಕ್ಕು, ಆಶ್ರಯದ ಹಕ್ಕು ಇತ್ಯಾದಿ ಹಲವಾರು ಹಕ್ಕುಗಳು ವಿಶ್ವದ ಪ್ರಥಮ ಸಮಾಜವಾದಿ ದೇಶದಲ್ಲಿ ಮಾತುಗಳಿಂದ ಕೃತಿಗಿಳಿದದ್ದು ಬೇರೆ ದೇಶಗಳ ಹೋರಾಟ ನಿರತ ಜನತೆಯ ಮೇಲೆ ಆಳವಾದ ಪರಿಣಾಮ ಬೀರಿತು. ಇದರಿಂದಾಗಿ ಈ ದೇಶಗಳಲ್ಲಿನ ಬಂಡವಾಳಶಾಹಿಗಳು ತಮ್ಮ ಬಡಜನಗಳಿಗೆ ಹಲವಾರು ರಿಯಾಯ್ತಿಗಳನ್ನು ನೀಡಬೇಕಾಯಿತು. ಈ ಹಿನ್ನೆಲೆಯಲ್ಲಿ 'ಕಲ್ಯಾಣ ಪ್ರಭುತ್ವ' (Welfare State) ಎಂಬ ಪರಿಕಲ್ಪನೆಯೂ ಮೂಡಿ ಬರುವಂತಾಯಿತು. ಇದರ ನಡುವಿನಲ್ಲೇ ಸೋವಿಯತ್ ಒಕ್ಕೂಟ ಎಲ್ಲಾ ರೀತಿಯ ವೈರತ್ವಪೂರ್ಣ ಕ್ರಮಗಳನ್ನು ಎದುರಿಸಿಯೂ ಒಂದು ಆಧುನಿಕ ಕೈಗಾರೀಕೃತ ಪ್ರಭುತ್ವವಾಗಿ ಬೆಳೆಯಿತು. 1929-33 ರ ಅವಧಿಯಲ್ಲಿ ಇಡೀ ವಿಶ್ವ ಆರ್ಥಿಕ ಬಿಕ್ಕಟ್ಟಿನಿಂದ ನರಳುತ್ತಿದ್ದಾಗ ಸೋವಿಯತ್ ಒಕ್ಕೂಟವನ್ನು ಅದು ತಟ್ಟದೇ ಇದ್ದದ್ದು ಕೇವಲ ಆಕಸ್ಮಿಕವಲ್ಲ. ಈ ಆರ್ಥಿಕ ಬಿಕ್ಕಟ್ಟು ನಂತರ ಇಟಲಿ ಮತ್ತು ಜರ್ಮನಿಯಲ್ಲಿ ಫ್ಯಾಸಿಸಂನ ಉದಯಕ್ಕೆ, ನಂತರ ಮಹಾಯುದ್ಧಕ್ಕೆ ದಾರಿ ಮಾಡಿಕೊಟ್ಟಿತು




ಎಂಬುದನ್ನು ಗಮನಿಸಬೇಕು.

ಇತಿಹಾಸ ರೂಪಿಸುವಲ್ಲಿ

ಬಂಡವಾಳಶಾಹಿ ಜಗತ್ತು ಕೂಡಾ ಸಮಕಾಲೀನ ಇತಿಹಾಸವನ್ನು ರೂಪಿಸುವಲ್ಲಿ ಸೋವಿಯತ್ ಒಕ್ಕೂಟ ವಹಿಸಿದ ಪಾತ್ರವನ್ನು ಒಪ್ಪಿಕೊಳ್ಳುವಂತಾಗಿದೆ. ಸೋವಿಯತ್ ಒಕ್ಕೂಟದ ಸಾಧನೆಗಳಲ್ಲಿ ಪ್ರಮುಖವಾದವುಗಳು ಹೀಗಿವೆ - . ಫ್ಯಾಸಿಸಂ ಮೇಲೆ ವಿಜಯ, ಹಿಟ್ಲರ್ ವಾದೀ ಯಂತ್ರ ಯಾವುದೇ ಅಡೆ-ತಡೆಯಿಲ್ಲದೆ ಮುಂದೊತ್ತುತ್ತಿದ್ದಾಗ, ಸಾಮ್ರಾಜ್ಯಶಾಹಿ ದೇಶಗಳು ಫ್ಯಾಸಿಸ್ಟ್ ಮಂದೆಗಳನ್ನು ಎದುರಿಸಿ ನಿಲ್ಲಲು ಅಸಾಧ್ಯವಾದಂತಹ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟ ವಿಶ್ವವನ್ನು ಫ್ಯಾಸಿಸ್ಟ್‌ರನ್ನು ಸಂಪೂರ್ಣವಾಗಿ ಸೋಲಿಸಿ ಆ ಪೀಡೆಯಿಂದ ಜಗತ್ತನ್ನು ಉಳಿಸಿತು. ಇದಕ್ಕಾಗಿ ಅದು ಇಪ್ಪತ್ತು ಸಾವಿರ ಯುವಜನರ, ಜನತೆಯ ಪ್ರಾಣಗಳನ್ನು, ಎರಡು ದಶಕಗಳಲ್ಲಿ ಅವರು ಕಟ್ಟಿ ಬೆಳೆಸಿದ ತನ್ನ ಬಹುಪಾಲು ಕೈಗಾರಿಕಾ ಮತ್ತು ಕೃಷಿ ಸಂಪತ್ತನ್ನು ಬಲಿಗೊಟ್ಟಿತು.

ಫ್ಯಾಸಿಸಂ ಮೇಲಿನ ವಿಜಯ ಜಗತ್ತಿನಲ್ಲಿನ ವರ್ಗ ಬಲಾಬಲವನ್ನು ತೀವ್ರವಾಗಿ ಬದಲಿಸಿತು. ಸೋವಿಯತ್ ಒಕ್ಕೂಟದ ಕೆಂಪು ಸೇನೆಯಿಂದ ಪೂರ್ವ ಯುರೋಪಿನ ವಿಮೋಚನೆಯಿಂದ ಅಲ್ಲಿ ಸಮಾಜವಾದಿ ಪ್ರಭುತ್ವಗಳು ಸ್ಥಾಪನೆಯಾದವು. ಜಪಾನಿನ ಸೋಲಿನಿಂದ ಚೀಣಾದ ಕ್ರಾಂತಿ ಯಶಸ್ವಿಯಾಯಿತು.

ಎರಡನೆಯದಾಗಿ, ಯುದ್ಧನಂತರದ ಏಶ್ಯಾ ಮತ್ತು ಆಫ್ರಿಕಾದ ಹಲವಾರು ದೇಶಗಳು ಸ್ವಾತಂತ್ರ್ಯಗಳಿಸಿದವು. ಭಾರತವೂ ಇವುಗಳಲ್ಲಿ ಒಂದು. ಸೋವಿಯತ್ ಒಕ್ಕೂಟ ನೇರ ಸಾಮ್ರಾಜ್ಯಶಾಹಿ ಆಳ್ವಿಕೆಯ ವಿರುದ್ಧ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಈ ದೇಶಗಳಿಗೆ ನೆರವು ನೀಡಿತು. ಸೋವಿಯತ್ ಒಕ್ಕೂಟದ ಅಸ್ತಿತ್ವ



ಸಾಮ್ರಾಜ್ಯಶಾಹಿ ಕೊಳ್ಳೆ ಮತ್ತು ದಮನದ ವಿರುದ್ಧ ಭದ್ರ ಕೋಟೆಯಂತೆ ಕೆಲಸ ಮಾಡಿತು.

ಮೂರನೆಯದಾಗಿ, ಈ ಮಾಜಿ ವಸಾಹತುಗಳ ಮೇಲೆ ತಮ್ಮ ಕಪಿಮುಷ್ಟಿ ಸಾಧಿಸುವ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳನ್ನು ಸೋವಿಯತ್ ಒಕ್ಕೂಟ ವಿಫಲಗೊಳಿಸಿತು; ಹೊಸದಾಗಿ ವಿಮೋಚನೆಗೊಂಡ ದೇಶಗಳ ನೆರವಿಗೆ ಸೋವಿಯತ್ ಒಕ್ಕೂಟ ಧಾವಿಸಿತು. ಈ ದೇಶಗಳ ಕೈಗಾರಿಕೀಕರಣದಲ್ಲಿ, ಶಸ್ತ್ರಾಸ್ತ್ರಗಳನ್ನು ಪಡೆಯಲೂ ಅದು ಅಪಾರ ನೆರವು ನೀಡಿತು.

ಈಗ ವಿಶ್ವದ ನಕಾಶೆಯಿಂದ ಸೋವಿಯತ್ ಒಕ್ಕೂಟ ಮಾಯವಾಗಿರುವುದರಿಂದ ಈ ಕೊಡುಗೆಗಳೇನು ಮಾಯವಾಗುವುದಿಲ್ಲ, ಅದು ನೆನಪಿನಲ್ಲಿ ಅಚ್ಚಳಿಯದೆ ಉಳಿದಿದೆ ಮಾತ್ರವಲ್ಲ, ಸಮಕಾಲೀನ ಇತಿಹಾಸದ ಮೇಲೆ ಈಗಲೂ ಪ್ರಭಾವ ಬೀರುತ್ತಿದೆ.

ತಪ್ಪುಗಳೇಕೆ ಸಂಭವಿಸಿದವು?

ಪೂರ್ವಯುರೋಪಿನ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆ ಮತ್ತು ಸೋವಿಯತ್ ಒಕ್ಕೂಟದ ವಿಘಟನೆಗೆ ಕಾರಣ ಆಗಿನ ಸನ್ನಿವೇಶಗಳಿಗೆ ಮಾರ್ಕ್ಸ್‌ವಾದ-ಲೆನಿನ್ ವಾದಗಳನ್ನು ಅನ್ವಯಿಸುವಲ್ಲಿ ಆದ ವಿಕೃತಿಗಳು ಮತ್ತು ಮಾರ್ಗಚ್ಯುತಿಗಳ ಸಮಾಜವಾದಿ ರಚನೆಯಲ್ಲೂ ಗಂಭೀರ ತಪ್ಪುಗಳನ್ನು ಮಾಡಲಾಯಿತು. ನಿಜ ವಾಸ್ತವತೆಗಳನ್ನು ನಿರ್ಲಕ್ಷಿಸಲಾಯಿತು.

ಸಾಮ್ರಾಜ್ಯಶಾಹಿಗಳ ಸವಾಲನ್ನು ಎದುರಿಸಲು ಶಸ್ತ್ರಾಸ್ತ್ರಗಳಲ್ಲಿ ಸಮಬಲವನ್ನು ಸಾಧಿಸುವಲ್ಲಿ ಗಮನ ನೀಡಿದ್ದು ಸರಿಯಾಗಿಯೇ ಇತ್ತು. ಆದರೆ ಕೈಗಾರಿಕಾ ಬೆಳವಣಿಗೆಗೆ ಅಷ್ಟೇ ಒತ್ತು ನೀಡಲಿಲ್ಲ. ಅಲ್ಲದೆ ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲೂ ಅಪಾರ ಮುನ್ನಡೆಗಳಿಗೆ ಸಾಕಷ್ಟು ಗಮನ ನೀಡಲಿಲ್ಲ.

ಆರ್ಥಿಕ ರಂಗದಲ್ಲಿನ ಪ್ರಶ್ನೆಗಳನ್ನು ನಿರ್ಲಕ್ಷಿಸಲಾದರೆ, ನೀತಿ ನಿರ್ಧಾರಕ ಸಂಸ್ಥೆಗಳಲ್ಲಿ ಜನಗಳು ಭಾಗವಹಿಸುವಂತೆ ಮಾಡಿ ಅವು ನಿಜವಾಗಿಯೂ ಪ್ರಾತಿನಿಧಿಕ ಸ್ವರೂಪ ಪಡೆಯುವ ವಿಷಯದಲ್ಲಿ ಒಂದು ಪ್ರಜಾಪ್ರಭುತ್ವ ವಿರೋಧಿ ನಿಲುವನ್ನು ತಳೆಯಲಾಯಿತು. ಪಕ್ಷ ಮತ್ತು ಪ್ರಭುತ್ವದ ನಡುವೆ ವ್ಯತ್ಯಾಸವನ್ನೇ ಪರಿಗಣಿಸಲಿಲ್ಲ. ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಗಳನ್ನು ಹೆಚ್ಚೆಚ್ಚಾಗಿ ಉಲ್ಲಂಘಿಸಲಾಯಿತು. ಕೇಂದ್ರವಾದದ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಲಾಯಿತು. ಪಕ್ಷದ ಬದಲು ಮುಖಂಡತ್ವವೇ ಆ ಸ್ಥಾನ ಪಡೆಯಿತು. ಕ್ರಮೇಣ ಮುಖಂಡತ್ವದ ಒಂದದುಗೂಡಿದ್ದೇ ಅಧಿಕಾರವಾಯಿತು. ಈ ನ್ಯೂನ್ಯತೆಗಳು, ದೌರ್ಬಲ್ಯಗಳು, ತಪ್ಪುಗಳು ಗಂಭೀರ ಸ್ವರೂಪ ಪಡೆದು ನಂತರದ ಹಿನ್ನಡೆ, ಸೋಲುಗಳಿಗೆ ಕಾಣಿಕೆ ನೀಡಿದವು. ಹೀಗೆ ಸಮಾಜವಾದಿ ವ್ಯವಸ್ಥೆ ಅಪಾರ ಸಾಧನೆಗಳಿದ್ದರೂ ಸಮಾಜವಾದದ ರಚನೆಯಲ್ಲಿನ ಈ ನಕಾರಾತ್ಮಕ ಅಂಶಗಳು ಕೊನೆಗೆ ಸೋವಿಯತ್ ಒಕ್ಕೂಟದ ಮತ್ತು ಪೂರ್ವ ಯುರೋಪಿನ ಸಮಾಜವಾದಿ ಆಡಳಿತಗಳ ವಿಘಟನೆಗೆ ಕಾರಣವಾದವು.

ಬಂಡವಾಳಶಾಹಿಗೆ 300 ವರ್ಷಗಳಿಗಿಂತಲೂ ಹೆಚ್ಚಿನ ಅನುಭವವಿತ್ತು. ಆದರೆ ಸಮಾಜವಾದ ಸಂಪೂರ್ಣ ಹೊಸದಾದ, ಹಿಂದೆಂದೂ ಕಾಣದ ಪರಿಕಲ್ಪನೆ. ಈ ಹಿನ್ನೆಲೆಯಲ್ಲಿ ಸೋವಿಯತ್ ಒಕ್ಕೂಟದ ಸಾಧನೆಗಳು ನಿಜಕ್ಕೂ ಅಲ್ಲಿಯ ಶ್ರಮಜೀವಿಗಳು ಸಾಧಿಸಿದ ಅದ್ಭುತ. ಅಥವಾ ಬಿಟ್ಟುಹೋದ ಪಾಠಗಳು, ಅದರ ಅಳಿಸಲಾಗದ ಪ್ರಭಾವ ಇಡೀ ಮಾನವಕುಲದ ಆಸ್ತಿ.

ಇಂದಿನ ವಾಸ್ತವತೆ

ಒಂದು ಶೋಷಕ ವ್ಯವಸ್ಥೆಯ ಸಾರಾಂಶವಾದ ಹಸಿವು, ಬಡತನ, ದಾರಿದ್ರ್ಯ ಬಂಡವಾಳಶಾಹಿಯನ್ನು ಮತ್ತೆ ಅಪ್ಪಿಕೊಂಡ ಈ ದೇಶಗಳನ್ನು ದುರುಗುಟ್ಟಿಕೊಂಡು ನೋಡುತ್ತಿವೆ. ತಾವೇನನ್ನು ಕಳಕೊಂಡೆವು ಎಂಬ ಅರಿವು ಪೂರ್ವಯುರೋಪಿನ ದೇಶಗಳಲ್ಲೂ, ಸೋವಿಯತ್ ಒಕ್ಕೂಟದ ವಿವಿಧ ಗಣತಂತ್ರಗಳಲ್ಲೂ ಜನರು ಅರಿಯಲಾರಂಭಿಸಿದ್ದಾರೆ. ಜನ ಹೋರಾಟಕ್ಕಿಳಿದಿದ್ದಾರೆ. ಈ ದೇಶಗಳ ಆಡಳಿತಗಳು ಹೆಚ್ಚೆಚ್ಚು ಪ್ರತಿರೋಧ ಎದುರಿಸುತ್ತಿದೆ. ಸತತ ಸಾಮ್ರಾಜ್ಯಶಾಹಿ ಹಲ್ಲೆಗಳೆದುರು ಶರಣಾದ ಪಕ್ಷಗಳು ಈಗ ಮತ್ತೆ ಗುಂಪುಗೂಡಲಾರಂಭಿಸಿವೆ. ಹೊಸ ಸವಾಲುಗಳನ್ನು ಕೈಗೆ ಎತ್ತಿಕೊಂಡಿವೆ. ಜನ ಮತ್ತೆ ಕಮ್ಯುನಿಸ್ಟ್ ಪಕ್ಷಗಳಲ್ಲಿ ವಿಶ್ವಾಸ ತೋರಲಾರಂಭಿಸಿದ್ದಾರೆ. ರಶ್ಯನ್ ಒಕ್ಕೂಟದಲ್ಲಿ ಈಗ ಕಮ್ಯುನಿಸ್ಟ್ ಪಕ್ಷ ಅತಿದೊಡ್ಡ ಸಂಘಟಿತ ರಾಜಕೀಯ ಶಕ್ತಿ.

ಸಮಾಜವಾದ ಅಸ್ತಿತ್ವದಲ್ಲಿರುವ ದೇಶಗಳಾದ ಚೀನಾ, ಕ್ಯೂಬಾ, ವಿಯೆಟ್ನಾಂ, ಲಾವೋಸ್ ಮತ್ತು ಡಿ.ಪಿ.ಆರ್. ಕೊರಿಯಾದಲ್ಲಿ ಅಲ್ಲಿನ ಆಳುವ ಪಕ್ಷಗಳು ಹಿಂದಿನ ತಪ್ಪುಗಳಿಂದ ಪಾಠ ಕಲಿತು ತಂತಮ್ಮ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ತಮಗೆ ಸರಿಕಂಡಂತೆ ಸೂಕ್ತ ಹಾಗೂ ಸಾಕಷ್ಟು ಬದಲಾವಣೆಗಳನ್ನು ತರುತ್ತಿವೆ. ಸಮಾಜವಾದದ ಏಕೈಕ ಮಾರಿಯೆಂಬುದು ಇಲ್ಲ ಎಂಬುದನ್ನು ಈಗ ಎಲ್ಲರೂ ಒಪ್ಪುತ್ತಾರೆ. ಪ್ರತಿಯೊಂದು ದೇಶವೂ ತನ್ನಲ್ಲಿನ ನಿರ್ದಿಷ್ಟ ಪರಿಸ್ಥಿತಿಗಳು, ಉತ್ಪಾದಕ ಶಕ್ತಿಗಳ ಬೆಳವಣಿಗೆಯ ಮಟ್ಟ ಮತ್ತು ವರ್ಗಬಲಾಬಲಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮದೇ ದಾರಿಯನ್ನು ಹುಡುಕಿಕೊಳ್ಳಬೇಕು.

ಚೀಣೀ ಉದಾಹರಣೆಗೆ ಕಡಿಮೆ ಅಭಿವೃದ್ಧಿ ಹೊಂದಿದ ಒಂದು ದೇಶದಲ್ಲಿ ಸಮಾಜವಾದಿ ರಚನೆಯ ಬಗ್ಗೆ ಇನ್ನಷ್ಟು ಕಾಣಿಕೆ ನೀಡಿದೆ. ಮೂಲಭೂತ ನೀತಿಗಳನ್ನು ಪರಿಶೀಲಿಸುತ್ತಾ ಚೀಣಿಯರು ಉತ್ಪಾದಕ ಶಕ್ತಿಗಳ ಬೆಳವಣಿಗೆಗೆ ಒತ್ತು ನೀಡಿದ್ದಾರೆ. ಆದರೆ ಸಮಾಜವಾದದ ವಿಜಯಕ್ಕೆ ಮೂರು ನೀತಿಗಳು ಅಗತ್ಯ - ಕಮ್ಯುನಿಸ್ಟ್ ಪಕ್ಷದ ನೇತೃತ್ವ, ರೈತ-ಕಾರ್ಮಿಕರ ಸಖ್ಯತೆ ಮತ್ತು ಶ್ರಮಜೀವಿ ವರ್ಗದ ಸರ್ವಾಧಿಕಾರ. ಎಲ್ಲರೂ ಮಾರ್ಕ್ಸ್‌ವಾದ - ಲೆನಿನ್‌ವಾದವನ್ನೇ ಆಧರಿಸಿದರೂ ತಂತಮ್ಮ ಅನುಭವಗಳು ಮತ್ತು ಸ್ಥಳೀಯ ಪರಿಸ್ಥಿತಿಗಳನ್ನು ಗಮನಕ್ಕೆ ತಗೊಳ್ಳುತ್ತಾರೆ. ಚೀಣಾದಲ್ಲಿ ಮಾವೋ ಝು ಡೊಂಗ್ ವಿಚಾರ - ಡೆಂಗ್ ಕ್ಸಿಯಾವೊಪಿಂಗ್ ಸಿದ್ಧಾಂತ; ಕೊರಿಯನ್ನರಿಗೆ ಚುಜೆ ವಿಚಾರ ; ವಿಯೆಟ್ನಾಮಿಯರಿಗೆ ಹೊಚಿ ಮಿನ್; ಇತರರಿಗೆ ತಮ್ಮ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾದ ತಮ್ಮದೇ ಮಾದರಿಗಳು.

1991 ರ ಪ್ರಳಯಾಂತಕ ಘಟನೆಗಳೊಂದಿಗೆ ಕೇಳಿಬಂದ ಸಮಾಜವಾದ ಅಳಿಯಿತು, ಕಮ್ಯುನಿಸಂ ಸತ್ತಿತು ಎಂಬ ಘೋಷಣೆಗಳ ಅಬ್ಬರದ ಪ್ರಚಾರವನ್ನು ಈಗ ಯಾರೂ ನಂಬುತ್ತಿಲ್ಲ. ಬಂಡವಾಳಶಾಹಿ ಉತ್ತರ ಅಲ್ಲ ಎಂದು ಹಿಂದಿನ ಸೋವಿಯತ್ ಗಣತಂತ್ರಗಳ, ಪೂರ್ವಯುರೋಪಿನ ದೇಶಗಳ ಜನರು ಅರಿಯುತ್ತಿದ್ದಾರೆ.

ಇತರ ದೇಶಗಳಲ್ಲಿ ಸಮಾಜವಾದವನ್ನು ಬುಡಮೇಲು ಮಾಡುವ ಸಾಮ್ರಾಜ್ಯಶಾಹಿ ಕನಸು ಫಲಿಸಲಿಲ್ಲ, ಮಾನವಕುಲದ ಕಾಲು ಭಾಗ ಈಗಲೂ ಸಮಾಜವಾದಿ ದೇಶಗಳಲ್ಲಿ ಜೀವಿಸುತ್ತಿದ್ದಾರೆ - ಚೀನಾ, ವಿಯೆಟ್ನಾಂ, ಕ್ಯೂಬಾ, ಕೊರಿಯಾ ಮತ್ತು ಲಾವೋಸ್‌ನಲ್ಲಿ. ಇವುಗಳಲ್ಲಿ ಕೆಲವು ಅತ್ಯಂತ ಹಿಂದುಳಿದ ಆರ್ಥಿಕಗಳಲ್ಲಿ ಸೇರಿದ್ದವು. ಅಮೆರಿಕಾದ ಕರಾವಳಿಯಿಂದ ಕೇವಲ 90 ಕಿ.ಮಿ. ದೂರದಲ್ಲಿರುವ ಕ್ಯೂಬಾ ಅಸ್ಥಿರಗೊಳಿಸುವ ಪ್ರಯತ್ನಗಳನ್ನೆಲ್ಲಾ ಸೋಲಿಸಿದೆ. ಸಾಮ್ರಾಜ್ಯಶಾಹಿ ಹೇರಿದ ನಿರ್ಬಂಧ ಈ ದೇಶದ ಜನಗಳ ಮೇಲೆ, ಇನ್ನೂ ಶೈಶವಾವಸ್ಥೆಯಲ್ಲಿದ್ದ ಸಮಾಜವಾದೀ ಪ್ರಭುತ್ವದ ಮೇಲೆ ಅಪಾರ ಕಷ್ಟ-ಸಂಕಷ್ಟಗಳನ್ನು ಹೇರಿದೆ. ಆದರೂ ತಮ್ಮ ಕಷ್ಟಗಳನ್ನು ಪರಿಗಣಿಸದೆ ಕ್ಯೂಬಾದ ಜನತೆ ವಿವಿಧ ವಿಮೋಚನಾ ಆಂದೋಲನಗಳಿಗೆ ಅಪಾರ ನೆರವು ನೀಡಿವೆ - ಅದರ ಪ್ರಭಾವ ಇಡೀ ಲ್ಯಾಟಿನ್ ಅಮೆರಿಕಾ ಮತ್ತು ಕೆರಿಬಿಯನ್ ಪ್ರದೇಶಕ್ಕೆ ಹರಡಿದೆ.

ಮಾರ್ಕ್ಸ್‌ವಾದ-ಲೆನಿನ್ ವಾದ ಈಗಲೂ ತನ್ನ ಸಾಮರಸ್ಯತೆಯನ್ನು ಉಳಿಸಿಕೊಂಡಿದೆ. ಅದು ಈಗಲೂ ಪ್ರಸ್ತುತ ಎಂಬುದನ್ನು ಇತಿಹಾಸ ಸಾಬೀತು ಮಾಡಿದೆ. ಕಮ್ಯುನಿಸ್ಟ್-ವಿರೋಧಿಗಳು, ಪ್ರತಿಗಾಮಿಗಳು ಎಷ್ಟು ಭೀಕರವಾಗಿ ಧಾಳಿ ಮಾಡಿದರೂ ಮಹಾನ್ ಅಕ್ಟೋಬರ್ ಕ್ರಾಂತಿಯ, ಮೊದಲ ಸಮಾಜವಾದಿ ಪ್ರಭುತ್ವದ ಸ್ಥಾಪನೆಯ ಪಥ ಪ್ರದರ್ಶಕ ಘಟನೆಯ ಮಹತ್ವವನ್ನು ಅಳಿಸಿಹಾಕುವ ಪ್ರಯತ್ನದಲ್ಲಿ ಇನ್ನು ಮುಂದೆಯೂ ವಿಫಲವಾಗುತ್ತಾರೆ.

○

ಜನವಾದಿಗೆ 20 ರ ಸಂಭ್ರಮ ವಿಶಾಖಪಟ್ಟಣಂ ನಲ್ಲಿ 6ನೇ ರಾಷ್ಟ್ರೀಯ ಸಮ್ಮೇಳನ

ಮಹಿಳಾ ಚಳುವಳಿಯ ಹಾದಿಯಲ್ಲಿ ದಣಿವರಿಯದ ಹೆಜ್ಜೆ ಹಾಕುತ್ತಿರುವ ಜನವಾದಿಗೆ ಈಗ 20 ವರ್ಷ. ದೇಶದುದ್ದಗಲಕ್ಕೂ ಅಳಿಸಲಾಗದ ಹೆಜ್ಜೆಗುರುತುಗಳನ್ನು ಮೂಡಿಸಿದ ಸಂಘಟನೆ ತನ್ನ 6ನೇ ರಾಷ್ಟ್ರೀಯ ಸಮ್ಮೇಳವನ್ನು ಇದೇ ನವೆಂಬರ್ 24 ರಿಂದ 27 ರ ವರೆಗೆ ಆಂಧ್ರ ಪ್ರದೇಶದ ವಿಶಾಖಪಟ್ಟಣಂ ನಲ್ಲಿ ನಡೆಸುತ್ತಿದೆ.

1980 ರಲ್ಲಿ ಪ್ರಥಮ ಸಮ್ಮೇಳನವನ್ನು ಮದ್ರಾಸಿನಲ್ಲಿ ಉದ್ಘಾಟಿಸಿದ, ಮಹಿಳಾ ನಾಯಕಿ, ಪ್ರಗತಿಪರ ಚಿಂತಕಿ ವೀಣಾ ಮುಜುಂದಾರ ಈ ಸಮ್ಮೇಳನದ ಉದ್ಘಾಟಕಿ ಎನ್ನುವುದು ವಿಶೇಷ.

ರಾಷ್ಟ್ರದ ಎಲ್ಲ ರಾಜ್ಯಗಳಿಂದ 800 ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳುವ ಈ ಸಮ್ಮೇಳನದಲ್ಲಿ ಎಲ್ಲ ರಾಜ್ಯಗಳ ಚಟುವಟಿಕೆಗಳನ್ನು ರೂಪಿಸುವ ಪ್ರದರ್ಶನ ಮತ್ತೊಂದು ವಿಶೇಷ.

ಒಟ್ಟು ದೇಶದ ಎಲ್ಲ ಭಾಗಗಳಲ್ಲಿ ಸಂಚರಿಸಿ ದಲಿತರ ಸಮಸ್ಯೆಗಳತ್ತ ಆಳವಾಗಿ ಅಧ್ಯಯನ ಮಾಡಿದ ಪತ್ರಕರ್ತ ಪಿ.ಸಾಯಿನಾಥ ರವರ ಲೇಖನ, ಫೋಟೋ ಗಳ ಸಂಗ್ರಹದ ವಸ್ತು ಪ್ರದರ್ಶನ ನವೆಂಬರ್ 19 ರಿಂದ ಆರಂಭವಾಗಲಿರುವುದು ಸಮ್ಮೇಲನದ ವಿಶಷ ಆಕರ್ಷಣೆ.

ನ.24 ರಂದು ಉದ್ಘಾಟನೆಯಾಗಿ 27 ರಂದು ಬಹಿರಂಗ ಸಭೆಯೊಂದಿಗೆ ಮುಕ್ತಾಯವಾಗುವ ಸಮ್ಮೇಳನ ಹಲವು ರೀತಿಯಲ್ಲಿ ವಿಶೇಷತೆಯನ್ನು ಹೊಂದಿದೆ. ವಿವಿಧ ರೀತಿಯ ಹಿಂಸೆಗಳ ವಿರುದ್ಧ ಹೋರಾಡಿದ 7 ಮಂದಿ ವಿವಿಧ ರಾಜ್ಯಗಳ ಮಹಿಳೆಯರು ಸಮ್ಮೇಳನದಲ್ಲಿ ತಮ್ಮ ಅನುಭವ ಹಂಚಿಕೊಲಿದ್ದಾರೆ.

ಒಟ್ಟರ್ಥದಲ್ಲಿ 20 ರ ಹರೆಯದ ಜನವಾದಿ ತನ್ನೆಲ್ಲ ಅನುಭವದ ಆಧಾರದಲ್ಲಿ ಮುಂದಿನ ದಿನಗಳ ಹೋರಾಟಕ್ಕೆ ಸಜ್ಜಾಗಲಿದೆ.

ಕರ್ನಾಟಕ ಪ್ರತಿನಿಧಿಸಿ 20 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.



ಅಕ್ಕ

ರಾಷ್ಟ್ರೀಯ ಮಹಿಳಾ ನಾಟಕೋತ್ಸವ

ನವೆಂಬರ್ 18-25
ರಂಗಾಯಣ, ಮೈಸೂರು.

ಕರ್ನಾಟಕ ಪ್ರತಿಷ್ಠಿತ ನಾಟಕ ಸಂಸ್ಥೆಯಾದ ರಂಗಾಯಣ ನವೆಂಬರ್ ತಿಂಗಳ 18 ರಿಂದ 25 ರವರೆಗೆ ಮೈಸೂರು ನಗರದಲ್ಲಿ ರಾಷ್ಟ್ರೀಯ ಮಹಿಳಾ ನಾಟಕೋತ್ಸವವನ್ನು ಹಮ್ಮಿಕೊಂಡಿದೆ. ನಾಟಕೋತ್ಸವದ ಕೇಂದ್ರ ಬಿಂದು ಮಹಿಳೆಯಾಗಿದ್ದು, ಆಕೆಯ ಸುತ್ತ ಹೆಣೆದುಕೊಂಡಿರುವ ನಾಟಕಗಳನ್ನು ಈ ನಾಟಕೋತ್ಸವದಲ್ಲಿ ಅಭಿನಯಿಸಲಿದ್ದು, ನಾಟಕೋತ್ಸವಕ್ಕೆ ಅಕ್ಕ ಎಂಬ ಹೆಸರನ್ನು ನೀಡಲಾಗಿದೆ. ಮಹಿಳೆ ಮಗಳಾಗಿ, ಅಕ್ಕನಾಗಿ, ಪತ್ನಿಯಾಗಿ, ತಾಯಿಯಾಗಿ, ಪೋಷಕಳಾಗಿ ತನ್ನ ಪಾತ್ರವನ್ನು ನಿಭಾಯಿಸಿದ್ದು, ಅದರ ಪರಿಚಯವನ್ನು ನೀಡುವ ಉದ್ದೇಶ ಈ ನಾಟಕೋತ್ಸವದ್ದು.

ಮಹಿಳೆಯರ ಸುಪ್ತ ಮನಸ್ಸಿನ ಸಮಸ್ಯೆಗಳು, ಹೋರಾಟಗಳು, ಕನಸುಗಳು, ಆಸೆ-ಆಕಾಂಕ್ಷೆಗಳು ಹಾಗೂ ಸಮಾಜದಲ್ಲಿ ಆಕೆಗೆ ಆಗುತ್ತಿರುವ ಅನ್ಯಾಯ ಹಾಗೂ ಮಹಿಳೆ ಎದುರಿಸಬೇಕಾದ ಸಾಮಾಜಿಕ ಕಟ್ಟುಪಾಡುಗಳನ್ನು ಗಣನೆಗೆ ತೆಗೆದುಕೊಂಡು ಮಹಿಳೆಯ ಸಂಪೂರ್ಣ ಚಿತ್ರಣವನ್ನು ನೀಡುವ ಪ್ರಯತ್ನ ಈ ನಾಟಕೋತ್ಸವದ್ದಾಗಿರುತ್ತದೆ. ಇತಿಹಾಸ ಪ್ರಸಿದ್ಧ ಝಾನ್ಸಿ ಲಕ್ಷ್ಮಿಬಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮನಂತಹ ವ್ಯಕ್ತಿಗಳಿಗಿಂತ ಹೆಚ್ಚಾಗಿ ಈ ನಾಟಕೋತ್ಸವ ಸಾಮಾನ್ಯ ಮಹಿಳೆ-ಮನೆ ಕೆಲಸದಾಕೆ, ದಿನ ಎಣ್ಣಿಸುತ್ತಿರುವ ಮುದುಕಿ, ಕಾಲೇಜಿನ ಹುಡುಗಿ ಹಾಗೂ ಗೃಹಿಣಿಯರ ದೈನಂದಿನ ಸಮಸ್ಯೆಗಳ ಚಿತ್ರಣವನ್ನು ನೀಡುತ್ತದೆ.

ರಾಷ್ಟ್ರಾದ್ಯಂತ ಪ್ರತಿಷ್ಠಿತ ನಾಟಕ ತಂಡಗಳು ಭಾಗವಹಿಸುವ ಈ ಉತ್ಸವದಲ್ಲಿ ಇಪ್ಪತ್ತಕ್ಕೂ ಹೆಚ್ಚು ರಂಗ ನಾಟಕಗಳು, ವಿಚಾರಸಂಕಿರಣಗಳು, ಕಾವ್ಯವಾಚನ, ನಿರ್ದೇಶಕಿ ಹಾಗೂ ನಟಿಯರ ಮುಖಾಮುಖಿ, ಚಿತ್ರ ಪ್ರದರ್ಶನಗಳು ಹಾಗೂ ಪುಸ್ತಕ ಪ್ರದರ್ಶನವನ್ನು ಆಯೋಜಿಸಲಾಗಿದೆ. ಮಹಿಳಾ ಕಾಳಜಿಗಳು ಹಾಗೂ ಮಹಿಳಾ ಅಭಿವ್ಯಕ್ತಿಯನ್ನು ಕುರಿತಂತೆ ಮೂರು ವಿಚಾರ ಸಂಕಿರಣಗಳನ್ನು ಉತ್ಸವದ ಸಂದರ್ಭದಲ್ಲಿ ನಿಯೋಜಿಸಲಾಗಿದೆ.

ರಾಷ್ಟ್ರದ ಖ್ಯಾತ ಲೇಖಕಿಯರಾದ ರಂಗಕರ್ಮಿ, ನಿರ್ದೇಶಕಿ, ನಟಿಯರಾದ ಶ್ರೀಮತಿ ಶಬನಾ ಆಜ್ಮಿ ಕೃಷ್ಣ ಸೋಬ್ತಿ, ನಾದಿರಾ ಬಬ್ಬರ್, ರತಿ ಬಾರ್ತೋಲೋಮ್ಯು, ಪ್ರಖ್ಯಾತ ನಿರ್ದೇಶಕರುಗಳಾದ ಕಾವಲಮ್ ನಾರಾಯಣ ಪಣಿಕ್ಕರ್, ಭಾಗಿರಥೀಬಾಯಿ, ತ್ರಿಪುರಾರಿ ಶರ್ಮ ಹಾಗೂ ರುದ್ರಪ್ರಸಾದ್ ಸೇನ್ ಗುಪ್ತಾ ಅವರುಗಳು ಭಾಗವಹಿಸಲಿದ್ದಾರೆ. ರಾಷ್ಟ್ರದ ಪ್ರಖ್ಯಾತ ರಂಗ ತಂಡಗಳಾದ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ, ಪುಣೆಯ ಥಿಯೇಟರ್ ಅಕಾಡೆಮಿ, ದೆಹಲಿಯ ಜನನಾಟ್ಯ ಮಂಚ, ಬೆಂಗಳೂರಿನ ಥಿಯೇಟರ್ ಕ್ಲಬ್ ಹಾಗೂ ಮುಂಬಯಿಯ ಏಕ್ ದೂತ್, ಅಲ್ಲದೆ ಇನ್ನೂ ಅನೇಕ ತಂಡಗಳು ಈ ನಾಟಕೋತ್ಸವದಲ್ಲಿ ಭಾಗವಹಿಸಲಿವೆ.

ಈ ನಾಟಕೋತ್ಸವದಲ್ಲಿ ಏಕ ಮಹಿಳಾ ಪ್ರದರ್ಶನ ಹಾಗೂ ಬೀದಿ ನಾಟಕಗಳನ್ನು ಸಹ ಆಯೋಜಿಸಿದ್ದು, ಮಹಿಳಾ ಸಶಕ್ತೀಕರಣದ ವರ್ಷವಾಗಿರುವುದರಿಂದ ಪ್ರಶಸ್ತವೆನಿಸಿದೆ. ಈ ನಾಟಕೋತ್ಸವದ ಅಂಗವಾಗಿ ನಡೆಯಲಿರುವ ವಿಚಾರಸಂಕಿರಣ ಹಾಗೂ ವಿವಿಧ ಗೋಷ್ಠಿಗಳಲ್ಲಿ ಹೊರಬರಲಿರುವ ಅಭಿಪ್ರಾಯಗಳು ರಾಷ್ಟ್ರಮಟ್ಟದಲ್ಲಿ ಹೆಚ್ಚಿನ ಚರ್ಚೆಗೆ ಗ್ರಾಸವಾಗುವುದಲ್ಲದೆ ಮಹಿಳೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಹೊಸ ದಿಕ್ಕನ್ನು ತೋರಿಸಿದಂತಾಗುತ್ತದೆ.

ಹೊಸ ಪ್ರಜ್ಞೆ ಬೆಳೆಸುವ 'ಹೆಣ್ಣಲ್ಲವೇ'?

ಪ್ರೊ. ಲಕ್ಷ್ಮಿ ಚಂದ್ರಶೇಖರ್ ಅವರು ಇತ್ತೀಚೆಗೆ ಶಿರಸಿಯಲ್ಲಿ (ಉ.ಕ.ಜಿಲ್ಲೆ) 'ಹೆಣ್ಣಲ್ಲವೇ?' ಏಕವ್ಯಕ್ತಿ ರಂಗಪ್ರಯೋಗ ನಡೆಸಿದರು. ಒಂದು ತಾಸು ನಡೆಯುವ ಈ ರಂಗ ಪ್ರಯೋಗದಲ್ಲಿ ಎಲ್ಲಾ ಪಾತ್ರಗಳನ್ನು ಒಬ್ಬರೇ ನಿರ್ವಹಿಸುವ ಮೂಲಕ ಹೊಸ ಸಾಧ್ಯತೆಗಳ ಕುರಿತು ಯೋಚಿಸುವಂತೆ ಮಾಡಿದ್ದಾರೆ. ಈಗಾಗಲೇ ಸುಮಾರು 65 ಪ್ರದರ್ಶನ ನಡೆಸಿಕೊಟ್ಟ ಪ್ರೊ. ಲಕ್ಷ್ಮಿ ಚಂದ್ರಶೇಖರ್ ಅವರು ಪುರುಷ ಯಜಮಾನ್ಯ ಸಮಾಜದಲ್ಲಿ ಹೆಣ್ಣಿನ ಎಲ್ಲಾ ಆಸೆ-ಆಕಾಂಕ್ಷೆಗಳು ಕಮರಿ ಹೋಗುತ್ತಿರುವ ವಾಸ್ತವದ ಬಗ್ಗೆ ಗಮನ ಸೆಳೆಯುತ್ತಾರೆ.

ಹಾಗೆ ನೋಡಿದರೆ ಪ್ರೊ. ಲಕ್ಷ್ಮಿಯವರು ಇಡೀ ಭಾರತೀಯ ಸಂದರ್ಭದಲ್ಲಿ ಹೇಗೆ ಪುರುಷ ಯಾಜಮಾನ್ಯತೆ ಹಾಸು ಹೊಕ್ಕಾಗಿದೆ, ಹೆಣ್ಣು ತನ್ನ ಭಾವನೆಗಳಿಗೆ ಇಲ್ಲಿ ಅಭಿವ್ಯಕ್ತಿಕೊಡಲಾಗದೆ, ಆರೋಪಿತ ಮೌನಿಯಾಗಿ, ಪತೀವ್ರತೆಯಾಗಿ, ಅಬಲೆಯಾಗಿ ಉಳಿಯುವಂತಾಗಿದೆ ಎಂದು ಉದಾಹರಣೆಯೊಂದಿಗೆ ನಾಟಕದಲ್ಲಿ ವಿವರಿಸುತ್ತಾರೆ. ಎಡಪಂಥೀಯ ಚಿಂತಕರು, ಸ್ತ್ರೀವಾದಿ ವಿಮರ್ಶಕರು ಈಗಾಗಲೇ ಈ ವಿಚಾರವನ್ನು ವಿವಿಧ ಸಂದರ್ಭದಲ್ಲಿ ಪ್ರಸ್ತುತಪಡಿಸಿದ್ದಾರೆ. ಪುರಾಣ, ಮಹಾಕಾವ್ಯ, ಜಾನಪದ ಕತೆಗಳನ್ನು ಅವರ ಚಾರಿತ್ರಿಕ ಚೌಕಟ್ಟಿನಲ್ಲಿಯೇ ವಸ್ತುನಿಷ್ಠವಾಗಿ ವಿಶ್ಲೇಷಿಸುವ ಅನೇಕ ಪಾತ್ರಗಳನ್ನು, ಸನ್ನಿವೇಶಗಳನ್ನು ನಾಟಕದಲ್ಲಿ ಜೋಡಿಸಲು ಪ್ರಯತ್ನಿಸಿದ್ದಾರೆ.

ಇಡೀ ನಾಟಕದಲ್ಲಿ ಕೆರೆಗೆ ಹಾರವಾದ ಭಾಗೀರಥಿ, ರಾಮನಿಂದ ಬೆಂಕಿಗೆ ಆಹುತಿಯಾದ ಸೀತೆ, ತನ್ನೆಲ್ಲಾ ಕನಸುಗಳಿಗೆ ಪಟ್ಟಿಕಟ್ಟಿಕೊಂಡು ಇಚ್ಛಾಕುರುಡಿಯಾದ ಗಾಂಧಾರಿ, ಐದು ಜನ ಗಂಡಸರಿಗೆ ಹಾಸಿಗೆಯಾದ ದ್ರೌಪದಿ, ಯಾರದೋ ಗುರುಕಾಣಿಕೆಗಾಗಿ ವೇಶ್ಯೆಯಾದ ಮಾಧವಿ, 'ಸತಿ' ಹೆಸರಿನಲ್ಲಿ ಬೆಂಕಿಗೆ ದೂಡಲ್ಪಟ್ಟ ರೂಪಾ ಕನ್ವರ್, ತನ್ನ ಮೇಲಾದ ಅನ್ಯಾಯಕ್ಕೆ ಸೇಡು ತೀರಿಸಿಕೊಳ್ಳಲು ಸಂಘಟನೆ ಮತ್ತು ನ್ಯಾಯಾಲಯದ ಮೊರೆ ಹೋದ ಬಾವ್ರಿ..... ಹೀಗೆ ಭಾರತೀಯ ಸಂಸ್ಕೃತಿಯ ಆದರ್ಶ ಮಹಿಳೆಯರೆಂದು ಸಂಘಪರಿವಾರದವರು ಬೊಬ್ಬೆ ಹಾಕುವ ಈ ಹೆಣ್ಣುಗಳು ಇಲ್ಲಿ ಮಾತನಾಡುತ್ತವೆ, ಧೈರ್ಯದಿಂದ ಬಚ್ಚಿಟ್ಟ ಭಾವನೆಗಳು ಸ್ಫೋಟಗೊಳ್ಳುತ್ತವೆ, ಮನುವಾದಿ ಗಂಡಸರನ್ನು ಬೆತ್ತಲೆಗೊಳಿಸುತ್ತದೆ.

ಈ ನಾಟಕ ಪ್ರಾರಂಭ ಆಗುವುದೇ ಮಧ್ಯಮ ವರ್ಗದ ಒಬ್ಬ ಮಹಿಳೆ ಬೆಳಗಿನ ಜಾವ ಕೆಲಸಕ್ಕೆ ತೊಡಗುವ ಮೂಲಕ. ನೆಲ ಗುಡಿಸುವುದು, ಬಟ್ಟೆ ಮಡಿಸಿಡುವುದು, ಸ್ನಾನಕ್ಕೆ ನೀರು (ಗಂಡನಿಗೆ) ಕಾಯಿಸುವುದು, ಮನೆಯವರ ಬಟ್ಟೆ ತೊಳೆಯುವುದು, ಗಂಡು ಮಕ್ಕಳ ಶೂ ಪಾಲಿಶ್ ಮಾಡುವುದು, ಮಕ್ಕಳನ್ನು ಶಾಲೆಗೆ ರೆಡಿ ಮಾಡುವುದು, ತಾನು ಸ್ನಾನ ಮಾಡಿ ಬ್ಯಾಂಕಿಗೆ ಕೆಲಸಕ್ಕೆ ಹೋಗಲು ರೆಡಿ ಆಗಿ ಈ ಬಸ್‌ನ್ನು ಜೋತು ಓಡಾಡುವ ಕಷ್ಟದಿಂದಾಗಿ ಒಂದು ದ್ವಿಚಕ್ರವಾಹನವನ್ನು ತೆಗೆದುಕೊಳ್ಳುವುದೇ ಒಳ್ಳೆಯದು ಎಂಬ ನಿರ್ಣಯಕ್ಕೆ ನಿರೂಪಕಿ ಬರುವವರೆಗೆ ಕೆಲಸದ ಮಧ್ಯೆ-ಮಧ್ಯೆಯೇ ತನ್ನ ಸ್ಥಿತಿಯ ಹಿನ್ನೆಲೆಯಲ್ಲಿ ಮಾತನಾಡುತ್ತಾ ಹೋಗುತ್ತಾಳೆ. ಮಾತಿನ ಮಧ್ಯೆ ಸಮರ್ಥನೆಗೆ ಪುರಾಣ, ಚರಿತ್ರೆ, ವಾಸ್ತವದ ಈ ಎಲ್ಲಾ ಪಾತ್ರಗಳನ್ನು ಬಳಸಿಕೊಳ್ಳುತ್ತಾರೆ.

ಪ್ರತಿಯೊಬ್ಬ ಮಹಿಳೆ ಇಲ್ಲಿ ಒಂದೊಂದು ಸಂದರ್ಭದ, ಒಂದೊಂದು ನಿರ್ದಿಷ್ಟ ಕಾಲಗಟ್ಟದ ಪ್ರತಿನಿಧಿಯಾಗಿ ಬರುತ್ತಾರೆ. ಯಾವ ಕಾಲಘಟ್ಟದಲ್ಲಿಯೂ ಹೆಣ್ಣನ್ನು ಮನುಷ್ಯಳನ್ನಾಗಿ ನೋಡದಿರುವ, ಅವರ ಹೃದಯದಲ್ಲಿ ಆಸೆ-ಆಕಾಂಕ್ಷೆಗಳಿವೆ, ಕಣ್ಣುಗಳಲ್ಲಿ ಕನಸುಗಳಿವೆ ಎಂದು ಆಲೋಚಿಸದಿರುವ ವ್ಯವಸ್ಥೆಯ ಬಗ್ಗೆ ನಿರೂಪಕಿ ಇಲ್ಲಿ ಪ್ರಶ್ನಿಸುತ್ತಾಳೆ. ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಬಗ್ಗೆ ಸಂಸ್ಕೃತಿಯ ಸುವರ್ಣಯುಗದ ಬಗ್ಗೆ ಹೆಮ್ಮೆಯಿಂದ ಬೀಗುವ ಜನ ಯಾಕೆ ಹೆಣ್ಣಿಗೆ ಮಾತನಾಡಲು ಬಿಡುವುದಿಲ್ಲ ಎಂದು ಇಲ್ಲಿ ಪ್ರಶ್ನಿಸುತ್ತಾರೆ. ಒಮ್ಮೆ ಮಾತನಾಡ ಬಿಟ್ಟಿದ್ದರೆ...? ಈ ನಾಟಕವನ್ನು ಆಡುವ ಪರಿಸ್ಥಿತಿ ಬರುತ್ತಿರಲಿಲ್ಲ. ಸಮಾಜ ಪಾರ್ಶ್ವವಾಯು ಪೀಡಿತ ಸ್ಥಿತಿಗೆ ಬರುತ್ತಿರಲಿಲ್ಲ ಎನ್ನುವ ಆಶಯ ವ್ಯಕ್ತಪಡಿಸುತ್ತಾರೆ.

ಈ ನಾಟಕ ಇರುವ ಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತಿರುವಾಗಲೇ ಪರ್ಯಾಯವನ್ನು ಸೂಕ್ಷ್ಮವಾಗಿ ಸೂಚಿಸುತ್ತಾರೆ. ನಿರ್ದೇಶನದ ವೈಫಲ್ಯದಿಂದಾಗಿ ಇದು ಅಸ್ಪಷ್ಟವೂ, ಗೊಂದಲಕಾರಿಯೂ ಆಗಿದೆ. ಇಡೀ ನಾಟಕವೇ ಒಂದು ಪರ್ಯಾಯವನ್ನು ಸೂಚಿಸುವಲ್ಲಿ ಕಲಾತ್ಮಕವಾಗಿ ಸೋತಿದ್ದೆಯಾದರೂ ಅಲ್ಲಿಯ ನಿರೂಪಕಿಯ ಮಾತಿನಲ್ಲಿ, ಪಾತ್ರಗಳು ತಮ್ಮ ಒಳತೋಟಿಗಳನ್ನು ಹೇಳಿಕೊಳ್ಳುವಾಗ ವಾಚ್ಯವಾಗಿ ಆಡುವ ಮಾತುಗಳಲ್ಲಿ ಇದನ್ನು ಗುರುತಿಸಬಹುದು.

ಕೇವಲ ಸಾತ್ವಿಕ ಪ್ರತಿಭಟನೆಗೆ ಮಾತ್ರ ಸೀಮಿತವಾದ ಸೀತೆ, ಗಾಂಧಾರಿ ಮೊದಲಾದವರು ಕಾಲಘಟ್ಟಗಳನ್ನು ದಾಟಿ ಬಾವ್ರಿ ದೇವಿಯ ಸಂದರ್ಭಕ್ಕೆ ಬರುವಾಗ ಆಕೆ ತನ್ನ ಮೇಲಾದ ಅನ್ಯಾಯ ಪ್ರತಿಭಟಿಸಲು ಸಂಘಟನೆ ಮತ್ತು ನ್ಯಾಯಾಲಯದ ಮೊರೆ ಹೋಗುತ್ತಾಳೆ. ಸ್ವಾತಂತ್ರ್ಯ, ಸಮಾನತೆಗಳಿರುವ ಒಂದು ನಾಡಿನ ಕನಸನ್ನು ಕಾಣುತ್ತಾಳೆ. ಮಹಿಳಾ ಸಂಘ ಸೇರಿದ ಮೇಲೆ ನನಗೆ ಪ್ರತಿಭಟಿಸುವ ಧೈರ್ಯ ಬಂತು, ನನ್ನಲ್ಲಿ ಅದು ಹೊಸ ಪ್ರಜ್ಞೆಯನ್ನು ಬೆಳೆಸಿತು, ನನ್ನ ಮತ್ತು ನನ್ನಂಥವರ ಬಿಡುಗಡೆಗೆ ಅನಿವಾರ್ಯವಾದ ದಾರಿ ಸಂಘಟನೆಯೇ ಎಂದು ಹೇಳುತ್ತಾ ಅಂತಿಮವಾಗಿ ನ್ಯಾಯಾಲಯದಲ್ಲಿ ನ್ಯಾಯಕ್ಕಾಗಿ ಹೋರಾಡುವ ಮಾತುಗಳು ಬಾವ್ರಿ ದೇವಿಯ ಮೂಲಕ ಹೇಳಿಸುತ್ತಾರೆ. ಆದರೆ ಪ್ರಶ್ನೆ ಎದುರಾಗುವುದು ನ್ಯಾಯಾಲಯದಿಂದ ಇಡೀ ವ್ಯವಸ್ಥೆಯನ್ನು ಬದಲಿಸಲು ಸಾಧ್ಯವೆ? ನ್ಯಾಯಾಲಯ ಕೂಡ ಪುರುಷ ಯಾಜಮಾನ್ಯ ವರ್ಗಸಮಾಜದ ಒಂದು ಅಂಗ ಅಲ್ಲವೇ? ಒಳಗಿರುವ ನ್ಯಾಯಾಧೀಶರೂ, ಹೊರಗಿರುವ ನ್ಯಾಯವಾದಿಗಳೂ ಈ ಗರಡಿಮನೆಯಲ್ಲೇ ತಯಾರಾದವರಲ್ಲವೇ? ಅವರಲ್ಲೂ ಹೊಸ ಪ್ರಜ್ಞೆ ಬೆಳೆಸಲು ಏನು ಮಾಡೋಣ? ಮಾರ್ಗ ಯಾವುದು?

ಒಂದು ಕಲಾಕೃತಿಯಾಗಿ ಇದು ಯಶಸ್ವಿಯಾಗಿದೆ ಎಂದೇನೂ ಹೇಳುವಂತಿಲ್ಲ. ಒಂದೊಂದು ಸ್ವಾತಂತ್ರ ನಾಟಕವೇ ಆಗಬಹುದಾದ 6-7 ಪಾತ್ರಗಳನ್ನು 1 ಗಂಟೆಯೊಳಗೆ ಒಂದು ಎಳೆಗೆ ಸುರಿಯುವ ಸಾಹಸ ಮಾಡಿದ್ದಾರೆ. ಒಮ್ಮೊಮ್ಮೆ ಪ್ರಧಾನ ಎಳೆಗೆ ಸಿಗಲಾರದೆ, ಸಿಕ್ಕರೂ ಸುಂದರಮೂರ್ತಿಯಾಗದೆ ನಿಂತುಬಿಡುತ್ತದೆ. ಇದು ಸ್ಕ್ರಿಪ್ಟ್‌ನ ಸಮಸ್ಯೆಯೂ ಹೌದು. ಮತ್ತು ನಿರ್ದೇಶಕರ ಸಮಸ್ಯೆಯೂ ಹೌದು. ಪಾತ್ರಪೋಷಣೆ, ತಾರ್ಕಿಕ ಬೆಳವಣಿಗೆ, ಸಂಗೀತ, ಮುಖವಾಡ ಬಳಕೆಯ ತಂತ್ರದಲ್ಲಿ ಸಾಕಷ್ಟು ನೈಪುಣ್ಯತೆ ಪಡೆಯಬೇಕಾಗಿದೆ.

ಈ ನಾಟಕದ ಪ್ರಯೋಗದ ನಂತರದ ಸಂವಾದ ಹೆಚ್ಚು ಚುರುಕಾಗಿತ್ತು. ಅಥವಾ ನಾಟಕದ ಮುಂದುವರಿದ ಭಾಗವೇ ಆಗಿತ್ತು. ಅನೇಕ ಗಂಡಸರು ತಮ್ಮ 'ಹೆಗಲು ಮುಟ್ಟಿ' ನೋಡಿಕೊಂಡರು. ಕೆಲವು ಗಂಡಸರು ತಮಗೆ ಅವಮಾನವಾದಂತೆ ಭಾರತೀಯ ಸಂಸ್ಕೃತಿಯನ್ನು ನಾಶ ಮಾಡುವ ಖಳನಾಯಕಿ ಇವರು ಎಂದು ಹೇಳುವ ರೀತಿಯಲ್ಲಿ ಪ್ರಶ್ನಿಸಿದರೆ, ಇನ್ನು ಕೆಲವರು ಇನ್ನಷ್ಟು ವಿಷಯ ಕೆದಕಲು ಪ್ರಶ್ನಿಸಿದರು. ಇದು ಪ್ರಯೋಗ ಪರಿಣಾಮ ಬೀರಿದೆ ಎನ್ನುವುದನ್ನು ತೋರಿಸಿಕೊಡುತ್ತಿತ್ತು.

ನಾಟಕ ಮುಗಿದ ಮೇಲೆ ಮೈಮೇಲೆ ತೊಣಚಿ ಬಿದ್ದವರಂತೆ ಒದ್ದಾಡುತ್ತಿದ್ದ 'ಪತ್ರಕರ್ತ' ರೊಬ್ಬರು ಇದು ಅತ್ಯಂತ ಕೆಟ್ಟ ಪ್ರಯೋಗವೆಂದೂ, ಇದನ್ನು ಪುರುಷರ್‍ಯಾಕೆ ಮಹಿಳೆಯರೂ ಒಪ್ಪಲು ಸಾಧ್ಯವಿಲ್ಲವೆಂದು ಗೋಗರೆಯುತ್ತಾ, ಇದಕ್ಕೆ ಸಾಕ್ಷಿಯಾಗಿ ಇವರನ್ನೇ ಕೇಳೋಣ ಎಂದು ಪಕ್ಕದಲ್ಲಿರುವ ಮಹಿಳೆಯೊಬ್ಬರನ್ನು ಕೇಳಿಯೇಬಿಟ್ಟರು. ತಕ್ಷಣ ಮಹಿಳೆ 'ನಾಟಕ ತುಂಬಾ ಪರಿಣಾಮಕಾರಿಯಾಗಿತ್ತು. ದಿನನಿತ್ಯ ನಾವು ಅನುಭವಿಸುತ್ತಿರುವ ಸ್ಥಿತಿಯನ್ನು, ಬಾಯ್ಬಿಟ್ಟು ಹೇಳಲಾಗದ ಸಂಗತಿಗಳನ್ನು ಅವರು ಧೈರ್ಯವಾಗಿ ಹೇಳಿದ್ದಾರೆ. ಇದನ್ನು ನೋಡಿ ತುಂಬಾ ಖುಷಿಯಾಯಿತು" ಎಂದ ಅವರು ಪತ್ರಕರ್ತರಿಗೆ ಕೊಟ್ಟ ಉತ್ತರ ನಾಟಕದ ವಿಮರ್ಶೆಯೂ ಹೌದು.

- ವಿಠ್ಠಲ ಭಂಡಾರಿ

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH